# ಮೂಲ ಶಿಕ್ಷಣದಲ್ಲಿ ಡಿಪ್ಲೋಮಾ
# (ಡಿ.ಎಲ್.ಇಡಿ)

## ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಣ ಸಂಬಂಧಿ ಕಾರ್ಯ ಪ್ರಕ್ರಿಯೆಗಳು

## ವಿಭಾಗ –3
## ಕಾರ್ಯ ಶಿಕ್ಷಣ


ರಾಷ್ಟ್ರೀಯ ಮುಕ್ತ ವಿದ್ಯಾಲಯ ಶಿಕ್ಷಣ ಸಂಸ್ಥೆ
ಎ–24/25, ಇನ್‌ಸ್ಟಿಟ್ಯೂಷನಲ್ ಏರಿಯಾ, ಸೆಕ್ಟರ್–62 ನೋಯಿಡಾ,
ಗೌತಮ ಬುದ್ಧ ನಗರ, ಉತ್ತರ ಪ್ರದೇಶ –201309
ಜಾಲತಾಣ : www.nios.ac.in

<table>
<tr><th colspan="6">ಪರಿಣಿತರ ಸಮಿತಿ</th></tr>
<tr>
<td colspan="2">ಡಾ॥ ಸಿತಾಂಶು ಎಸ್.ಜೆನಾ<br>ಅಧ್ಯಕ್ಷರು, ಎನ್.ಐ.ಓ.ಎಸ್. ನೊಯಿಡಾ<br>ಶ್ರೀ ಬಿ.ಕೆ. ತ್ರಿಪಾಠಿ<br>ಭಾ.ಆ.ಸೆ. ಪ್ರಮುಖ ಸಚಿವರು,<br>ಮಾನವ ಸಂಪನ್ಮೂಲ ಅಭಿವೃದ್ಧಿ ವಿಭಾಗ,<br>ಝಾರ್ಖಂಡ್ ಸರ್ಕಾರ, ರಾಂಚಿ<br>ಪ್ರೋ ಎ.ಕೆ. ಶರ್ಮಾ<br>ಭೂತಪೂರ್ವ ನಿರ್ದೇಶಕರು ಎನ್‌ಸಿಇಆರ್‌ಟಿ<br>ನವದೆಹಲಿ<br>ಪ್ರೋ.ಎಸ್.ವಿ.ಎಸ್.ಚೌಧರಿ<br>ಭೂತಪೂರ್ವ ಉಪಾಧ್ಯಕ್ಷರು ಎನ್.ಸಿಟಿ.ಇ.<br>ನವದೆಹಲಿ<br>ಪ್ರೋ.ಸಿ.ಬಿ.ಶರ್ಮಾ<br>ಶಾಲಾ ಶಿಕ್ಷಣ ಇಂದಿರಾಗಾಂಧಿ ರಾಷ್ಟ್ರೀಯ<br>ಮುಕ್ತ ವಿಶ್ವವಿದ್ಯಾಲಯ, ನವದೆಹಲಿ<br>ಪ್ರೋ. ಎಸ್.ಸಿ. ಅಗರ್‌ಕರ್<br>ಪ್ರಾಧ್ಯಾಪಕರು ಹೋಲಿಭಾಭಾ ವಿಜ್ಞಾನ ಶಿಕ್ಷಣ<br>ಕೇಂದ್ರ, ಮುಂಬಯಿ</td>
<td colspan="2">ಪ್ರೋ.ಸಿ.ಎಸ್. ನಾಗರಾಜು<br>ಭೂತಪೂರ್ವಪ್ರಾಚಾರ್ಯರು<br>ಆರ್‌ಐ.ಇ. (ಎನ್.ಸಿಇಆರ್‌ಟಿ) ಮೈಸೂರು<br>ಪ್ರೋ. ಕೆ.ದೊರೈಸ್ವಾಮಿ<br>ಭೂತಪೂರ್ವ ಮುಖ್ಯಸ್ಥರು, ಶಿಕ್ಷಕರ ಶಿಕ್ಷಣ ಮತು<br>ವಿಸ್ತರಣಾ ವಿಭಾಗ, ಎನ್‌ಸಿಇಆರ್ಟಿ ನವದೆಹಲಿ<br>ಪ್ರೊ. ಬಿ. ಫಾಲಚಂದ್ರ<br>ಭೂತಪೂರ್ವ ಮುಖ್ಯಸ್ತರು, ಶಿಕ್ಷಣ ವಿಭಾಗ,<br>ಹಾಗೂ ಬೋಧನಾ ವಿಭಾಗದ ವರಿಷ್ಟರು ಆರ್‌ಇಐ<br>(ಎನ್‌ಸಿಇಆರ್‌ಟಿ) ಮೈಸೂರು<br>ಪ್ರೋ. ಕೆ.ಕೆ. ವಸಿಷ್ಠ<br>ಭೂತಪೂರ್ವ ಮುಖ್ಯಸ್ಥರು, ಡಿಇಇ,<br>ಎನ್‌ಸಿಇಜರ್‌ಟಿ, ನವದೆಹಲಿ<br>ಪ್ರೊ. ವಸುಧಾ ಕಾಮತ್<br>ಉಪಕುಲಪತಿಗಳು ಎಸ್‌ಎನ್‌ಡಿಟಿ ಮಹಿಳಾ<br>ವಿಶ್ವವಿದ್ಯಾಲಯ, ಮುಂಬಯಿ</td>
<td colspan="2">ಡಾ. ಹೂಮ ಮಸೂದ್<br>ಶಿಕ್ಷಣ ತಜ್ಞರು ಯುನಿಸ್ಕೋ ನವದೆಹಲಿ<br>ಪ್ರೊ॥ ಪವನ್ ಸುಧೀರ್<br>ಮುಖ್ಯಸ್ಥರು, ಕಲಾ ಮತ್ತು ಕಲಾತ್ಮಕ ಶಿಕ್ಷಣ<br>ವಿಭಾಗ, ಎನ್‌ಸಿಇಆರ್‌ಟಿ, ನವದೆಹಲಿ<br>ಶ್ರೀ ಬಿನಯ ಪಟ್ನಾಯಕ್<br>ಶಿಕ್ಷಣ ತಜ್ಞರು, ಯುಎನ್‌ಐಸಿಇಎಫ್,<br>ರಾಂಚಿ<br>ಡಾ. ಕುಲದೀಪ್ ಅಗರವಾಲ್<br>ನಿರ್ದೇಶಕರು (ಶೈಕ್ಷಣಿಕ) ಎನ್‌ಐಓಎಸ್,<br>ನೊಯಿಡಾ<br>ಪ್ರೋ. ಎಸ್.ಸಿ. ಪಾಂಡಾ<br>ವರಿಷ್ಠ ಸಮಾಲೋಚಕರು (ಶೈಕ್ಷಣಿಕ)<br>ಡಾ॥ ಕುಜನ್ ಬಲಾ<br>ಕಾರ್ಯನಿರ್ವಾಹಣಾಧಿಕಾರಿಗಳು (ಶೈಕ್ಷಣಿಕ)<br>ಎನ್.ಐ.ಓ.ಎಸ್. ನೊಯಿಡಾ.</td>
</tr>
<tr><th colspan="6">ಪಠ್ಯಕ್ರಮ ಸಂಯೋಜಕರು ಮತ್ತು ಸಂಪಾದಕರು</th></tr>
<tr><td colspan="6">ಪ್ರೋ॥ ಎಂ.ಎಂ. ಮೊಹಂತಿ ಭೂತಪೂರ್ವ ನಿರ್ದೇಶಕರು ಎಸ್‌ಐಇಎಂಎಟಿ, ಒಡಿಸಾ</td></tr>
<tr><th colspan="6">ಪಠ್ಯಲೇಖಕರು</th></tr>
<tr>
<td colspan="2">ಡಾ॥ ಮೊಹಿತ್ ಮೋಹನ್ ಮೊಹಂತಿ<br>ನಿವೃತ್ತ ನಿರ್ದೇಶಕರು ಎಸ್‌ಐಇಎಂಎಟಿ<br>ಒಡಿಶಾ<br>ಡಾ॥ ಪರಶುರಾಮ್ ರಾಯಸಿಂಗ್<br>ನಿವೃತ್ತ ರೀಡರ್ (ಶಿಕ್ಷಣ)<br>ಎನ್.ಡಿ.ಡ್ಲ್ಯೂ. ಅಧ್ಯಾಪಕ ಶಿಕ್ಷಣ<br>ಮಹಾವಿದ್ಯಾಲಯ, ಭುವನೇಶ್ವರ<br>ಶ್ರೀ ಸುದರ್ಶನ ಸಂತಾರ<br>ವರಿಷ್ಟ ಅಧ್ಯಾಪಕ ಶಿಕ್ಷಕರು<br>ಜಿಲ್ಲಾ ಸಂಪನ್ಮೂಲ ಕೇಂದ್ರ ಸೊನೆಪುರ<br>ಶ್ರೀ ತಪಸ್ ಕುಮಾರ್ ನಾಯಕ್<br>ವರಿಷ್ಟ ಅಧ್ಯಾಪಕರ ಶಿಕ್ಷಕರು<br>ಅಧ್ಯಾಪಕ ಶಿಕ್ಷಣ ನಿರ್ದೇಶಾನಾಲಯ ಮತ್ತು<br>ಎಸ್‌ಸಿಇಆರ್‌ಟಿ, ಒಡಿಶಾ, ಭುವನೇಶ್ವರ<br>ಶ್ರೀಮತಿ. ಸುಚಪ್ರವಾ ಮೊಹಾಪಾತ್ರ<br>ವರಿಷ್ಟ ಅಧ್ಯಾಪಕ ಶಿಕ್ಷಕರು<br>ಡಿ.ಐ.ಇ.ಟಿ. ಕಟಕ್ ನರಸಿಂಗಪುರ್</td>
<td colspan="2">ಡಾ॥ ಜೆ.ಸಿ. ನಂದಾ<br>ಮುಖ್ಯಸ್ಥರು (ಶಿಕ್ಷಣ) , ಬಿ.ಜೆ.ಬಿ ಸ್ವಾಯುಕ್ತ<br>ಮಹಾವಿದ್ಯಾಲಯ ಭುವನೇಶ್ವರ<br>ಶ್ರೀ ಕಾರ್ತಿಕೇಶ್ವರ ಜಿಹರಾ<br>ನಿವೃತ್ತವರಿಷ್ಠ ಅಧ್ಯಾಪಕರ ಶಿಕ್ಷಕರು<br>ಡಿ.ಐ.ಇ.ಟಿ ಕೊರಾಪುಟ್ ಜೆಪುರ್<br>ಶ್ರೀಮತಿ. ಲಿಪಿಕಾ ಸಾಹು<br>ವರಿಸ್ಠ ಅಧ್ಯಾಪಕ ಶಿಕ್ಷಕರು<br>ಡಿ.ಐ.ಇ. ಟಿ. ನಯಾಘರ್ ರಜಸುನಖಾಲ<br>ಶ್ರೀ ಪೂರ್ಣಚಂದ್ರಬ್ರಹ್ಮ<br>ವರಿಷ್ಠ ಅಧ್ಯಾಪಕರ ಶಿಕ್ಷಕರು<br>ಜಿಲ್ಲಾ ಸಂಪನ್ಮೂಲ ಕೇಂದ್ರ ಚೌದ್ಧ<br>ಡಾ॥ ರಾಜೇಂದ್ರ ಕುಮಾರ ನಾಯಕ್<br>ಉಪನ್ಯಾಸಕರು ಶಿಕ್ಷಣ ವಿಭಾಗ<br>ರೆರ್ವೆಷಾ, ವಿಶ್ವವಿದ್ಯಾಲಯ ಕಟಕ್</td>
<td colspan="2">ಶ್ರೀಮತಿ ಚಂದ್ರಿಕಾ ನಾಯಕ್<br>ವರಿಷ್ಠ ಅಧ್ಯಾಪಕರ ಶಿಕ್ಷಕರು<br>ಡಿ.ಐ.ಇಟಿ. ನವಘರ್ ರಾಜಸುಂಬಾಲ<br>ಡಾ ಶ್ರೀಮತಿ. ಸುಸಂಧ್ಯಾ ಮೊಹಂತಿ<br>ಪ್ರಾಂಶುಪಾಲರು ಡಿ.ಐ.ಇಟಿ. ಅಂಗುಲ್<br>ಧೆಂಡಿಪಾಡ<br>ಶ್ರೀ ಪ್ರಶಾಂತಕುಮಾರ ರಥ್<br>ಪ್ರಾಂಶುಪಾಲರು ಡಿ.ಐ.ಇಟಿ. ಪುರಿ<br>ಡಾ॥ ದುರ್ಗಾಚರಣ ರಾಣಾ<br>ನಿವೃತ್ತರೀಡರ್ (ಶಿಕ್ಷಣ)<br>ಭದ್ರಕ್ ಸ್ವಾಯುತ್ತ ಮಹಾವಿದ್ಯಾಲಯ ಭದ್ರಕ್<br>ಶ್ರೀ ಅನಂತ ಕಿಶೋರ ಸ್ವಾರ್ಯಿ<br>ಯೋಜನ ಪ್ರಬಂಧಕರು ಯುವ ಮತ್ತು<br>ಸಾಮಾಜಿಕ ಅಭಿವೃದ್ಧಿ<br>ಕೇಂದ್ರ (ಸಿವೈಎಸ್‌ಡಿ) ಭುವನೇಶ್ವರ</td>
</tr>
<tr><th colspan="3">ವಿಷಯ ಸಂಪಾದಕರು</th><th colspan="3">ಭಾಷಾ ಸಂಪಾದಕರು</th></tr>
<tr>
<td colspan="3">ಡಾ॥ ಸುಶ್ಮಿತಾ ಮಿತ್ರ<br>ಭೂತಪೂರ್ವ ನಿರ್ದೇಶಕರು<br>ಎಸ್‌ಎಸ್‌ಎಸ್. ಎಂಐಒಕೆಎಸ್. ನೋಯಿಡಾ.</td>
<td colspan="3">ಡಾ. ಎ.ಡಿ. ತಿವಾರಿ<br>ಸಂಯುಕ್ತ ಪ್ರಾಧ್ಯಾಪಕರು ಶಿಕ್ಷಣ ಸರ್ವೇಕ್ಷಣ ವಿಭಾಗ<br>ಎನ್‌ಸಿಇಆರ್‌ಟಿ ನವದೆಹಲಿ</td>
</tr>
<tr><th colspan="6">ಕಾರ್ಯಕ್ರಮ ಸಂಯೋಜಕರು</th></tr>
<tr>
<td colspan="2">ಡಾ॥ ಕುಲದೀಪ ಅಗರವಾಲ್<br>ನಿರ್ದೇಶಕರು (ಶೈಕ್ಷಣಿಕ)<br>ಎನ್.ಐ.ಓ.ಎಸ್. ನೊಯಿಡಾ</td>
<td colspan="2">ಪ್ರೋ॥ ಎಸ್.ಪಿ. ಪಾಂಡ<br>ವರಿಷ್ಠ ಸಮಾಲೋಚಕರು (ಅಧ್ಯಾಪಕ ಶಿಕ್ಷಣ)<br>ಶೈಕ್ಷಣಿಕ ವಿಭಾಘ ಎನ್.ಓ.ಎಸ್. ನೊಯಿಡಾ</td>
<td colspan="2">ಡಾ॥ ಕಂರ್ಚ್ ಬಾಲಾ<br>ಕಾರ್ಯಪಾಲಕ ಅಧಿಕಾರಿ (ಅಧ್ಯಾಪಕ ಶಿಕ್ಷಣ)<br>ಶೈಕ್ಷಣಿಕ ವಿಭಾಗ. ಎನ್.ಐ.ಓ.ಎಸ್. ನೊಯಿಡಾ</td>
</tr>
<tr><th colspan="2">ಮುಖಪುಟ ಪರಿಕಲ್ಪನೆ ಮತ್ತು ವಿನ್ಯಾಸ</th><th colspan="2">ಬೆರಳಚ್ಚು</th><th colspan="2">ಕಛೇರಿ ಸಹಾಯಕರು</th></tr>
<tr>
<td colspan="2">ಶ್ರೀ. ಖಿ.ಎನ್. ಉಪ್ರೇತಿ.<br>ಪ್ರಕಾಶಣ ಅಧಿಕಾರಿ, ಮುದ್ರಣ, ಎನ್‌ಐಓಎಸ್.<br>ನೊಯಿಡಾ<br>ಶ್ರೀ ಧರ್ಮಾನಂದ ಜೋಶಿ<br>ಕಾರ್ಯಪಾಲಕ ಸಹಾಯಕರು, ಮುದ್ರಣ<br>ಎನ್.ಐ.ಓ.ಎಸ್. ನೊಯಿಡಾ</td>
<td colspan="2">ಶಿವಂ ಗ್ರಾಫಿಕ್ಸ್<br>431, ರಿಶಿನಗರ್, ದೆಹಲಿ–34</td>
<td colspan="2">ಶ್ರೀಮತಿ. ಸುಷ್ಮಾ<br>ಕಿರಿಯ ಸಹಾಯಕರು, ಶೈಕ್ಷಣಿಕ ವಿಭಾಗ,<br>ಎನ್.ಐ.ಓ.ಎಸ್. ನೊಯಿಡಾ.</td>
</tr>
</table>

## ಅಧ್ಯಕ್ಷರ ಸಂದೇಶ .....

### ಎನ್.ಐ.ಓ.ಎಸ್ ಗೆ ಸ್ವಾಗತ

*ಪ್ರಿಯ ಕಲಿಕಾರ್ಥಿ*

ರಾಷ್ಟ್ರೀಯ ಮತ್ತು ವಿದ್ಯಾಲಯ ಶಿಕ್ಷಣ ಸಂಸ್ಥೆಯ (ಎನ್ಐಓಎಸ್) ಭಾರತ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯದ ಅಡಿಯಲ್ಲಿರು ಒಂದು ಸ್ವಾಯುಕ್ತ ಸಂಸ್ಥೆಯಾಗಿದೆ. ಇದು ವಿಶ್ವದಲ್ಲೇ ಅತಿದೊಡ್ಡ ಮುಕ್ತ ವಿದ್ಯಾಲಯ ಶಿಕ್ಷಣ ವ್ಯವಸ್ಥೆಯಾಗಿದ್ದು, ಸುಮಾರು 2.02 ದಶಲಕ್ಷ್ ಕಲಿಕಾರ್ಥಿಗಳಿದ್ದು, ಮಾಧ್ಯಮಿಕ ಮತ್ತು ಉಚ್ಚಮಾಧ್ಯಮಿಕ ಹಂತಗಳಲ್ಲಿದ್ದಾರೆ. ಎನ್.ಐ.ಓ.ಎಸ್. ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಜಾಲ ಹೊಂದಿದದು, 15 ಕ್ಷೇತ್ರೀಯ ಕೇಂದ್ರಗಳು 2 ಉಪಕೇಂದ್ರಗಳು ಮತ್ತು ಸುಮಾರು 5000 ಅಧ್ಯಯನ ಕೇಂದ್ರಗಳನ್ನು ಶೈಕ್ಷಣಿಕ ಮತ್ತು ವೃತ್ತಿಪರ ಕಾರ್ಯಕ್ರಮಗಳನ್ನು ದೇಶದ ಒಳಗೂ ಮತ್ತು ಹೊರಗೂ ಒದಗಿಸಲು ಅನುಕೂಲ ಮಾಡಿಕೊಟ್ಟಿದೆ. ಇದು ಕಲಿಕಾರ್ಥಿ ಕೇಂದ್ರಿತವಾಗಿದ್ದು ಗುಣಮಟ್ಟದ ಶಿಕ್ಷಣ ಕೌಶಲ್ಯಾಭಿವೃದ್ಧಿ ಮತ್ತು ತರಬೇತಿಯನ್ನು ಮುಕ್ತ ಮತ್ತು ದೂರಶಿಕ್ಷಣದ ಮೂಲಕ ಒದಗಿಸುತ್ತಿದೆ. ಕಾರ್ಯಕ್ರಮಗಳನ್ನು ಮುದ್ರಿತ ಕಲಿಕಾ ಸಾಮಗ್ರಿ ಮತ್ತು ಮುಖಾಮುಖಿ ಪಾಠ್ಯ ವಿಧಾನ (ವೈಯಕ್ತಿಕ ಸಂಪರ್ಕ ಕಾರ್ಯಕ್ರಮ) ಮತ್ತು ದೃಶ್ಯ ಶ್ರವಣ ಮುದ್ರಿಕೆಗಳು, ರೇಡಿಯೋ ಬಿತ್ತರಣೆ, ದೂರದರ್ಶನ ಬಿತ್ತರಣೆ, ಮುಂತಾದ ಮಾಹಿತಿ ತಂತ್ರಜ್ಞಾನದ ವಿಧಾನಗಳನ್ನು ಬಳಸಿ ಒದಗಿಸಲಾಗುತ್ತದೆ.

ಈಗ, ಎನ್.ಐ.ಓ.ಎಸ್.ಗೆ ಕಾರ್ಯನಿರತರಾಗಿರುವ ತರಬೇತಿ ರಹಿತ, ಪ್ರಾಥಮಿಕ ಹಂತದಲ್ಲಿರುವ ಶಿಕ್ಷಕರುಗಳಿಗೆ ತರಬೇತಿ ನೀಡುವ ಪ್ರಾಧಿಕಾರವನ್ನು ಕೊಡಲಾಗಿದೆ.

ಡಿ.ಇಎಲ್.ಇಡ್ ತರಬೇತಿಯ ಸಾಮಾಗ್ರಿಗಳನ್ನು ಎನ್.ಐ.ಓ.ಎಸ್‌ಗೆ ಸಂಸ್ಥೆಯು ಇದೇ ಕ್ಷೇತ್ರದಲ್ಲಿ ನಿರತವಾಗಿರುವ ಇತರೆ ಸಂಸ್ಥೆಗಳೊಡಗೂಡಿ, ಪ್ರಾಥಮಿಕ ಶಿಕ್ಷಕರು, ಮೂಲಕ ಶಿಕ್ಷಣದಲ್ಲಿ ಡಿಪ್ಲೊಮಾ ಪಡೆಯಲು ಅನುವಾಗುವಂತೆ ನವೀನವೂ, ಆವಿಷ್ಕಾರಿಯೂ ಸವಾಲಯ ಯುಕ್ತವೂ ಆದ 2 ವರ್ಷಗಳ ಪಠ್ಯಕ್ರಮವನ್ನು ಆರ್‌ಟಿಇ 2009 ಕ್ಕೆ ಅನುಗುಣವಾಗಿ ತಯಾರಿಸಲಾಗಿದ್ದು, ಪ್ರಸ್ತುತಪಡಿಸಲಾಗಿದೆ.

ಈ. ಡಿ.ಇಲ್.ಇಡ್ ಪಾಠ್ಯಕ್ರಮಕ್ಕೆ ನಿಮ್ಮನ್ನು ಸ್ವಾಗತಿಸಲು ನನಗೆ ಹರ್ಷವಾಗುತ್ತಿದೆ. ನೀವು ನಿಮ್ಮ ರಾಜ್ಯಗಳಲ್ಲಿನ ಪ್ರಾಥಮಿಕ ವಿದ್ಯಾರ್ಥಿಗಳ ಶಿಕ್ಷಣದಲ್ಲಿ ನೀಡುತ್ತಿರುವ ಕೊಡುಗೆಯನ್ನು ಮೆಚ್ಚುತ್ತೇನೆ. ಆರ್.ಟಿ.ಈ. 2009 ರ ಪ್ರಕಾರ ಎಲ್ಲಾ ಶಾಲಾ ಶಿಕ್ಷಕರು ವೃತ್ತಿಪರ ತರಬೇತಿ ಪಡೆಯವುದು. ಅತ್ಯವಶ್ಯವಾಗಿದೆ. ನೀವು ಶಿಕ್ಷಕರಾಗಿ ಗಳಿಸಿರುವ ಅನುಭವದಿಂದ ಸಾಕಷ್ಟು ಕೌಶಲ್ಯಗಳನ್ನು ಉತ್ತಮ ಶಿಕ್ಷಕರಾಗಲು ಕಲಿತಿರಬಹುದು. ಕಾನೂನು ಪ್ರಕಾರ ಈಗ ನೀಡುವ ತರಬೇತಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ಮುಗಿಸುವುದು ಕಡ್ಡಾಯವಾಗಿದೆ.

ನೀವು ಈವರೆವಿಗೆ ಕಲೆಹಾಕಿರುವ ಜ್ಞಾನ ಮತುತ ಅನುಭವಗಳು ಈ ತರಬೇತಿ ಕಾರ್ಯಕ್ರಮವನ್ನು ಪೂರ್ಣಗೊಳಿಸಲು ಅನುಕೂಲವಾಗುತ್ತವೆ ಎಂಬುದು ನನಗೆ ತಿಳಿದಿದೆ.

ಈ ಡಿ.ಇಎಲ್.ಇಡಿ, ಕಾರ್ಯಕ್ರಮವು, ಮುಕ್ತ ದೂರ ಕಲಿಕಾ ರೀತಿಯಲ್ಲಿದ್ದು ನಿಮಗೆ ನಿಮ್ಮ ಶಿಕ್ಷಕ ವೃತ್ತಿ ಕಾರ್ಯಕ್ಕೆ ಯಾವ ರೀತಿಯಲ್ಲೂ ಅಡಚಣೆಯಾಗದಂತೆ ವೃತ್ತಿಪರ ತರಬೇತಿ ಪಡೆಯುವ ನಿಟ್ಟಿನಲ್ಲಿ ಹೇರಳವಾದ ಅವಕಾಶಗಳನ್ನು ಒದಗಿಸುತ್ತದೆ.

ಅಭಿವೃದ್ಧಿ ಪಡಿಸಿರುವ ಸ್ವ-ಕಲಿಕಾ ಸಾಮಗ್ರಿಗಳು , ನಿಮ್ಮ ಉಪಯೋಗಕ್ಕಾಗಿಯೇ ಸಿದ್ಧಪಡಿಸಿದ್ದು, ನೀವು ಒಬ್ಬ. ಅತ್ಯುತ್ತಮ ಶಿಕ್ಷಕರಾಗಲು ಅರಿವು ಮೂಡಿಸುವುದಲ್ಲದೆ, ನೀವು ವೃತ್ತಿಪರ ಅರ್ಹತೆ ಪಡೆಯಲು ಸಹಕಾರಿಯಾಗಿದೆ.

ಈ ಘನಕಾರ್ಯದಲ್ಲಿ ನಿಮಗೆ ಅದೃಷ್ಟ ಒಲಿಯಲಿ!!

ಅಧ್ಯಕ್ಷರು (ಎನ್.ಐ.ಓ.ಎಸ್)

ಅಂಕಾಂಶಗಳು (8=6+2)

| ವಿಭಾಗ | ಪಠ್ಯಭಾಗ | ಪಠ್ಯಭಾಗದ ಹೆಸರು | ಅಧ್ಯಯನ ಕಾಲಾವಧಿ ಗಂಟೆಗಳು | | ಪ್ರಾಯೋಗಿಕ ಅಧ್ಯಯನ |
|---|---|---|---|---|---|
| | | | ವಿಷಯವಸ್ತು | ಚಟುವಟಿಕೆ | |
| ವಿಭಾಗ–1<br>ಕಲೆ ಶಿಕ್ಷಣ | ಯು1 | ಕಲೆಯ ಅರ್ಥ ಮತ್ತು ಶಿಕ್ಷಣ | 6 | 4 | ನಿಮ್ಮ ಸ್ವಂತ ಅನುಭವದಿಂದ ಶಿಕ್ಷಕರು ಅನುಕೂಲಕಾರಕರು ಎಂಬುದನ್ನು ಗುರುತಿಸುವಲ್ಲಿ ಶಿಕ್ಷಕರ ಪಾತ್ರ |
| | ಯು2 | ದೃಶ್ಯ ಕಲೆಗಳು ಮತ್ತು ಕರಕುಶಲ ವಸ್ತುಗಳು (ಪ್ರಾಯೋಗಿಕ) | 8 | 5 | ನಿಮ್ಮ ಸಹೋದ್ಯೋಗಿಗಳ ವರ್ತನೆಯಿಂದ ಕಲಿಕಾರ್ಥಿ ಕೇಂದ್ರಿತ ಮಾರ್ಗೋಪಾಯದ ವಿಶಿಷ್ಟತೆಗಳನ್ನು ಗುರುತಿಸುವಿಕೆ. |
| | ಯು3 | ಕಲಾ ಪ್ರಾಯೋಗಿಕ ಪ್ರದರ್ಶನ | 7 | 4 | ಕಲಿಕಾ ಮತ್ತು ಭೋಧನಾ (ಕೆಡಿಎಪ್) ಪದ್ಧತಿಗಳಲ್ಲಿನ ವಿವಿಧ ವಿಧಾನಗಳಲ್ಲಿನ ವ್ಯತ್ಯಾಸಗಳನ್ನು ಅರಿಯುವುದು. |
| | ಯು4 | ಕಲೆ ಶಿಕ್ಷಣದ ಯೋಜನೆ ಮತ್ತು ಸಂಘಟನೆ | 9 | 7 | ಪಠ್ಯಭಾಗವನ್ನು ನಮೂದಿಸಿರುವ ವಿವಿಧ ಮಾರ್ಗೋಪಾಯಗಳನ್ನು ಉಪಯೋಗಿಸುವಾಗ ಬರುವ ತರಗತಿ ಪ್ರಬಂಧನ (ನಿರ್ವಹಣೆ) ಸಮಸ್ಯೆಗಳ ಬಗ್ಗೆ ವಿಚಾರ ಸಂಕಿರಣ |
| | ಯು5 | ಕಲ ಶಿಕಣದ ം ം | 6 | 3 | ಶಿಕ್ಷಕ– ಸಹೋದ್ಯೋಗಿಗಳಿಂದ, ತರಗತಿಯಲ್ಲಿ ಅನುತ್ತೇಜಕಾರಿ ಕ್ರಿಯೆಗಳು ಮತ್ತು ಸಾಮಗ್ರಿಗಳು ಗುರುತಿಸುವಿಕೆ. |
| ವಿಭಾಗ2<br>ಕಲಿಕಾ ಹಾಗು ಬೋಧನಾ ಪ್ರಕ್ರಿಯೆಗಳ ಪ್ರಬಂಧನೆ | ಯು6 | ಆರೋಗ್ಯದ ಅರ್ಥ ಮತ್ತು ಮಹತ್ವ | 6 | 3 | ಶಿಕ್ಷಕ– ಸಹೋದ್ಯೋಗಿಗಳಿಂದ, ತರಗತಿಯಲ್ಲಿ ಅನುತ್ತೇಜಕಾರಿ ಕ್ರಿಯೆಗಳು ಮತ್ತು ಸಾಮಗ್ರಿಗಳು ಗುರುತಿಸುವಿಕೆ. |
| | ಯು7 | ಶಾಲಾ ಆರೋಗ್ಯ ಶಿಕ್ಷಣ ಕಾರ್ಯಕ್ರಮ | 7 | 3 | ಬೇರೆ ಬೇರೆ ವಿಷಯ ಕ್ಷೇತ್ರಗಳಲ್ಲಿನ ವಿವಿಧ ಕಲಿಕಾ – ಭೋಧನಾ ಸಾಮಗ್ರಿಗಳ ವಿಂಗಡನೆ |
| | ಯು8 | ಅಗತ್ಯಕರ ಆರೋಗ್ಯ ಸೇವೆಗಳ ರಚನೆ | 8 | 5 | ಬೇರೆ ಬೇರೆ ವಿಷಯ ಕ್ಷೇತ್ರಗಳಲ್ಲಿನ ವಿವಿಧ ವರ್ಗಗಳಲ್ಲಿ ಚಟುವಟಿಕೆಗಳ ಯೋಜನೆ ಮತ್ತು ಅಭಿವೃದ್ಧಿ. |
| | ಯು9 | ದೈಹಿಕ ಶಿಕ್ಷಣದ ಅರ್ಥ ಮತ್ತು ಪರಿಕಲ್ಪನೆ | 5 | 3 | ಶಾಲಾ ಮತ್ತು ಸಹಶಾಲಾ ಚಟುವಟಿಕೆಗಳ ತರಗತಿ ಯೋಜನೆ ಪಾಠಯೋಜನೆಗಳ ವಾರ್ಷಿಕ ಯೋಜನಾಯಾಡಿಯ |

| | | | | | |
|---|---|---|---|---|---|
| | ಯು10 | ದೈಹಿಕ ಶಿಕ್ಷಣ<br><br>ಯೋಜನೆ ಮತ್ತು | 5 | 2 | ಬೇರೆ ಬೇರೆ ವಿಷಯ ಕ್ಷೇತ್ರಗಳಲ್ಲಿನ ವಿವಿಧ ವರ್ಗಗಳಲ್ಲಿ ಚಟುವಟಿಕೆಗಳ ಯೋಜನೆ ಮತ್ತು ಅಭಿವೃದ್ಧಿ. |
| | ಯು11 | ಆಟ, ಕ್ರೀಡೆಗಳು ಮತ್ತು ಯೋಗದ ರಚನೆ | 6 | 3 | ವಿವಿಧ ವಿಷಯ ಕ್ಷೇತ್ರಗಳಲ್ಲಿನ ಪರಿಕಲ್ಪನೆಗಳನ್ನು ಸಂಯೋಜಿಸಿದ ಚಟುವಟಿಕೆಗಳನ್ನು ಅಭಿವೃದ್ಧಿಸುವುದು. |
| ವಿಭಾಗ 3<br><br>ತರಗತಿಯಲ್ಲಿನ ಕಲಿಕೆಯಲ್ಲಿ ಹೊರಹೊಮ್ಮುವ ಸಮಸ್ಯೆಗಳು | ಯು12 | *ಕಾರ್ಯ ಶಿಕ್ಷಣದ ಪರಿಕಲ್ಪನೆ* | 5 | 2 | ವಿವಿಧ ವಿಷಯ ಕ್ಷೇತ್ರಗಳಲ್ಲಿನ ಪರಿಕಲ್ಪನೆಗಳನ್ನು ಸಂಯೋಜಿಸಿದ ಚಟುವಟಿಕೆಗಳನ್ನು ಅಭಿವೃದ್ಧಿಸುವುದು. |
| | ಯು13 | *ಕಾರ್ಯ ಶಿಕ್ಷಣದ ಅನುಷ್ಠಾನ (ಸೈದ್ಧಾಂತಿಕ ಮತ್ತು ಪ್ರಾಯೋಗಿಕ ಅಂಶ)* | 5 | 2 | ಕಲಿಕಾ ಬೋಧನಾ ಪ್ರಕ್ರಿಯೆಯಲ್ಲಿ ಉಪಯೋಗಕ್ಕಾಗಿ ಜಾನದಪ ಸಾಮಗ್ರಿಗಳನ್ನು ಸಂಗ್ರಹಿಸುವುದು. |
| | ಯು14 | ಕಾರ್ಯಶಿಕ್ಷಣದಲ್ಲಿ ಕೌಶಲ್ಯಗಳ ಅಭಿವೃದ್ಧಿ (ಪ್ರಾಯೋಗಿಕ ಕಾರ್ಯ) | 6 | 3 | ಪಾಠ ಪ್ರವಚನಕ್ಕಾಗಿ ಕಂಪ್ಯೂಟರ್ ಸಂಯೋಜಿತ ಬೋಧನಾ ಸಲಕರಣೆ ಅಭಿವೃದ್ಧಿ. |
| | ಯು15 | *ಕಾರ್ಯಶಿಕ್ಷಣದಲ್ಲಿ ಮೌಲ್ಯಮಾಪನ* | 6 | 3 | ವಿವಿಧ ವಿಷಯಗಳಲ್ಲಿ ಕಲಿಕಾರ್ತಿಯ ಸಾಧನೆಗಳನ್ನು ಕಂಪ್ಯೂಟರ್ ಆಧಾರಿತ ವಿಶ್ಲೇಷಣೆ |
| | | ಟ್ಯೂಟರಿಂಗ್ | 15 | | |
| | | ಮೊತ್ತ | 122 | 58 | 60 |
| ಒಟ್ಟು ಮೊತ್ತ | | | 122+58+60=240 ಗಂಟೆಗಳು | | |

# ವಿಭಾಗ –3

**ವಿಭಾಗ ಪಠ್ಯಭಾಗ**

*ಪಠ್ಯಭಾಗ 12* *ಕಾರ್ಯ ಶಿಕ್ಷಣದ ಪರಿಕಲ್ಪನೆ*

*ಪಠ್ಯಭಾಗ 13* *ಕಾರ್ಯ ಶಿಕ್ಷಣದ ಅನುಷ್ಠಾನ*

*(ಸೈದ್ಧಾಂತಿಕ ಮತ್ತು ಪ್ರಾಯೋಗಿಕ ಅಂಶ)*

*ಪಠ್ಯಭಾಗ 14* *ಕಾರ್ಯಶಿಕ್ಷಣದಲ್ಲಿ ಕೌಶಲ್ಯಗಳ ಅಭಿವೃದ್ಧಿ (ಪ್ರಾಯೋಗಿಕ ಕಾರ್ಯ)*

*ಪಠ್ಯಭಾಗ 15* *ಶಾಲೆ ಮತ್ತು ಸಮುದಾಯದಲ್ಲಿ ಕಾರ್ಯ ಶಿಕ್ಷಣ*

*ಪಠ್ಯಭಾಗ 16* *ಕಾರ್ಯಶಿಕ್ಷಣದಲ್ಲಿ ಮೌಲ್ಯಮಾಪನ*

# ಪರಿವಿಡಿ


| *ಕ್ರ.ಸಂ.* | *ಪಠ್ಯಭಾಗ* | *ಪುಟಸಂಖ್ಯೆ* |
|---|---|---|
| **1** | *ಪಠ್ಯಭಾಗ 12*<br>*ಕಾರ್ಯ ಶಿಕ್ಷಣದ ಪರಿಕಲ್ಪನೆ* | **01** |
| **2** | *ಪಠ್ಯಭಾಗ 13*<br>*ಕಾರ್ಯ ಶಿಕ್ಷಣದ ಅನುಷ್ಠಾನ*<br>*(ಸೈದ್ಧಾಂತಿಕ ಮತ್ತು ಪ್ರಾಯೋಗಿಕ ಅಂಶ)* | **14** |
| **3** | ಪಠ್ಯಭಾಗ 14<br>ಕಾರ್ಯಶಿಕ್ಷಣದಲ್ಲಿ ಕೌಶಲ್ಯಗಳ ಅಭಿವೃದ್ಧಿ (ಪ್ರಾಯೋಗಿಕ ಕಾರ್ಯ) | **44** |
| **4** | ಪಠ್ಯಭಾಗ –15<br>ಶಾಲೆ ಮತ್ತು ಸಮುದಾಯದಲ್ಲಿ ಕಾರ್ಯ ಶಿಕ್ಷಣ | **56** |
| **5** | *ಪಠ್ಯಭಾಗ 16*<br>ಕಾರ್ಯಶಿಕ್ಷಣದಲ್ಲಿ ಮೌಲ್ಯಮಾಪನ | **64** |

# *ಪಠ್ಯಭಾಗ 12 ಕಾರ್ಯ ಶಿಕ್ಷಣದ ಪರಿಕಲ್ಪನೆ*

Notes

ಸಂರಚನೆ

12.0 ಪ್ರಸ್ತಾವನೆ

12.1 ಕಲಿಕೆಯ ಉದ್ದೇಶಗಳು

12.2. ಕಾರ್ಯದ ಅರ್ಥ

12.2.1. ಕಾರ್ಯ ಮತ್ತು ಶ್ರಮದ ಮಹತ್ವ

12.2.2 ಕಾರ್ಯ ಮತ್ತು ಜೀವನೋಪಾಯ

12.2.3 ಕಾರ್ಯ ಮತ್ತು ಸಂತೋಷ ಮತ್ತು ತೃಪ್ತಿ.

12.3 ಶಿಕ್ಷಣದಲ್ಲಿ ಕೆಲಸ

12.3.1 ಶಿಕ್ಷಣದ ಪರಿಕಲ್ಪನೆ ಮತ್ತು ಅರ್ಥ

12.3.2 ಶಿಕ್ಷಣದ ಮಹತ್ವ

12.4 ಸಾರಾಂಶಗೊಳಿಸೋಣ

12.5 ಓದು ಮತ್ತು ಪರಾಮರ್ಶೆಯ ಸಲಹೆಗಳು.

12.6 ಘಟಕ ಕೊನೆಯ ಅಭ್ಯಾಸಗಳು.

## 12.0 ಪ್ರಸ್ತಾವನೆ

ಸಾಕ್ಷರತೆಯನ್ನು ಪೂಜಿಸುವುದನ್ನು ನಾನೆಂದೂ ಮೆಚ್ಚಲಿಲ್ಲ. ಒಬ್ಬ ವ್ಯಕ್ತಿಯ ವ್ಯಕ್ತಿತ್ವವನ್ನು ಕೇವಲ ಸಾಕ್ಷರತೆಯು ಹೆಚ್ಚಿಸಲಾರದೆಂಬುದನ್ನು ನನ್ನ ಅನುಭವವು ನಿರೂಪಿಸಿದೆ. ಕಾರ್ಯ ಅಥವಾ ಕೆಲಸದೊಡನೆ ಶಿಕ್ಷಣವನ್ನು ಸಮೀಕರಿಸುವುದು ತುಂಬಾ ಮಹತ್ವಪೂರ್ಣವಾಗಿದೆ. ನನ್ನ ಅಭಿಪ್ರಾಯದಲ್ಲಿ ಮಕ್ಕಳಿಗೆ ಶ್ರಮದ ಘನತೆಯ ಬಗ್ಗೆ ಕಲಿಸಬೇಕು. . . . . ದೇಹದ ವಿವಿಧ ಭಾಗಗಳಾದ ಕೈ, ಪಾದ, ಕಣ್ಣು, ಕಿವಿ ಮತ್ತು ಮೂಗು ಮುಂತಾದವುಗಳ ಸಮರ್ಪಕ ಉಪಯೋಗದ ಮೂಲಕ ಮನಸ್ಸಿನ ನಿಜವಾದ ಶಿಕ್ಷಣ ಸಾಧ್ಯವೆಂದು ನಾನು ನಂಬುತ್ತೇನೆ. ಅಂದರೆ, ಇಂದ್ರಿಯಗಳ ಬೌದ್ಧಿಕ ಉಪಯೋಗವು ಮಗುವಿನ ಬುದ್ಧಿಶಕ್ತಿಯ ಅಭಿವೃದ್ಧಿಗೆ ಅತ್ಯುತ್ತಮವಾದ ಮತ್ತು ಅತ್ಯಂತ ಸಮೀಪದ ಮಾರ್ಗವನ್ನು ಒದಗಿಸುತ್ತದೆ.
'ಸೂರ್ಯೋದಯದೊಂದಿಗೆ ಇಡೀ ವಿಶ್ವವೇ ಸಕ್ರಿಯವಾಗಿಬಿಡುತ್ತದೆ' ಎಂಬ ನುಡಿಗಳು ಬಹುಶ ಃ ನಿಮಗೆ ಪರಿಚಿತವಿರಬಹುದು. ಈ ಮಾತುಗಳನ್ನು ನಾವು ಹೇಳುತ್ತೇವಾದರೂ ಇಂದಿನ ಸನ್ನಿವೇಶದಲ್ಲಿ ಹಗಲಿರಲಿ, ರಾತ್ರಿಯಿರಲಿ ವಿಶ್ವವು ಯಾವಾಗಲೂ ಸಕ್ರಿಯವಾಗಿರುತ್ತದೆ.

ಈ ಎರಡೂ ಹೇಳಿಕೆಗಳಲ್ಲಿ 'ಸಕ್ರಿಯ' ಎಂಬ ಪದದ ಅರ್ಥವೇನೆಂದು ನೀವು ತಿಳಿದುಕೊಳ್ಳುತ್ತೀರಿ? ನಿಸ್ಸಂದೇಹವಾಗಿ ಯಾವುದಾದರೂ ಚಟುವಟಿಕೆಯಲ್ಲಿ ಅಂದರೆ, ಯಾವುದಾದರೂ ಕೆಲಸದಲ್ಲಿ ಕಾರ್ಯನಿರತವಾಗಿರುವುದು ಎಂದು ನೀವು ಅರ್ಥೈಸಿಕೊಳ್ಳುತ್ತೀರಿ. ಎಲ್ಲ ಜೀವಿಗಳಿಗೂ ಮನುಷ್ಯರಾಗಿರಲಿ ಅಥವಾ ಪ್ರಾಣಿಗಳಾಗಿರಲಿ ಕೆಲಸವು ವಿಶೇಷವಾಗಿ ದೈಹಿಕ ಶ್ರಮವು ಒಂದು ಅವಶ್ಯಕವಾದ ಪ್ರಮುಖ ಚಟುವಟಿಕೆಯಾಗಿದೆ. ಜನರು ತಮ್ಮ ಪರಿಸರದಲ್ಲಿ ವಿವಿಧ ಚಟುವಟಿಕೆಗಳನ್ನು ಮಾಡುತ್ತಿರುವುದನ್ನು ಮತ್ತು ತಮ್ಮನ್ನು ತಾವು ವಿವಿಧ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವುದನ್ನು ದಿನನಿತ್ಯದ ಜೀವನದಲ್ಲಿ ನೀವು ಗಮನಿಸುತ್ತಿರುತ್ತೀರಿ. 'ಕೆಲಸ'ದ ಅರ್ಥವೇನು? 'ಕೆಲಸ'ವು ಯಾಕೆ ಬದುಕಿನ ಒಂದು ಪ್ರಮುಖ ವಿಷಯವಾ ಗಿದೆ? ಈ ಘಟಕದ ಮೂಲಕ ಈ ಪ್ರಶ್ನೆಗಳಿಗೆ ಉತ್ತರಗಳನ್ನು ತಿಳಿದುಕೊಳ್ಳಲು ಪ್ರಯತ್ನಿಸೋಣ.
ಮನುಷ್ಯನ ಜೀವನಕ್ಕೆ ಸಂಬಂಧಿಸಿದಂತೆ ಕೆಲಸದ ಅರ್ಥವನ್ನು ಈ ಘಟಕದ ಮೂಲಕ ನಾವು ತಿಳಿದುಕೊಳ್ಳಲಿದ್ದೇವೆ. ದೈಹಿಕ ಶ್ರಮಕ್ಕೆ ಸಂಬಂಧಿಸಿದ ಚಟುವಟಿಕೆಗಳು ಶೈಕ್ಷಣಿಕ ಪರಿಕಲ್ಪನೆಗಳನ್ನು ಅರ್ಥಮಾಡಿಕೊಳ್ಳಲು ಹೇಗೆ ನೆರವಾಗುತ್ತವೆ? ಈ ಘಟಕವು ಕಾರ್ಯ ಮತ್ತು ಶಿಕ್ಷಣದ ನಡುವಿನ ಸಂಬಂಧವನ್ನು ವಿವರಿಸುತ್ತದೆ. ಕೆಲಸ ಶಿಕ್ಷಣವನ್ನು ಹೇಗೆ ವ್ಯಾಖ್ಯಾನಿಸುಬಹುದು. ಈ ಘಟಕವು ಕಾರ್ಯಶಿಕ್ಷಣದ ಉದ್ದೇಶಗಳು, ಮಹತ್ವ ಮತ್ತು ವಿವಿಧ ಕ್ಷೇತ್ರಗಳನ್ನು ಅರ್ಥಮಾಡಿಕೊಳ್ಳಲು ನೆರವಾಗುತ್ತದೆ.

## 12.1 ಕಲಿಕೆಯ ಉದ್ದೇಶಗಳು

ಈ ಘಟಕದ ಮೂಲಕ ನೀವು

- ಶೈಕ್ಷಣಿಕ ಪರಾಮರ್ಶೆಯಲ್ಲಿ ಕಾರ್ಯದ ಪರಿಕಲ್ಪನೆಯನ್ನು ಅರ್ಥಮಾಡಿಕೊಳ್ಳಬಲ್ಲಿರಿ.
- ಶ್ರಮದ ಘಟನೆಯ ಬಗ್ಗೆ ತಿಳಿದುಕೊಳ್ಳುವಿರಿ.
- ಕಾರ್ಯ ಮತ್ತು ಜೀವನೋಪಾಯ, ಸಂತೋಷ ಮತ್ತು ಸಂತೃಪ್ತಿ ನಡುವಿನ ಸಂಬಂಧವನ್ನು ವಿವರಿಸಬಲ್ಲರಿ.
- ಕಾರ್ಯ ಶಿಕ್ಷಣದ ಅಗತ್ಯ, ಅರ್ಥ ಮತ್ತು ಮಹತ್ವವನ್ನು ಗುರುತಿಸಬಲ್ಲಿರಿ.
- ಶಿಕ್ಷಣದ ತಾತ್ವಿಕ, ಸಾಮಾಜಿಕ ಮತ್ತು ಐತಿಹಾಸಿದ ಹಿನ್ನೆಲೆಯನ್ನು ಅರ್ಥಮಾಡಿಕೊಳ್ಳುವಿರಿ.
- ಪ್ರಸ್ತುತ ರೂಪದ ಕೆಲಸ ಶಿಕ್ಷಣ ಮತ್ತು ಅದಕ್ಕೆ ಸಂಬಂಧಿಸಿದ ಮಧ್ಯೆಗಳ ಬಗ್ಗೆ

ವಿಮರ್ಶಾತ್ಮಕ ಧೋರಣೆಯನ್ನು ಬೆಳೆಸಿಕೊಳ್ಳಲಿದ್ದೀರಿ.

## 12.2 ಕಾರ್ಯದ ಅರ್ಥ

ನಿಮ್ಮನ್ನು ನೀವು ಬೆಳಗಿನಿಂದ ಸಂಜೆಯವರೆಗೆ, ಕೆಲವೊಮ್ಮೆ ರಾತ್ರಿಯಲ್ಲಿಯೂ ಸಹ ವಿವಿಧ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುತ್ತೀರಿ. ಕೆಲವೊಮ್ಮೆ ಚಟುವಟಿಕೆಗಳಲ್ಲಿ ವಿವಿಧ ಇಂದ್ರಿಯಗಳ ಮೂಲಕ ನಿಮ್ಮ ಮೆದುಳು ಸಕ್ರಿಯವಾಗಿರುವುದನ್ನು ಇನ್ನು ಕೆಲವದರಲ್ಲಿ ನಿಮ್ಮ ಅಂಗಗಳು ಹೆಚ್ಚು ಸಕ್ರಿಯವಾಗಿರುವುದನ್ನು ನೀವು ಕಾಣುತ್ತೀರಿ. ನಿಮ್ಮ ಮನಸ್ಸು ಹೆಚ್ಚು ಸಕ್ರಿಯವಾಗಿದಾಗ ಅದನ್ನು ಮಾನಸಿಕ ಕೆಲಸವೆಂದು ಹಾಗೂ ನಿಮ್ಮ ಅಂಗಗಳು ಸಕ್ರಿಯವಾಗಿದ್ದಾಗ ಅದನ್ನು ದೈಹಿಕ ಕೆಲವೆಂದು ನೀವು ಪರಿಗಣಿಸುತ್ತೀರಿ. ಈ ಎರಡು ಕೆಲಸಗಳು ನಿಮ್ಮ ಜೀವನದ ಅವಿಭಾಜ್ಯ ಭಾಗವಾಗಿದೆ. ಏಕೆಂದರೆ, ಜೀವನದ ಅವಶ್ಯಕತೆಗಳನ್ನು ಪೂರೈಸಲು ಮತ್ತು ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕೆ ಕೆಲಸ ಅಗತ್ಯವಾಗಿರುತ್ತದೆ. ಮನಸ್ಸು ಮತ್ತು ಅಂಗಗಳು ಪ್ರತ್ಯೇಕವಾಗಿ ಕೆಲಸ ಮಾಡುತ್ತವೆಯೆ ಎಂದು ಬಹುಶಃ ನೀವು ಪ್ರಶ್ನಿಸಬಹುದು. ನೀವು ನಿಮ್ಮ ಕೈತೋಟದಲ್ಲಿ ಕಳೆ ತೆಗೆಯುವಾಗ ನಿಮ್ಮ ಅಂಗಗಳು ಸಕ್ರಿಯವಾಗಿರುತ್ತವೋ ಅಥವಾ ಕೆಲವು ಇಂದ್ರಿಯಗಳ ಜೊತೆ ನಿಮ್ಮ ಮನಸ್ಸು ಸಕ್ರಿಯವಾಗಿರುತ್ತದೋ ಎಂಬುದನ್ನು ನೀವೇ ಸ್ವತಃ ವಿಶ್ಲೇಷಣೆ ಮಾಡಿ. ಎರಡೂ ಸಕ್ರಿಯವಾಗಿರುತ್ತವೆಂಬುದು ನಿಮ್ಮ ಉತ್ತರವಾಗಿರುತ್ತದೆ. ಏಕೆಂದರೆ ನಿಮ್ಮ ಕೈಗಳು ಹೆಚ್ಚು ಸಕ್ರಿಯವಾಗಿದ್ದರೂ ನಿಮ್ಮ ಮನಸ್ಸು ಸಲಹೆ ನೀಡುತ್ತಿರುತ್ತದೆ. ದೈಹಿಕ ಮತ್ತು ಮಾನಸಿಕ ಕೆಲಸವನ್ನು ಪ್ರತ್ಯೇಕವಾಗಿ ನೋಡಬಹುದೆಂಬ ಉತ್ತರವನ್ನು ನಿಸ್ಸಂದೇಹವಾಗಿ ನೀವು ಪಡೆದುಕೊಂಡಿರಿ. ದೈಹಿಕ ಕೆಲಸದಲ್ಲಿ ಅಂಗಗಳ ಶ್ರಮ ಹೆಚ್ಚಿನದು ಮತ್ತು ಮಾನಸಿಕ ಕೆಲಸದಲ್ಲಿ ಮನಸ್ಸಿನ ಶ್ರಮ ಹೆಚ್ಚಿನದು. ಇವೆರಡರೊಡನೆ ಸಾಮಾಜಿಕ ಮೌಲ್ಯಗಳು ಸಂಬಂಧ ಹೊಂದಿರುತ್ತವೆ.

ಸಾಮಾನ್ಯವಾಗಿ ಕಾರ್ಯವೆನ್ನುವುದು ದೈಹಿಕ ಶ್ರಮ ಹೆಚ್ಚಾಗಿ ಬೇಕಿರುವ ಚಟುವಟಿಕೆಯೆಂದುಕೊಳ್ಳಗಾಗುತ್ತವೆ. ಸ್ವಂತಕ್ಕಾಗಿ ಅಥವಾ ಸಾಮಾಜಿಕ ಕಾರಣಕ್ಕಾಗಿ ಉತ್ಪಾದನೆ ಮಾಡಲಾಗುವ ದೈಹಿಕ ಶ್ರಮವನ್ನು ಕಾರ್ಯ ಎಂದು ಪರಿಗಣಿಸಲಾಗುತ್ತದೆ. ಶ್ರಮಕ್ಕೆ ಸಂಬಂಧಿಸಿದ ನಮ್ಮ ಕೆಲವು ಚಟುವಟಿಕೆಗಳು ನಮ್ಮ ಅಗತ್ಯಗಳನ್ನು ಪೂರೈಸಿಕೊಳ್ಳುವುದಕ್ಕೆ ಸಂಬಂಧಿಸಿರುತ್ತದೆ. ಕೆಲವು ಚಟುವಟಿಕೆಗಳು ನಮ್ಮ ಸಾಮಾಜಿಕ ಮತ್ತು ಆರ್ಥಿಕ ಜೀವನದಲ್ಲಿನ ಆಡಳಿತ ಮತ್ತು ಸಂಘಟನೆಗೆ ಸಂಬಂಧಿಸಿರುತ್ತದೆ. ಅಂತಿಮವಾಗಿ ಎಲ್ಲವೂ ಮಾನವ ಕಲ್ಯಾಣಕ್ಕೆ ಸಂಬಂಧಿಸಿರುತ್ತವೆ. ಹೀಗಾಗಿ ಕೆಲಸವೆಂದರೆ ದೈಹಿಕ ಶ್ರಮಕ್ಕೆ ಸಂಬಂಧಿಸಿದ ಮತ್ತು ನಮ್ಮ ವೈಯಕ್ತಿಕ, ಸಾಮಾಜ ಮತ್ತು ಇತರೆ ಜನರ ಕುರಿತಾದ ನಮ್ಮ ಜವಾಬ್ದಾರಿಯನ್ನು ಪೂರೈಸುವ ಚಟುವಟಿಕೆಗಳಾಗಿವೆ.

### 12.2.11 ಕಾರ್ಯ ಮತ್ತು ಶ್ರಮದ ಮಹತ್ವ.

ಎಲ್ಲಾ ದೊಡ್ಡ ಅನ್ವೇಷಣೆಗಳು ಹೇಗಾದವು ಎಂಬುದು ನಿಮಗೆ ಗೊತ್ತಿದೆಯೇ? ಬಹುಶಃ ಎಲ್ಲಾ ದೊಡ್ಡ ಅನ್ವೇಷಣೆಗಳು ಚಿಂತನೆಯ ಪ್ರತಿಫಲವೆಂದು ಬಹುಶಃ ನಿಮ್ಮಲ್ಲಿ ಕೆಲವರು ಹೇಳಬಹುದು. ಅನ್ವೇಷಣೆಯ ಅಭಿವೃದ್ಧಿಯ ಪ್ರಕ್ರಿಯೆಯನ್ನು ನೀವು ಗಮನಿಸಿದ್ದರೆ ಆ ಅನ್ವೇಷಣೆಗೆ ಸಂಬಂಧಿಸಿದಂತೆ ಮಾನಸಿಕ ಶ್ರಮಕ್ಕಿಂತ ಬಹಳ ಮುಂಚೆಯೇ ದೈಹಿಕ ಶ್ರಮವಿರುವುದನ್ನು ನೀವು ಕಾಣಬಹುದು. ರಾಟೆಯ ತತ್ವವನ್ನು ಪ್ರತಿಪಾದಿಸಿದ ವ್ಯಕ್ತಿಯು ಬಾವಿಯಿಂದ ನೀರನ್ನು ಸೇದಿರಬಹುದು ಅಥವಾ ತೂಕವನ್ನು ಎತ್ತಿರಬಹುದು. ಅದೇ ರೀತಿ

ಸನ್ನೆಯ ತತ್ವವು ಹೆಚ್ಚು ತೂಕವಿರುವ ವಸ್ತುಗಳನ್ನು ತನ್ನ ಸಾಕಷ್ಟು ಸಮಯವನ್ನು ವಿನಿಯೋಗಿಸಿದ ವ್ಯಕ್ತಿಯ ದೈಹಿಕ ಶ್ರಮದ ಪ್ರತಿಫಲವಾಗಿರಬಹುದು. ಹ್ಯಾಂಡ್‌ಪಂಪ್ ಕೆಲಸಗಾರನೊಬ್ಬನ ಅನುಭವಗಳ ಉತ್ಪನ್ನವಾಗಿರಬಹುದು. ಇದು ಕೆಲಸದ ಮಹತ್ವವನ್ನು ಪ್ರತಿಪಾದಿಸಲಾಗುವ ದೃಷ್ಟಿಕೋನಗಳಲ್ಲಿ ಒಂದಾಗಿದೆ. ಇತರೆ ದೃಷ್ಟಿಕೋನಗಳನ್ನು ಅರ್ಥಮಾಡಿಕೊಳ್ಳಲು ನಿಮ್ಮ ದಿನಚರಿಯನ್ನು ನೋಡಿಕೊಳ್ಳಿ ಮತ್ತು ನಿಮಗೆ ನೀವೇ ಈ ಪ್ರಶ್ನೆಗಳನ್ನು ಕೇಳಿಕೊಳ್ಳಿ.

- ನೀವು ವಾಸಿಸುವ ಮನೆಯನ್ನು ಕಟ್ಟುವಲ್ಲಿ ಯಾರ ಶ್ರಮವಿದೆ? ಇನ್ನು ಇಟ್ಟಿಗೆಗಳು, ಸಿಮೆಂಟ್ ಉತ್ಪಾದಿಸುವ ಮತ್ತು ಅವುಗಳನ್ನು ಲೋಡ್ ಮಾಡುವ ಗೋಡೆಯನ್ನು ಕಟ್ಟುವ ಮೇಲ್ಛಾವಣಿಗೆ ಉತ್ತರಾಸು ಹಾಕುವ ಬಣ್ಣ ಬಳಿಯುವ ಕೆಲಸವನ್ನು ಯಾರು ಮಾಡಿದರು?
- ತರಕಾರಿಗಳನ್ನು ಬೆಳೆಯುವ ಮತ್ತು ಅವುಗಳನ್ನು ನಮಗೆ ತಂದುಕೊಡುವ ಮೂಲಕ ಆಹಾರವನ್ನು ಒದಗಿಸುವಲ್ಲಿ ಯಾರ ಶ್ರಮವಿದೆ?
- ಸಾರ್ವಜನಿಕ ಸ್ಥಳಗಳಲ್ಲಿ ಮತ್ತು ನಮ್ಮ ಮನೆಗಳಲ್ಲಿ ಸ್ವಚ್ಛತೆ ಕಾಪಾಡುವಲ್ಲಿ ಯಾರ ಶ್ರಮವಿದೆ?

ಈ ಎಲ್ಲಾ ಅಂಶಗಳು, ವ್ಯಕ್ತಿಯ ಕೌಟುಂಬಿಕ, ಸಾಮಾಜಿಕ ಅಥವಾ ಪ್ರಾಯೋಗಿಕ ಜೀವನಕ್ಕೆ ಸಂಬಂಧಿಸಿರಲಿ, ದೈಹಿಕ ಶ್ರಮದ ವ್ಯಾಪ್ತಿಗೆ ಬರುತ್ತವೆ. ನಮ್ಮ ದಿನಚರಿಯ ಅನೇಕ ಕ್ಷಣಗಳನ್ನು ದೈಹಿಕ ಶ್ರಮದಿಂದ ಬೇರ್ಪಡಿಸಲು ಸಾಧ್ಯವಿಲ್ಲವೆಂಬುದನ್ನು ನೀವು ಗಮನಿಸುತ್ತೀರಿ. ಹೀಗೆ, ಮನುಷ್ಯನ ಜೀವನವು ದೈಹಿಕ ಶ್ರಮವನ್ನು ಅವಲಂಭಿಸಿದೆ. ದೈಹಿಕ ಶ್ರಮದೊಡನೆ ನೇರವಾಗಿ ಸಂಬಂಧಿಸಿರದ ವ್ಯಕ್ತಿಗಳು ಅದಿಲ್ಲದೆ ಬದುಕಲು ಸಾಧ್ಯವಿಲ್ಲ. ಅವರ ವಾಸಸ್ಥಳ, ಅವರ ಆಹಾರದ ವ್ಯವಸ್ಥೆ, ಅವರು ಧರಿಸುವ ಬಟ್ಟೆಗಳು, ಅವರು ಉಪಯೋಗಿಸುವ ವಸ್ತುಗಳು, ಅವರು ನಡೆಯುವ ರಸ್ತೆ ಮುಂತಾದವು ಬೇರೊಬ್ಬರ ದೈಹಿಕ ಶ್ರಮದ ಪ್ರತಿಫಲವಾಗಿದೆ. ಇದರರ್ಥವೇನೆಂದರೆ, ಕೆಲಸ ಮತ್ತು ಮನುಷ್ಯನ ಜೀವನವನ್ನು ಎರಡು ಪ್ರತ್ಯೇಕ ವಿಷಯಗಳಾಗಿ ನೋಡಲು ಸಾಧ್ಯವಿಲ್ಲ. ಮನುಷ್ಯನ ಜೀವನಕ್ಕೆ ದೈಹಿಕ ಶ್ರಮ ತುಂಬಾ ಮಹತ್ವವಾದುದು. ಕೆಲವರಿಗೆ ಅದು ಜೀವನೋಪಾಯವಾದರೆ, ಇತರರಿಗೆ ಅದು ದೈಹಿಕ ಮತ್ತು ಮಾನಸಿಕ ಶ್ರಮದ ಒಂದು ಮಾಧ್ಯಮವಾಗಿದೆ.

### 12.2.2 ಕಾರ್ಯ ಮತ್ತು ಜೀವನೋಪಾಯ

ಕಾರ್ಯ ಮತ್ತು ಜೀವನೋಪಾಯಗಳ ನಡುವೆ ನಿಕಟವಾದ ಸಂಬಂಧವಿದೆ. ಈ ಸಂಬಂಧವನ್ನು ಅರ್ಥಮಾಡಿಕೊಳ್ಳುವುದಕ್ಕಿಂತ ಮುಂದೆ 'ಜೀವನೋಪಾಯ'ವನ್ನು ವ್ಯಾಖ್ಯಾನಿಸುವ ಅಗತ್ಯವಿದೆ. ಜೀವನೋಪಾಯವನ್ನು ನೀವು ಹೇಗೆ ವ್ಯಾಖ್ಯಾನಿಸುತ್ತೀರಿ? ಒಬ್ಬ ಕಮ್ಮಾರ ದಿನವಿಡೀ ಕಷ್ಟಪಟ್ಟು ದುಡಿದ ನಂತರ ಸನಿಕೆಗಳನ್ನು ತಯಾರಿಸುತ್ತಾನೆ ಮತ್ತು ಹಣಗಳಿಸಲು ಅವುಗಳನ್ನು ಮಾರಾಟ ಮಾಡುತ್ತಾನೆ. (ಸಾಂಪ್ರದಾಯಿಕವಾಗಿ ಸಾಟಿ ವಿನಿಮಯ ಪದ್ಧತಿಯಲ್ಲಿ ಅವನು ಧಾನ್ಯಗಳು ಮತ್ತು ಇತರೆ ಉಪಯುಕ್ತ ವಸ್ತುಗಳನು ಪಡೆಯುತ್ತಿದ್ದನು.) ರೈತನಾದವನು ತುಂಬಾ ಶ್ರಮವಹಿಸಿ ಧಾನ್ಯವನ್ನು ಬೆಳೆಯುತ್ತಾನೆ. ಬೆಳೆದಿದ್ದರಲ್ಲಿ ಸ್ವಲ್ಪಭಾಗವನ್ನು ತನ್ನ ಕುಟುಂಬಕ್ಕಾಗಿ ಇರಿಸಿಕೊಂಡು

ಉಳಿದ ಬೆಳೆಯನ್ನು ಮಾರಾಟ ಮಾಡುತ್ತಾನೆ. ಕುಶಲಕರ್ಮಿಗಳು ಸುಂದರವಾದ ಮತ್ತು ಉಪಯುಕ್ತವಾದ ವಸ್ತುಗಳನ್ನು ಬಿದಿರಿನಿಂದ ತಯಾರಿಸಿ ಅವುಗಳನ್ನು ಮಾರಿ, ಬಂದಂತಹ ಹಣವನ್ನು ತಮ್ಮ ಅಗತ್ಯಗಳಿಗಾಗಿ ವೆಚ್ಚ ಮಾಡುತ್ತಾರೆ. ರಿಕ್ಷಾ ಎಳೆಯುವವನು ಬೇಸಿಗೆ, ಚಳಿಗಾಲ ಮತ್ತು ಮಳೆಗಾಲಗಳಲ್ಲಿ ಪ್ರಯಾಣಿಕರನ್ನು ಅವರು ಸೇರಬೇಕಾದ ಸ್ಥಳಕ್ಕೆ ಕರೆದುಕೊಂಡು ಹೋಗಿ ಅದಕ್ಕೆ ಬದಲಾಗಿ ಸಿಗುವ ಹಣದಿಂದ ಅವನು ಸಾಮಾನುಗಳು ಮತ್ತು ಇತರೆ ಅಗತ್ಯ ವಸ್ತುಗಳನ್ನು ಪಡೆಯುಬಹುದು. ಈ ಎಲ್ಲಾ ಉದಾಹರಣೆಗಳು ಏನನ್ನು ಸೂಚಿಸುತ್ತವೆ? ಹೌದು ನಿಮ್ಮ ಉತ್ತರ ಸರಿಯಿದೆ. ಬದುಕಲು ಬೇಕಿರುವ ಆಹಾರವನ್ನು ಗಳಿಸುವ ಸಲುವಾಗಿ ಕಾರ್ಯನಿರತವಾಗಿರುವುದು ಜೀವನೋಪಾಯದ ಅರ್ಥವಾಗಿದೆ.

ಭಾರತದಲ್ಲಿ ಜನಸಂಖ್ಯೆಯ ಬಹುಭಾಗ ದೈಹಿಕ ಶ್ರಮವನ್ನು ಒಂದು ಅವಶ್ಯಕತೆಯಾಗಿ ಅಳವಡಿಸಿಕೊಳ್ಳಬೇಕಾಗಿದೆ. ಹಣದ ನಿರೀಕ್ಷೆಯಿಂದ ಮಾಡುವ ಶ್ರಮವು ಜೀವನೋಪಾಯಕ್ಕೆ ಸಂಬಂಧಿಸಿದಂತೆ. ಈ ಶ್ರಮವು ಕೇವಲ ಹಣಕಾಸಿನ ಮೌಲ್ಯವಷ್ಟೇ ಅಲ್ಲದೆ ಸಾಮಾಜಿಕ ಮೌಲ್ಯವನ್ನು ಹೊಂದಿದೆ. ಈ ಅಂಶವನ್ನು ವಿವರಿಸಲು ನೀವು ಒಂದು ಉದಾಹರಣೆ ನೀಡಲು ಸಾಧ್ಯವೆ? ನೀವು ಒಬ್ಬ ಬಡಗಿಯಾಗಿ ಕೆಲಸ ಮಾಡುತ್ತಿದ್ದೀರಿ ಎಂದುಕೊಳ್ಳಿ ಒಂದು ರೀತಿಯಲ್ಲಿ ಈ ಶ್ರಮದ ಮೂಲಕ ನೀವು ನಿಮ್ಮ ಹಣಕಾಸಿನ ಅಗತ್ಯತೆಗಳನ್ನು ಪೂರೈಸಲು ಹಣವನ್ನು ಪಡೆಯುತ್ತಿದ್ದೀರಿ. ಇನ್ನೊಂದು ರೀತಿಯಲ್ಲಿ ನಿಮ್ಮ ಶ್ರಮವು ಬೇರೆಯವರ ಅಗತ್ಯತೆಗಳನ್ನು ಪೂರೈಸುತ್ತದೆ. ಉದಾಹರಣೆಗೆ ಬಾಗಿಲುಗಳು ಮರದ ಪೀಠೋಪಕರಣಗಳು ಲಟ್ಟಣಿಗೆ, ಪಾತ್ರೆಗಳು, ಮುಂತಾದವು. ಇದು ನಿಮ್ಮ ಶ್ರಮದ ಸಾಮಾಜಿಕ ಮೌಲ್ಯವಾಗಿದೆ. ಇದರರ್ಥವೇನೆಂದರೆ, ನೀವು ನಿಮ್ಮ ಸ್ವಂತ ಜವಾಬ್ದಾರಿಗಳನ್ನು ನಿರ್ವಹಿಸುತ್ತಿಲ್ಲ. ಬದಲಾಗಿ ಸಮಾಜದ ಪ್ರತಿ ಜವಾಬ್ದಾರರಾಗಿದ್ದೀರಿ. ಶ್ರಮದ ಮೂಲಕ ಸಮಾಜಕ್ಕಾಗಿ ಉತ್ಪಾದಿಸುವುದು ಮನುಷ್ಯನ ಜೀವನವನ್ನು ಸಮೃದ್ಧವಾಗಿಸುತ್ತದೆ. ಇಲ್ಲಿ ಮತ್ತೊಂದು ವಿಷಯವು ಪ್ರಮುಖವಾದುದಾಗಿದೆ. ಅಡಿಗೆ ಮಾಡುವುದು, ಪಾತ್ರೆಗಳನ್ನು ತೊಳೆಯುವುದು, ಬಟ್ಟೆಯನ್ನು ಒಗೆಯುವುದು ಶ್ರಮದಿಂದ ಕೂಡಿದೆ. ಈ ಎಲ್ಲವುಗಳಿಂದ ಯಾರಿಗೂ ನೇರವಾದ ಮೌಲ್ಯ ಸಿಗುವುದಿಲ್ಲ. ಆದರೆ, ಇದು ಕುಟುಂಬದ ಸದಸ್ಯರಿಗೆ ಸೌಕರ್ಯಗಳನ್ನು ಒದಗಿಸುತ್ತದೆ. ಮತ್ತು ಇದರಿಂದಾಗಿ ಅವರ ಜೀವನೋಪಾಯಕ್ಕೆ ಬೇಕಾದ ಶಕ್ತಿ ಅವರಿಗೆ ಸಿಗುತ್ತದೆ.

### 12.2.3 ಕಾರ್ಯ, ಸಂತೋಷ ಮತ್ತು ಸಂತೃಪ್ತಿ.

ನಮ್ಮ ದೇಶದ ಸಾಮಾಜಿಕ, ಆರ್ಥಿಕ ಸ್ಥಿತಿಗತಿಯು ನಿಮಗೆ ಚೆನ್ನಾಗಿ ತಿಳಿದಿದೆ. ಬಹುತೇಕ ಜನರು ತಮ್ಮ ಜೀವನೋಪಾಯಕ್ಕಾಗಿ ಶ್ರಮದೊಡನೆ ಸಂಬಂಧ ಹೊಂದಿದ್ದಾರೆ. ಅವರು ಆ ಕೆಲಸವನ್ನು ಹಣಕ್ಕೋಸ್ಕರ ಮಾತ್ರ ಮಾಡುತ್ತಾರೆ. ಅಥವಾ ಅದರಿಂದ ಯಾವುದಾದರೂ ಬಗೆಯ ಸಂತೋಷವನ್ನು ಪಡುತ್ತಾರೊ! ಮಡಿಕೆ ಮಾಡುವವನು (ಕುಂಬಾರನು) ಮಣ್ಣಿನ ಪಾತ್ರೆಗಳನ್ನು ಮಾಡುತ್ತಾನೆ. ಅವುಗಳ ಮೇಲೆ ವಿಭಿನ್ನ ವಿನ್ಯಾಸಗಳನ್ನು ಚಿತ್ರಿಸುತ್ತಾನೆ. ಅವನು ಕೇವಲ ಹಣ ಪಡೆಯುವುದಕ್ಕಾಗಿ ಮಾತ್ರ ಅದನ್ನು ಮಾಡುತ್ತಾನೆಯೆ. ಬಹುಶಃ ಅವನಿಗೆ ಇದರಿಂದ ಸಂತೋಷ ಸಿಗುತ್ತದೆ. ರೈತನು ತನ್ನ ಸಮೃದ್ಧ ಬೆಳೆಯನ್ನು ಕಂಡು ಸಂತಸ ಪಡುತ್ತಾನೆ. ಏಕೆಂದರೆ ಅವನ ಬೆಳೆಗೆ ಉತ್ತಮ ಮೌಲ್ಯ ಸಿಗುತ್ತದೆ ಅಥವಾ ತನ್ನ ಶ್ರಮಕ್ಕೆ ಸಿಕ್ಕ ಪ್ರತಿಫಲದಿಂದ ಅವನು ಮಂತ್ರಮುಗ್ಧನಾಗಿದ್ದಾನೆ ಮತ್ತು ತನ್ನ ಬೆಳೆಯು ಅನೇಕ ಜನರ ಹಸಿವನ್ನು

ತೃಪ್ತಿಪಡಿಸುತ್ತಾನೆಂಬ ಮತ್ತು ಇದು ಅವನ ಶ್ರಮದ ಪ್ರತಿಫಲವೆಂಬ ಸಂತೋಷ ಅವನಿಗಿದೆ. ಇದರರ್ಥವೇನೆಂದರೆ, ದೈಹಿಕ ಶ್ರಮವು ಸಂತೋಷ ಮತ್ತು ಸಂತೃಪ್ತಿಗಳೊಂದಿಗೆ ಸಂಬಂಧವನ್ನು ಹೊಂದಿದೆ. ದೈಹಿಕ ಶ್ರಮವು ಸಂತೋಷ, ಸಂತೃಪ್ತಿ ಮತ್ತು ಸಂತೋಷಗಳ ಹೊಸ ನಿರೀಕ್ಷೆಗಳನ್ನು ತೆರೆಯುತ್ತದೆ. ಮತ್ತು ಈ ಸಂತೃಪ್ತಿಯು ಎಲ್ಲಾ ಜೀವಿಗಳು ಮತ್ತು ಎಲ್ಲಾ ವಯಸ್ಸಿನ ಜನರಿಗೆ ಸಂಬಂಧಿಸಿದೆ. ಸೂರ್ಯೋದಯದಲ್ಲಿ ತಮ್ಮ ಆಹಾರಕ್ಕಾಗಿ ಹಕ್ಕಿಗಳ ಹಾರಾಟ, ಅನಿರೀಕ್ಷಿತ ಸನ್ನಿವೇಶಗಳಿಂದಾಗಿ ಎಚ್ಚರಗೊಂಡು ಬೊಗಳುವ ನಾಯಿಗಳು, ತಮ್ಮ ಶಿಕಾರಿಯನ್ನು ಹಿಡಿಯಲು ಹೋಗುವ ಪ್ರಾಣಿಗಳು ಇವೆಲ್ಲವನ್ನೂ ಅವು ತಮ್ಮ ತೃಪ್ತಿಗಾಗಿ ಮಾಡುತ್ತವೆ.

ಅವರ ಸಣ್ಣ ಮತ್ತು ದೊಡ್ಡ ಸ್ನಾಯುಗಳು ಸಮರ್ಪಕವಾಗಿ ಬೆಳವಣಿಗೆಯಾಗಿರದ ಚಿಕ್ಕ ಮಕ್ಕಳು, ವಸ್ತುಗಳನ್ನು ಎಸೆಯುವ ಮೂಲಕ ಸಂತೋಷಪಡುತ್ತಾರೆ. ಅದೇ ರೀತಿ ಅವರ ದೈಹಿಕ ಶಕ್ತಿಯನ್ನೆಲ್ಲಾ ಕಳೆದುಕೊಂಡಿರುವ ವಯಸ್ಸಾದವರು ಅವರ ಮನೆಗೆ ಭೇಟಿ ನೀಡುವ ಎಲ್ಲ ಜನರ ಮೇಲೆ ಕಣ್ಣಿಟ್ಟಿರುತ್ತಾರೆ. ತರಕಾರಿಗಳನ್ನು ಹೆಚ್ಚುತ್ತಾರೆ. ಇವರೆಲ್ಲರೂ ತಮ್ಮ ಜವಾಬ್ದಾರಿಗಳನ್ನು ಪೂರೈಸಲು ಇದನ್ನು ಮಾಡುತ್ತಾರೆ. ಅಥವಾ ಇವರಿಂದ ಅವರಿಗೇನಾದರೂ ಸಂತೋಷ ಸಿಗುತ್ತದೋ? ಇಂತಹ ಅನೇಕ ಪ್ರಶ್ನೆಗಳು ನಿಮ್ಮ ಮನಸ್ಸಿನಲ್ಲಿ ಉದ್ಭವಿಸುತ್ತಿರುಬಹುದು. ನಿಮಗೆ ಒಂದೇ ಒಂದು ಉತ್ತರ ಸಿಗುತ್ತಿರಬಹುದು. ಅದೇನೆಂದರೆ, ದೈಹಿಕ ಶ್ರಮವನ್ನು ಜೀವನೋಪಾಯಕ್ಕಾಗಿ ಅಥವಾ ಜವಾಬ್ದಾರಿಗಳನ್ನು ಪೂರೈಸಲು ಮಾತ್ರ ಮಾಡಲಾಗುತ್ತದೆ. ಆಂತರಿಕ ಸಂತೋಷ ಮತ್ತು ಸಂತೃಪ್ತಿಗಾಗಿಯೂ ಇದನ್ನು ಮಾಡಲಾಗುತ್ತದೆ. ಶ್ರಮದಾನದ ಪ್ರಚಾರವನ್ನು ನೀವು ಕೇಳಿರಬಹುದು. ಯಾವುದೇ ವೈಯಕ್ತಿಕ ಲಾಭಗಳಿಲ್ಲದೆ ನೀವು ಕೆಲವೊಮ್ಮೆ ಕೆಲಸ ಮಾಡಿರಬಹುದು. ಇವೆಲ್ಲವನ್ನೂ ಏಕೆ ಮಾಡಲಾಗುತ್ತದೆಯೆಂದರೆ, ಉತ್ತಮ ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕಾಗಿ ದೈಹಿಕ ಶ್ರಮದ ಅವಶ್ಯಕತೆಯಿದೆ. ಮತ್ತು ಅದು ಸಂತೋಷ ಮತ್ತು ಸಂತೃಪ್ತಿಯನ್ನು ನೀಡುತ್ತದೆ. ಶ್ರಮ ಮತ್ತು ಸಂತೃಪ್ತಿಯ ಬಗೆಗಿನ ನಿಮ್ಮ ಅರಿವನ್ನು ಹೆಚ್ಚಿಸುವ ಸಲುವಾಗಿ ಒಂದು ಖಾಸಗಿ ಸಂಸ್ಥೆಯು ನಡೆಸುವ ಶಾಲೆಯೊಂದರ ಉದಾಹರಣೆಯನ್ನು ನಿಮಗೆ ನೀಡಲಾಗಿದೆ.

ರಾಷ್ಟ್ರೀಯ ರಾಜಧಾನಿ ಪ್ರದೇಶ (National Capital Region-NCR) ದಲ್ಲಿ ಖಾಸಗಿ ಸಂಸ್ಥೆಯೊಂದು ನಡೆಸುವ ಒಂದು ಶಾಲೆಯಿದೆ. ಇದನ್ನು ಸಾರ್ವಜನಿಕರ ಶಾಲೆ ಎಂದು ಕರೆಯಲಾಗುತ್ತದೆ. ಇಲ್ಲಿಗೆ ಬರುವ ಬಹುತೇಕರು ಶ್ರೀಮಂತ ಮಕ್ಕಳು. ಇವರಿಗೆ ತಮ್ಮ ನಿತ್ಯಜೀವನದಲ್ಲಿ ದೈಹಿಕ ಶ್ರಮದ ಅವಕಾಶವೇ ಸಿಗುವುದಿಲ್ಲ. ಈ ಶಾಲೆಯಲ್ಲಿನ 8ನೇ ತರಗತಿಯ ವಿದ್ಯಾರ್ಥಿಗಳು ಶಾಲೆಯ ಹೊರಗಿದ್ದ ಇಟ್ಟಿಗೆ ರಾಶಿಯನ್ನು ತೆರವುಗೊಳಿಸುವ ಸಲುವಾಗಿ ಕೆಲಸಗಾರರಂತೆ ಇಟ್ಟಿಗೆಗಳನ್ನು ಲೋಡ್ ಮಾಡಿದರು. ಅವರ ಮಕ್ಕಳಿಂದ  ದೈಹಿಕ ಶ್ರಮ ಮಾಡಿಸಿದ್ದರಿಂದ ಅವರು ಅನಾರೋಗ್ಯಕೊಳ್ಳಬಹುದು ಅಥವಾ ಅವರಿಗೆ ಸೋಂಕು ತಗುಲಬಹುದೆಂಬ ಅನೇಕ ಸಂದೇಹಗಳು ಪೋಷಕರಿಗೆ ಉಂಟಾದವು. ಆದರೆ ಇಟ್ಟಿಗೆಗಳನ್ನು ಲೋಡ್ ಮಾಡಿದ ನಂತರ ಮನಸ್ಸು ಮತ್ತು ತುಂಬಾ ಹಗುರವಾದಂತೆ ಭಾಸವಾಯಿತೆಂದು ಮಕ್ಕಳು ಹೇಳಿದರು. ಬೇರೆ ದಿನಗಳಿಗೆ ಹೋಲಿಸಿದರೆ ಅವರು ಹೆಚ್ಚು ಆಯಾಸಗೊಂಡಿದ್ದರು. ಆದರೆ ಅವರಿಗೆ ಒಂದು ರೀತಿಯ ತೃಪ್ತಿ ಸಿಗುತ್ತದೆ.

ನಿಮ್ಮ ಉತ್ತರದಲ್ಲಿ ಕೆಲಸ, ಸಂತೋಷ ಮತ್ತು ಸಂತೃಪ್ತಿಗಳು ತುಂಬಾ ನಿಕಟವಾದ ಸಂಬಂಧವನ್ನು ಹೊಂದಿವೆಯೆಂಬುದನ್ನು ನೀವು ಅರ್ಥಮಾಡಿಕೊಂಡಿದ್ದೀರೆಂಬುದು

ನಿಮ್ಮ ಉತ್ತರದಲ್ಲಿ ಅವ್ಯಕ್ತವಾಗಿದೆ.

ನಿಮ ಪಗ್ರತಿಯನ್ನು ಪರೀಕ್ಷಿಸಿ–1

1. ನಿಮ್ಮ ದಿನಚರಿಯಿಂದ ದೈಹಿಕ ಶ್ರಮವನ್ನು ಒಳಗೊಂಡಿರುವ ಯಾವುದಾದರೂ ಐದು ಕೆಲಸಗಳನ್ನು ಪಟ್ಟಿ ಮಾಡಿ.

___

___

2. ದೈಹಿಕ ಶ್ರಮದ ಮಹತ್ವವನ್ನು ಸ್ಪಷ್ಟೀಕರಿಸುವ ಯಾವುದಾದರೂ ಎರಡು ಅಂಶಗಳನ್ನು ಸೂಚಿಸಿ.

___

___

3. ಕೆಲಸವು ಸಂತೋಷ ಮತ್ತು ಸಂತೃಪ್ತಿಯಳೊಡನೆ ಹೇಗೆ ಸಂಬಂಧ ಹೊಂದಿದೆಯೆಂಬುದನ್ನು ಸ್ಪಷ್ಟಪಡಿಸಿ.

___

___

___

ಬಿಟ್ಟ ಜಾಗ ತುಂಬಿರಿ.

1. ದೈಹಿಕ ಶ್ರಮವು ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕೆ ---------
2. ಕಾರ್ಯವೆಂದರೆ ವೈಯಕ್ತಿಕ ಮತ್ತು ಸಮಾಜದ ಜವಾಬ್ದಾರಿಗಳನ್ನು ಪೂರೈಸುವ –----------- ಗೆ ಸಂಬಂಧಿಸಿದ್ದ ಎಲ್ಲಾ ಚಟುವಟಿಕೆಗಳಾಗಿವೆ.
3. ---------ಅನುಭವಗಳು ವೈಜ್ಞಾನಿಕ ಸಿದ್ಧಾಂತಗಳನ್ನು ಪ್ರತಿಪಾದಿಸುವಲ್ಲಿ ನೆರವಾಗುತ್ತವೆ.

## 12.3 ಶಿಕ್ಷಣದಲ್ಲಿ ಕಾರ್ಯ:

ಶಿಕ್ಷಣ ವ್ಯವಸ್ಥೆಯಲ್ಲಿ ಸಂಪೂರ್ಣ ಬದಲಾವಣೆಯನ್ನು ನಾವು ತರಬೇಕಾಗಿದೆ. ಮೆದುಳಿಗೆ ಕೈನ ಮೂಲಕ ಶಿಕ್ಷಣ ನೀಡಬೇಕಾಗಿದೆ. ನಾನೇನಾದರೂ ಒಬ್ಬ ಕವಿಯಾಗಿದ್ದರೆ, ಎಲ್ಲಾ ಐದು ಬೆರಳುಗಳ ಸಾಧ್ಯತೆಗಳ ಬಗ್ಗೆ ಕವನವೊಂದನ್ನು ಬರೆಯುತ್ತೇನೆ. ಮೆದುಳೇ ಎಲ್ಲವೂ, ಅಂಗಾಂಗಗಳು ಏನೂ ಅಲ್ಲವೆಂದು ನೀವು ಯಾಕೆ ಯೋಚಿಸುತ್ತೀರಿ? ತಮ್ಮ ಕೈಗಳಿಗೆ ತರಬೇತಿ ನೀಡದೆ ಸಾಮಾನ್ಯ ಶಿಕ್ಷಣವನ್ನು ಪಡೆಯುವ ಜನರಿಗೆ ಜೀವನದ ಸಂಗೀತವಿಲ್ಲ. ಅವರ ದೇಹದ ಪ್ರತಿಯೊಂದು ಭಾಗವು ತರಭೇತಿ ಪಡೆದಿಲ್ಲ. ಕೇವಲ ಪುಸ್ತಕ ಜ್ಞಾನ ಸಂಪೂರ್ಣವಾಗಿ ಏಕಾಗ್ರತೆ ಹೊಂದುವಂತಹ ಕುತೂಹಲವನ್ನು ಉದ್ದೀಪನಗೊಳಿಸಲಾರದು. ಕೇವಲ ಪದಗಳ ಮೂಲಕ ನೀಡಲಾಗುವ ಶಿಕ್ಷಣವು ಆಯಾಸಗೊಳಿಸುತ್ತದೆ ಮತ್ತು ಮಗುವಿನ ಮನಸ್ಸು ಬೇರೆ ಕಡೆಗೆ ಹರಿಯುವಂತೆ ಮಾಡುತ್ತದೆ.

ಶಿಕ್ಷಾರ್ಥಿ, ಶಿಕ್ಷಕರೊಡನೆ ಮಹಾತ್ಮಗಾಂಧಿಯವರ ಸಂಭಾಷಣೆ, ಹರಿಜನ, 18 ಫೆಬ್ರವರಿ 1939.

ಮೇಲೆ ನೀಡಿರುವ ಗಾಂಧೀಜಿಯವರ ಹೇಳಿಕೆಯನ್ನು ನೀವು ಓದಿ ಆಶ್ಚರ್ಯವಾಗುತ್ತದೆ. ದೈಹಿಕ ಕೆಲಸವನ್ನು ಶಿಕ್ಷಣದ ಕಡ್ಡಾಯ ಭಾಗವಾಗಿ ನೋಡಲು ಅವರು ಇಚ್ಛಿಸುತ್ತಾರೆ. ಅನೇಕ ಸಮಾಜ

ವಿಜ್ಞಾನಿಗಳು ಮತ್ತು ಶಿಕ್ಷಣ ತಜ್ಞರು ಕೆಲಸಾಧಾರಿತ ಶಿಕ್ಷಣವನ್ನು ಶಿಫಾರಸ್ಸು ಮಾಡಿದ್ದಾರೆ. ಪಾಶ್ಚಿಮಾತ್ಯ ದೇಶಗಳಲ್ಲಿ ಅನೇಕ ಕೆಲಸಾಧಾರಿತ ಶೈಕ್ಷಣಿಕ ಕಾರ್ಯಕ್ರಮಗಳನ್ನು ಪ್ರಾರಂಭಿಸಲಾಗಿದೆ. ವಾಸ್ತವವಾಗಿ ಜೀವನದ ವಿಭಿನ್ನ ಸನ್ನಿವೇಶಗಳಲ್ಲಿ ಉತ್ಪಾದಕ ಕೆಲಸವು ಮನುಷ್ಯನ ಅತ್ಯುತ್ತಮ ಶಿಕ್ಷಕನಾಗಿರುತ್ತದೆ. ಇದು ಜ್ಞಾನಕ್ಕೆ ಕೊಡುಗೆ ನೀಡುವುದರ ಜೊತೆಗೆ ಮನುಷ್ಯನ ಸಾಮರ್ಥ್ಯಗಳು ಮತ್ತು ಮೌಲ್ಯಗಳನ್ನು ಅಭಿವೃದ್ಧಿ ಪಡಿಸುತ್ತದೆ. ಆಧುನಿಕ ಶಿಕ್ಷಣ ವ್ಯವಸ್ಥೆಯಲ್ಲಿ ಕೆಲಸದೊಡನೆ ಸಂಬಂಧವಿಲ್ಲದ ಶಾಲಾ ಶಿಕ್ಷಣವನ್ನು ಪೂರ್ಣಗೊಳಿಸಿದ ಬಹುತೇಕ ವಿದ್ಯಾರ್ಥಿಗಳು ನಿಜ ಜೀವನದಲ್ಲಿ ವಿಫಲವಾಗಿದ್ದಾರೆಂಬುದು ವಿವಿಧ ಸಂಶೋಧನೆಗಳಿಂದ ಕಂಡುಬಂದಿದೆ. ಪುಸ್ತಕ ಜ್ಞಾನವನ್ನು ಪಡೆಯಲೂ ಅವರಿಂದ ಸಾಧ್ಯವಿಲ್ಲ. ಕಾರ್ಯ ಸಂಬಂಧಿ ಶೈಕ್ಷಣಿಕ ಅನುಭವವು ಮಕ್ಕಳ ಅಭಿವೃದ್ಧಿಗೆ ಹೆಚ್ಚು ಪರಿಣಾಮಕಾರಿ ಹಾಗೂ ಅತ್ಯವಶ್ಯಕವಾದುದೆಂಬುದನ್ನು ಸಂಶೋಧಕರು ತೋರಿಸುತ್ತಾರೆ. ಇದು ಒಂದು ಜಾತ್ಯಾತೀತ ಮತ್ತು ಪ್ರಜಾಸತ್ತಾತ್ಮಕ ಸಮಾಜವನ್ನು ನಿರ್ಮಿಸಬಲ್ಲದು. ಭಾರತೀಯ ಸಮಾಜದಲ್ಲಿ ವಿವಿಧ ರೂಪಗಳಲ್ಲಿ ಮತ್ತು ವಿವಿಧ ಕ್ಷೇತ್ರಗಳಲ್ಲಿ ಕಂಡುಬರುವ ಕೆಲಸವು ಶಿಕ್ಷಣವನ್ನು ಸಾಂದರ್ಭಿಕ ಮತ್ತು ಅರ್ಥಪೂರ್ಣಗೊಳಿಸಿದೆ. ಇದು ವಿದ್ಯಾರ್ಥಿಗಳು ಮತ್ತು ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂದರ್ಭಗಳೊಂದಿಗೆ ಸಂಬಂಧವೇರ್ಪಡಿಸುತ್ತದೆ. ಶಿಕ್ಷಣದ ನಿಜವಾದ ಮತ್ತು ಆದರ್ಶಮಯ ಜವಾಬ್ದಾರಿಯೇನೆಂದರೆ, ವಿದ್ಯಾರ್ಥಿಗಳನ್ನು ಜೀವನದಲ್ಲಿ ಸವಾಲುಗಳನ್ನು ಎದುರಿಸಲು ಸಿದ್ಧಪಡಿಸುವುದು. ಈ ಗುರಿಯನ್ನು ಸಾಧಿಸಬೇಕಾದರೆ ಜೀವನಕ್ಕೆ ಸಂಬಂಧಿಸಿದ ಕೌಶಲ್ಯಗಳು, ಕರಕುಶಲ ಮತ್ತು ಇತರೆ ಕೆಲಸ ಕೌಶಲ್ಯಗಳಿಗೆ ಮಹತ್ವವನ್ನು ನೀಡಬೇಕಾದ ಅವಶ್ಯಕತೆಯಿದೆ. ಈ ರೀತಿಯ ಸಾಮರ್ಥ್ಯಗಳನ್ನು ಶಿಕ್ಷಣದ ಮೂಲಕ ಅಭಿವೃದ್ಧಿಪಡಿಸಬೇಕು.ಇದು ಮಕ್ಕಳಿಗೆ ಜೀವನದ ಬೇಡಿಕೆಗಳು ಮತ್ತು ಸವಾಲುಗಳನ್ನು ಎದುರಿಸುವ ಸಾಮರ್ಥ್ಯವನ್ನು ನೀಡುವುದರ ಜೊತೆಗೆ ಅವರ ಸಕಾರಾತ್ಮಕ ಅಭಿವೃದ್ಧಿಗೆ ನೆರವಾಗುತ್ತದೆ. ವಿದ್ಯಾರ್ಥಿಗಳು ಪುಸ್ತಕ ಮಾಹಿತಿಯ ಮಿತಿಗಳಿಂದ ಹೊರಬಂದು ಕೆಲಸದ ವಿಶ್ವವನ್ನು ಪ್ರವೇಶಿಸಿದಾಗ ಮಾತ್ರ ಇದು ಸಾಧ್ಯವಾಗುತ್ತದೆ.

ಕೆಲಸದೊಡನೆ ಒಡನಾಟವು ಮಕ್ಕಳನ್ನು ಅವರ ಸಾಮಾಜಿಕ ಮತ್ತು ನೈಸರ್ಗಿಕ ಪರಿಸರದ ಸಮೀಪಕ್ಕೆ ತರುತ್ತದೆ. ಅವರಿಗೆ ನೈಸರ್ಗಿಕ ಸಂಪನ್ಮೂಲಗಳನ್ನು ಪರಿಚಯಿಸುತ್ತದೆ ಮತ್ತು ಅವರನ್ನು ಭವಿಷ್ಯದ ವೃತ್ತಿ ಜೀವನಕ್ಕೆ ಸಿದ್ಧಗೊಳಿಸುತ್ತದೆ. ಕೆಲಸದ ಆಧಾರದ ಮೇಲಿನ ಸಾಮಾಜೀಕರಣ ಪ್ರಕ್ರಿಯೆಯು ಮಕ್ಕಳನ್ನು ಸಾಮಾಜಿಕ ಸಂಬಂಧಗಳ ಜಾಲಗಳೊಂದಿಗೆ ಸಂಪರ್ಕಿಸುತ್ತದೆ. ಐಷಾರಾಮಿ ಸಾಮಾಜಿಕ ಆರ್ಥಿಕ ವರ್ಗಕ್ಕೆ ಸೇರಿರುವುದರಿಂದಾಗಿ, ಕೆಲಸದ ಪ್ರಪಂಚಕ್ಕೆ ಅಪರಿಚಿತರಾದ ಮಕ್ಕಳು ಅಪಾರವಾದ ಅವಶ್ಯಕ ಅಥವಾ ಅನವಶ್ಯಕ ಮಾಹಿತಿಯ ಉಗ್ರಾಣಗಳಾಗಿರುತ್ತಾರೆ. ಆದರೆ ವಿವಿಧ ವೃತ್ತಿಗಳಲ್ಲಿ ಕೆಲಸ ಮಾಡುವ ಮಕ್ಕಳಿಗಿಂತ ಕಡಿಮೆಯಿರುತ್ತಾರೆಂಬುದನ್ನು ನೀವು ಗಮನಿಸಬಹುದು.

ಸಂಪೂರ್ಣ ಶೈಕ್ಷಣಿಕ ದಿನಚರಿಯಲ್ಲಿ ಕೆಲಸವನ್ನು ಸೇರಿಸುವ ಮೂಲಕ ಪ್ರತಿಯೊಂದು ಸನ್ನಿವೇಶದಲ್ಲಿ ಮಕ್ಕಳು–

- ಸಮುದಾಯ ಸಂಪನ್ಮೂಲಗಳ ಅರ್ಥಪೂರ್ಣ ಜ್ಞಾನವನ್ನು ಹೊಂದಿರುತ್ತಾರೆ.
- ಗುಣಮಟ್ಟದ ಜೀವನವನ್ನು ನಡೆಸಲು ಬೇಕಾಗಿರುವ ಕೌಶಲ್ಯಗಳನ್ನು ಕಲಿಯಬಹುದು.
- ಸ್ಥಳೀಯ ಅರ್ಥಿಕತೆಯಲ್ಲಿ ಲಭ್ಯವಿರುವ ಜೀವನೋಪಾಯವನ್ನು ಗಮನಿಸುವ ಕೌಶಲ್ಯವನ್ನು ಬೆಳೆಸಿಕೊಳ್ಳಬಹುದು.
- ಕೆಲಸ ಮಾಡುತ್ತಲೇ ಅವರ ಉನ್ನತ ಶಿಕ್ಷಣವನ್ನು ಪೂರೈಸುವ ಅವಕಾಶ ಸಿಗಬಹುದು.
- ಶ್ರಮದ ದುಡಿಮೆಯ ಕೆಲಸದ ಬಗ್ಗೆ ಹೆಮ್ಮೆ ಪಡಬಹುದು.

- ಶಾಲಾ ದಿನಚರಿಯಲ್ಲಿ ರಚನಾತ್ಮಕ ಬದಲಾವಣೆಯನ್ನು ಗಮನಿಸಬಹುದು.

ಶ್ರಮದ ಘನತೆಯನ್ನು ಒಪ್ಪಿಕೊಳ್ಳದ ಶೈಕ್ಷಣಿಕ ಸಂಸ್ಥೆಗಳು ಅವರದೇ ದೇಶದ ಬೌದ್ಧಿಕ, ಸಾಂಸ್ಕೃತಿಕ ಮತ್ತು ಐತಿಹಾಸಿಕ ಪರಂಪರೆ ತಿಳಿಯದ ಮಕ್ಕಳನ್ನು ಸಿದ್ಧಗೊಳಿಸುತ್ತಾರೆ. ಕೆಲಸದಿಂದ ವಂಚಿತವಾದ ಶಿಕ್ಷಣವು ಅಸಮಂಜಸವಾದ ಮಾಹಿತಿಯನ್ನು ಮಕ್ಕಳಿಗೆ ನೀಡಬಹುದು. ಆದರೆ ಅದು ಕ್ರಿಯಾಶೀಲ ಮತ್ತು ಜವಾಬ್ದಾರಿಯುತ ನಾಗರೀಕನನ್ನು ಸೃಷ್ಟಿಸಲಾರದು.

### 12.3.1 ಕಾರ್ಯಶಿಕ್ಷಣದ ಪರಿಕಲ್ಪನೆ ಮತ್ತು ಅರ್ಥ

ಪ್ರತಿಯೊಂದು ದೇಶದಲ್ಲಿ ಶಿಕ್ಷಣದ ಪ್ರಮುಖ ಉದ್ದೇಶವು ಆ ದೇಶದ ನಾಗರೀಕರಿಗೆ ಅವರ ಜೀವನವಿಡೀ ಅಗತ್ಯವಿರುವ ಪ್ರತಿಭೆಗಳು ಮತ್ತು ಕೌಶಲ್ಯಗಳನ್ನು ಅಭಿವೃದ್ಧಿಪಡಿಸಿಕೊಳ್ಳಲು ಅವಕಾಶಗಳನ್ನು ನೀಡುವಂತಹ ಶೈಕ್ಷಣಿಕ ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸುವುದಾಗಿದೆ. ದೈಹಿಕ ಶ್ರಮವನ್ನು ಶಿಕ್ಷಣದೊಡನೆ ಸಹಯೋಗಗೊಳಿಸಬೇಕಾದುದನ್ನು ಕಡ್ಡಾಯವಾಗಿ ನಿರ್ಧರಿಸಬೇಕಿದೆ. ಅಂದರೆ, ಕೆಲಸ ಶಿಕ್ಷಣವನ್ನು ಶಿಕ್ಷಣದ ಒಂದು ಅವಿಭಾಜ್ಯ ಭಾಗವನ್ನಾಗಿಸಬೇಕಾಗಿದೆ.

ಕಾರ್ಯ ಶಿಕ್ಷಣವನ್ನು ಶೈಕ್ಷಣಿಕ ಪ್ರಕ್ರಿಯೆಯ ಒಂದು ಅಂತರ್ಗತವಾದ ಭಾಗವಾಗಿ ಸಂಘಟಿಸುವ ಮೂಲಕ ಅದನ್ನು ಒಂದು ಉದ್ದೇಶಪೂರ್ವಕ ಮತ್ತು ಅರ್ಥಪೂರ್ಣವಾ ದೈಹಿಕ ಶ್ರಮವೆಂದು ಪರಿಗಣಿಸಲಾಗಿದೆ. ಮಕ್ಕಳು ಸಂತೃಪ್ತಿ ಮತ್ತು ಸಂತೋಷದ ಅನುಭವವನ್ನು ಹಂಚಿಕೊಳ್ಳುವ ಅರ್ಥಪೂರ್ಣವಾದ ಭೌತಿಕ ಮತ್ತು ಸಾಮುದಾಯಿಕ ಸೇವೆಯ ಸೃಷ್ಟಿಯೆಂದು ಇದನ್ನು ಪರಿಗಣಿಸಲಾಗುತ್ತದೆ. ಕಾರ್ಯಶಿಕ್ಷಣವು ಜ್ಞಾನ, ತಿಳುವಳಿಕೆ, ಪ್ರಾಯೋಗಿಕ ಕೌಶಲ್ಯಗಳನ್ನು ಶೈಕ್ಷಣಿಕ ಚಟುವಟಿಕೆಗಳಲ್ಲಿ ಸೇರಿಸಬೇಕೆಂಬುದಕ್ಕೆ ಒತ್ತು ನೀಡುತ್ತದೆ. ಕೆಳಕಂಡ ಅಂಶಗಳ ಮೂಲಕ ಕಾರ್ಯಶಿಕ್ಷಣದ ಪರಿಕಲ್ಪನೆಯನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳಬಹುದು.

ಕಾರ್ಯಶಿಕ್ಷಣ:

- ಇದು ಕೈ ಮತ್ತು ಮೆದುಳಿನ ನಡುವೆ ಹೊಂದಾಣಿಕೆಯನ್ನು ಏರ್ಪಡಿಸುತ್ತದೆ.
- ಶೈಕ್ಷಣಿಕ ಚಟುವಟಿಕೆಗಳಲ್ಲಿ ಸಾಮಾಜಿಕ ಉಪಯುಕ್ತವಾದ ದೈಹಿಕ ಶ್ರಮವು ಅಂತರ್ಗತವಾಗಿರುತ್ತದೆ.
- ಕಲಿಕೆಯ ಪ್ರಕ್ರಿಯೆಗಳಲ್ಲಿ ಇದು ಒಂದು ಅವಶ್ಯಕವಾದ ಮತ್ತು ಮಹತ್ವದ ಅಂಶವಾಗಿದೆ.
- ಸಮುದಾಯಕ್ಕೆ ಉಪಯುಕ್ತವಾದ ಸೇವೆಗಳು ಮತ್ತು ಉತ್ಪಾದಕ ಕೆಲಸದ ರೂಪದಲ್ಲಿ ಇದು ಕಂಡು ಬರುತ್ತದೆ.
- ಇರಬಹುದಂತಹ ಶೈಕ್ಷಣಿಕ ವ್ಯವಸ್ಥೆಯಲ್ಲಿ ಶಿಕ್ಷಣದ ಎಲ್ಲಾ ವಿಷಯಗಳನ್ನು ಹೊಂದಿರುವ ಒಂಧು ಅವಶ್ಯಕ ಅಂಶವಾಗಿದೆ.
- ಇದನ್ನು ಮಾಡುವುದರ ಮೂಲಕ ಕಲಿಯುವ ತತ್ವದ ಮೇಲೆ ಆಧಾರಿತವಾಗಿದೆ.

ಕಾರ್ಯಶಿಕ್ಷಣದ ಅಂತರ್ಗತ ಚಟುವಟಿಕೆಗಳು:

- ಸಮಸ್ಯೆ ಪರಿಹರಿಸುವ, ನಿರ್ಣಾಯಕ ಚಿಂತನೆಯ ಮತ್ತು ನಿರ್ಧಾರ ಕೈಗೊಳ್ಳುವಂಥಹ ಕೌಶಲ್ಯಗಳನ್ನು ಅಭಿವೃದ್ಧಿ ಪಡಿಸುತ್ತದೆ.
- ಎಲ್ಲಾ ವಿಷಯಗಳನ್ನು ಬೋಧಿಸುವ ಶಿಕ್ಷಕರ ಸಹಭಾಗಿತ್ವವನ್ನು ಆಹ್ವಾನಿಸುತ್ತದೆ.
- ಇದು ಮಕ್ಕಳ ಅಗತ್ಯಗಳು, ಆಸಕ್ತಿಗಳು ಮತ್ತು ಸಾಮರ್ಥ್ಯಗಳ ಮೇಲೆ ಆಧಾರಿತವಾಗಿದೆ.
- ಶಿಕ್ಷಣದ ವಿವಿಧ ಹಂತಗಳಿಗೆ ತಕ್ಕಂತೆ ವಿದ್ಯಾರ್ಥಿಗಳ ಸಾಮರ್ಥ್ಯಗಳನ್ನು ಅಭಿವೃದ್ಧಿಪಡಿಸುತ್ತದೆ.
- ವ್ಯಕ್ತಿತ್ವದ ಅಭಿವೃದ್ಧಿಗೆ ನೆರವಾಗುತ್ತದೆ.
- ವೃತ್ತಿಪರ ಸಿದ್ಧತೆ ಮತ್ತು ಉತ್ಪಾದನೆಯಲ್ಲಿ ದಕ್ಷತೆಯನ್ನು ಅಭಿವೃದ್ಧಿಸುತ್ತದೆ ಮತ್ತು ಹೆಚ್ಚಿಸುತ್ತದೆ.
- ವಿವಿಧ ಸಾಧನಗಳು, ತಂತ್ರಗಳು, ವಿಧಾನಗಳನ್ನು ಮತ್ತು ವಸ್ತುಗಳೊಡನೆ ಕಾರ್ಯನಿರ್ವಹಿಸುವ ಅವಕಾಶವನ್ನು ಒದಗಿಸುತ್ತದೆ.
- ಸಮುದಾಯ ಸೇವೆಗಳಿಗೆ ಸಂಬಂಧಿಸಿದ ಪರಿಸ್ಥಿತಿಗಳನ್ನು ಅನುಭವಿಸುವ ಅವಕಾಶಗಳನ್ನು ನೀಡುತ್ತದೆ.
- ಕೆಲಸದ ಜಗತ್ತಿಗೆ ಪರಿಚಯಿಸುತ್ತದೆ.

ಕಾರ್ಯಶಿಕ್ಷಣದ ಯಶಸ್ಸಿಗೆ ಅಗತ್ಯವಿರುವ ಅಂಶಗಳು:

- ವಿಶಾಲ ಮನೋಭಾವ
- ಶ್ರಮದ ಘನತೆ ಮತ್ತು ಸಕಾರಾತ್ಮಕ ಧೋರಣೆ
- ಸಮುದಾಯ ಮತ್ತು ಶಾಲೆಯ ನಡುವೆ ಸಕಾರಾತ್ಮಕ ಸಂಬಂಧ
- ಸಹಕಾರದ ಭಾವನೆಗಳು.
- ಕಲ್ಪನಾತ್ಮಕ ಮತ್ತು ಸೃಜನಾತ್ಮಕ ಬುದ್ಧಿಸಾಮರ್ಥ್ಯ

ರವೀಂದ್ರನಾಥ ಟ್ಯಾಗೋರರ ನುಡಿಗಳಲ್ಲಿ
"ಸಾಂಸ್ಕೃತಿಕ ಪುನರ್‌ಜಾಗೃತಿಗಾಗಿ ಶಿಕ್ಷಣವನ್ನು ದೈಹಿಕ ಶ್ರಮದಿಂದ ಪ್ರತ್ಯೇಕಿಸಲಾಗುವುದಿಲ್ಲ. ಪ್ರತಿಯೊಬ್ಬ ವಿದ್ಯಾರ್ಥಿಯೂ ಅವನ ನಿರ್ದಿಷ್ಟ ಸಮುದಾಯದ ಕಾರ್ಯಕ್ಷೇತ್ರದಿಂದ ಹೊರಬಂದು ಮಾನವನ ಸೇವೆಯ ಕೆಲವು ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕು. ಕೆಲಸವನ್ನು ಶಿಕ್ಷಣದ ಮಾಧ್ಯಮವೆಂದು ಸ್ವೀಕರಿಸಬೇಕು. ಏಕೆಂದರೆ, ಅನುಭವಗಳು ನಮ್ಮ ಮೆದುಳಿನ ಕಿಟಕಿಗಳಾಗಿವೆ".

ಮೇಲ್ಕಂಡ ವಿವರಣೆಯ ಆಧಾರದ ಮೇಲೆ ಕಾರ್ಯಶಿಕ್ಷಣದ ಪರಿಕಲ್ಪನೆ ಮತ್ತು ಅರ್ಥವನ್ನು ನೀವು ತಿಳಿದುಕೊಂಡಿರಬಹುದು. ಒಟ್ಟಿನಲ್ಲಿ ಹೇಳುವುದಾದರೆ, ಕೆಲಸ ಶಿಕ್ಷಣವು ದೈಹಿಕ ಶ್ರಮದಿಂದ ಕೂಡಿದ ಉದ್ದೇಶಪೂರ್ವಕ ಮತ್ತು ಅರ್ಥಪೂರ್ಣ ಚಟುವಟಿಕೆಯಾಗಿದೆ. ಇದನ್ನು ಶಾಲಾ ಪಠ್ಯಕ್ರಮದ ಎಲ್ಲಾ ಹಂತಗಳಲ್ಲಿ ಒಂದು ಸಂಘಟನಾತ್ಮಕ ಮತ್ತು ವ್ಯವಸ್ಥಿತ ರೀತಿಯಲ್ಲಿ ಸೇರಿಸಲಾಗಿದ್ದು, ಇದು ಒಂದು ಉತ್ಪನ್ನ ಅಥವಾ ಸಾಮಾಜಿಕ ಸೇವೆಯ ರೂಪದಲ್ಲಿ ಕಂಡುಬರುತ್ತದೆ.

## 12.3.2. ಕಾರ್ಯ ಶಿಕ್ಷಣದ ಮಹತ್ವ:

ಬ್ರಿಟಿಷ್ ಸಾಮ್ರಾಜ್ಯದಿಂದ ಸ್ವಾತಂತ್ರ್ಯ ಪಡೆಯುವುದಕ್ಕಿಂತ ಮುಂಚೆಯೇ 1906ರಲ್ಲಿ ಭಾರತದ ರಾಷ್ಟ್ರೀಯ ಕಾಂಗ್ರೇಸ್ ಮಕ್ಕಳಿಗೆ ರಾಷ್ಟ್ರೀಯ ಶಿಕ್ಷಣದ ಅಗತ್ಯತೆಯನ್ನು ಹೊರತಂದಿತು. ಈ ಸಮಸ್ಯೆಗೆ ಪರಿಹಾರವು ರಾಷ್ಟ್ರೀಯ ಹಿತಾಸಕ್ತಿಯನ್ನು ಸಂರಕ್ಷಿಸುವ, ರಾಷ್ಟ್ರೀಯ ಉದ್ದೇಶಗಳನ್ನು ಸಾಧಿಸುವ ಮಾರ್ಗವನ್ನು ಅನುಸರಿಸುವ, ಮೂಲಭೂತ ಹಂತದಲ್ಲಿ ಅವುಗಳನ್ನು ಪರಿಗಣಿಸಿದ ನಂತರ ಸಮಾಜದ ಅಗತ್ಯಗಳನ್ನು ಪೂರೈಸುವ ಸಾಹಿತ್ಯ, ವಿಜ್ಞಾನ, ಕಲೆ ಮತ್ತು ತಂತ್ರಜ್ಞಾನಗಳ ಮೂಲಕ ಅಭಿವೃದ್ಧಿ ಹೊಂದುವ ಅವಕಾಶಗಳಿರುವಂತಹ ಶಿಕ್ಷಣ ನೀತಿಯಲ್ಲಿತ್ತು.

ಮುರಿದುಬೀಳುತ್ತಿರುವ ಸಮಾಜವನ್ನು ಜೋಡಿಸುವಂತಹ ಶೈಕ್ಷಣಿಕ ವ್ಯವಸ್ಥೆಯೊಂದರ ಪ್ರಾಕಲ್ಪನೆಯನ್ನು ಮಾಡಿಕೊಳ್ಳಲಾಯಿತು. ಕಡಿಮೆಯಾಗುತ್ತಿರುವ ಸಾಮಾಜಿಕ ಮೌಲ್ಯಗಳ ಹಾರದಲ್ಲಿ ಹುದುಗಿಸಲಾಗಿರುವಂತಹ ಹಾಗೂ ಕೆಲಸ ಮತ್ತು ಶಿಕ್ಷಣದ ನಡುವಿನ ಅಂತರ ಸೇತುವೆಯಾಗಿರುವಂತಹ ಶಿಕ್ಷಣ ವ್ಯವಸ್ಥೆ ಬೇಕಾಗಿದೆ.

ಈ ಉದ್ದೇಶವನ್ನು ಪೂರೈಸಲು ಕಾರ್ಯಶಿಕ್ಷಣವನ್ನು ಒಂದು ಉನ್ನತ ಅವಶ್ಯಕತೆಯಾಗಿ ಕಾಣಲಾಯಿತು. ಕಾರ್ಯಶಿಕ್ಷಣದ ಮಹತ್ವವನ್ನು ಕೆಳಕಂಡ ದೃಷ್ಟಿಕೋನದಲ್ಲಿ ಅರ್ಥ ಮಾಡಿಕೊಳ್ಳಬಹುದು.

1. ಇದು ಅವರ ದೇಹದ ಮೂಲಭೂತ ಅವಶ್ಯಕತೆಗಳನ್ನು ಪೂರೈಸಲು ಬೇಕಿರುವ ನಿಯಮಿತ ಅಭ್ಯಾಸಗಳು ಮತ್ತು ಸಕಾರಾತ್ಮಕ ಧೋರಣೆಯನ್ನು ಅಭಿವೃದ್ಧಿಪಡಿಸುತ್ತದೆ.
2. ಅವರ ವಾತಾವರಣದ ಕುರಿತು ಸೂಕ್ಷ್ಮಗ್ರಾಹಿಗಳಾಗಿವೆ. ಅರಿವುಂಟು ಮಾಡುವುದು ಹಾಗು ಮಾನವೀಯತೆ ಮತ್ತು ಪರಿಸರದ ನಡುವಿನ ಅಂತರ ಸಂಬಂಧವನ್ನು ಅರ್ಥಮಾಡಿಕೊಳ್ಳುವುದು.
3. ದೈಹಿಕ ಕೆಲಸ ಮತ್ತು ಶ್ರಮದ ಮಹತ್ವದ ಬಗೆಗೆ ಅರ್ಥಮಾಡಿಕೊಳ್ಳುವ ಮತ್ತು ಹೆಮ್ಮೆಪಡುವುದನ್ನು ಅಭಿವೃದ್ಧಿಪಡಿಸುವುದು.
4. ಇದು ಸಾಮಾಜಿಕವಾಗಿ ಅಪೇಕ್ಷಣೀಯವಾದ ಮೌಲ್ಯಗಳನ್ನು ಬೆಳೆಸಿಕೊಳ್ಳಲು ನೆರವಾಗುತ್ತದೆ. ನಿಯಮಿತತೆ, ಸಮಯಪಾಲನೆ, ಸ್ವಚ್ಛತೆ, ಸ್ವನಿಯಂತ್ರಣ, ಅವಿರತ ಪ್ರಯತ್ನ, ಕರ್ತವ್ಯಪ್ರಜ್ಞೆ, ಸೇವಾ ಮನೋಭಾವ, ಜವಾಬ್ದಾರಿಯ ಭಾವನೆ, ಕಷ್ಟಪಡುವಿಕೆ, ಸಮಾನತೆಯ ಬಗೆಗೆ ಸೂಕ್ಷ್ಮಪ್ರಜ್ಞೆ, ಭ್ರಾತೃತ್ವ ಮುಂತಾದವುಗಳನ್ನು ಕೇವಲ ಪುಸ್ತಕಗಳನ್ನು ಓದುವುದರಿಂದ ಅಥವಾ ಪ್ರವಚನಗಳನ್ನು ಕೇಳುವುದರಿಂದ ಬೆಳೆಸಿಕೊಳ್ಳಲು ಸಾಧ್ಯವಿಲ್ಲ. ಬದಲಾಗಿ, ವಿದ್ಯಾರ್ಥಿಗಳು ಪರಸ್ಪರರ ಜೊತೆ ವಿವಿಧ ಚಟುವಟಿಕೆಗಳನ್ನು ಕೈಗೊಂಡಾಗ ಬೆಳೆಸಿಕೊಳ್ಳಬಹುದು. ಆಗ ಸಾಮಾಜಿಕವಾಗಿ ಅಪೇಕ್ಷಣೀಯವಾದ ಗುಣಗಳು/ಮೌಲ್ಯಗಳು ಸ್ವಾಭಾವಿಕವಾಗಿ ಅಭಿವೃದ್ಧಿಯಾಗುತ್ತದೆ.
5. ಕಾರ್ಯಶಿಕ್ಷಣವು ಪೌಷ್ಠಿಕತೆ ಆಹಾರ ಸಾಂಕ್ರಾಮಿಕ ರೋಗಗಳು ಮತ್ತು ಆರೋಗ್ಯಕ್ಕೆ ಸಂಬಂಧಿಸಿದ ಮಾಹಿತಿಯನ್ನು ನೀಡುತ್ತಾರೆ. ಅವರು ಕಾರ್ಯಶಿಕ್ಷಣದ ಮೂಲಕ ಸಮುದಾಯ ಸ್ವಚ್ಛತೆಯನ್ನು ಕಾಪಾಡುವುದರ ಬಗ್ಗೆ ಎಚ್ಚರಿಕೆ ಮತ್ತು ತಿಳುವಳಿಕೆಯನ್ನು ಪಡೆದುಕೊಳ್ಳುತ್ತಾರೆ.
6. ಸ್ವಯಂ ಅಭಿವ್ಯಕ್ತಿ ಮತ್ತು ಸೃಜನಶೀಲತೆಯ ಗುಣಗಳನ್ನು ಪೋಷಿಸುವುದು ಪ್ರತಿಯೊಂದು ಮಗುವೂ ಸೃಜನಶೀಲತೆ ಮತ್ತು ಕಲಾತ್ಮಕ ಅಭಿವ್ಯಕ್ತಿಯನ್ನು ಒಂದು ಸ್ವಾಭಾವಿಕ ಕುರುಹಾಗಿ ಹೊಂದಿರುವ ಸಾಧ್ಯತೆಯಿದೆ. ಕಾರ್ಯಶಿಕ್ಷಣವು ಕಲಾತ್ಮಕ ಚಟುವಟಿಕೆಗಳನ್ನು ಸಂಘಟಿಸಿದ ನಂತರ ವೈಯಕ್ತಿಕ ನೆಲೆಯಲ್ಲಿ ಸ್ವಯಂ ಅಭಿವ್ಯಕ್ತಿಗೆ ಅವಕಾಶವನು ಒದಗಿಸುತ್ತದೆ.

7. ಇದು ಸ್ಥಳೀಯ ಮತ್ತು ರಾಷ್ಟ್ರೀಯ ಸಾಂಸ್ಕೃತಿಕ ಪರಂಪರೆಯ ಸಂರಕ್ಷಣೆಯ ಭಾವನೆಗಳನ್ನು ಪ್ರಶಂಸಿಸುವ ಸಾಮರ್ಥ್ಯವನ್ನು ಪೋಷಿಸುತ್ತದೆ.
8. ಇದು ನಾಯಕತ್ವದ ಭಾವನೆಗಳು ಮತ್ತು ನಾಯಕತ್ವ ಕೌಶಲ್ಯಗಳನ್ನು ಪ್ರಾರಂಭಿಸಲು ಸಹಾಯ ಮಾಡುತ್ತದೆ. ಕೆಲವು ಮಕ್ಕಳು ಸ್ವಾಭಾವಿಕವಾಗಿಯೆ ಅಂತರ್ಮುಖಿಗಳಾಗಿದ್ದು, ಪ್ರಾರಂಭ ಮಾಡಲು ಹಿಂಜರಿಯುತ್ತಿರುತ್ತಾರೆ. ಕಾರ್ಯಶಿಕ್ಷಣವು ಸುಲಭವಾದ ಚಟುವಟಿಕೆಗಳ ಮೂಲಕ ನಾಯಕತ್ವವನ್ನು ಬೆಳೆಸಬಹುದಾದಂತಹ ಅನುಭವಗಳನ್ನು ಒದಗಿಸುತ್ತದೆ.

9. ಅವಶ್ಯಕ ಜೀವನ ಕೌಶಲ್ಯಗಳ ಅಭಿವೃದ್ಧಿ – ಶಿಕ್ಷಣದ ನಿಜವಾದ ಮತ್ತು ಆದರ್ಶಮಯ ಜವಾಬ್ದಾರಿಯು ಜೀವನದ ಸವಾಲುಗಳನ್ನು ಎದುರಿಸುವುದಕ್ಕೆ ಮಕ್ಕಳನ್ನು ಸಿದ್ಧಗೊಳಿಸುವುದಾಗಿದೆ. ಕೆಲಸ ಶಿಕ್ಷಣವು ಅವಶ್ಯಕ ಜೀವನ ಕೌಶಲ್ಯಗಳಾದ ಸಮಸ್ಯೆಗಳನ್ನು ಪರಿಹರಿಸುವುದು, ನಿರ್ಧಾರ ಕೈಗೊಳ್ಳುವುದು, ಸೃಜನಾತ್ಮಕ ಚಿಂತನೆ, ನಿರ್ಣಾಯಕ ಚಿಂತನೆ, ಅನುಭೂತಿ, ಪರಿಣಾಮಕಾರಿ ಸಂವಹನ ಇವುಗಳನ್ನು ಅಭಿವೃದ್ಧಿ ಪಡಿಸಿಕೊಳ್ಳಲು ನೆರವಾಗುತ್ತದೆ. ಮತ್ತು ಪ್ರತಿದಿನದ ಜೀವನದ ಬೇಡಿಕೆಗಳು ಮತ್ತು ಸವಾಲುಗಳನ್ನು ಪರಿಣಾಮಕಾರಿಯಾಗಿ ಎದುರಿಸುವ ಸಾಮರ್ಥ್ಯವನ್ನು ಮಕ್ಕಳಲ್ಲಿ ಬೆಳೆಸುತ್ತವೆ.

10. ಶಿಕ್ಷಣದ ಜೊತೆ ಕೆಲಸದ ಸಂಬಂಧವನ್ನು ಸ್ಥಾಪಿಸುತ್ತದೆ– ಕೆಲಸ ಶಿಕ್ಷಣವು ವಿವಿಧ ಕೆಲಸ ಪರಿಸ್ಥಿತಿಗಳನ್ನು ತಿಳಿಯಲು ಮತ್ತು ಅವುಗಳಲ್ಲಿ ಭಾಗವಹಿಸಲು ಅವಕಾಶವನ್ನು ಒದಗಿಸುತ್ತದೆ. ಇದು ಕೆಲಸ ಮತ್ತು ಕೆಲಸಗಾರ ದಿನಚರಿಯನ್ನು ತಿಳಿಯಲು ಪ್ರೇರೇಪಿಸುತ್ತದೆ.

11. ಶಾಲೆ ಮತ್ತು ಸಮುದಾಯದಲ್ಲಿ ಸಂಬಂಧ– ಇಡೀ ಶಾಲಾ ಕಾರ್ಯಕ್ರಮದಲ್ಲಿ ಬಹುಶಃ ಕಾರ್ಯಶಿಕ್ಷಣವು ಮಾತ್ರ ಪರಿಣಾಮಕಾರಿಯಾಗಿ ಶಾಲೆಯನ್ನು ಸಮಾಜದ ಸಮೀಪಕ್ಕೆ ತರುತ್ತದೆ. ಸಮುದಾಯದ ಸಾಂಸ್ಕೃತಿಕ ಮತ್ತು ಸಾಮಾಜಿಕ ಹಿನ್ನಲೆಯ ಪ್ರತಿಯೊಂದು ಪರಿಸ್ಥಿತಿಯ ಬಗ್ಗೆ ಕಾರ್ಯಶಿಕ್ಷಣವು ನಿಗಾವಹಿಸುತ್ತದೆ. ಇದು ಕುಶಲಕರ್ಮಿಗಳು ಅವರ ಪ್ರತಿಭೆ ಮತ್ತು ಕಲೆಯನ್ನು ಪ್ರದರ್ಶಿಸಲು ಆಹ್ವಾನಿಸುತ್ತದೆ.

## 12.4 ಸಾರಾಂಶಗೊಳಿಸೋಣ

ಕೆಲಸವು ಯಾವುದೇ ಸಾಮಾಜಿಕ, ಆರ್ಥಿಕ, ಅಥವಾ ಸಾಂಸ್ಕೃತಿಕ ಹಿನ್ನೆಲೆಯನ್ನು ಹೊಂದಿರುವ ಎಲ್ಲಾ ಮಕ್ಕಳ ಶಿಕ್ಷಣಕ್ಕೆ ಸಂಬಂಧಿಸಿದಂತೆ ಶೈಕ್ಷಣಿಕ ಮಹತ್ವವನ್ನು ಹೊಂದಿದೆ. ಕೆಲಸ ಮತ್ತು ಜ್ಞಾನಗಳು ಪ್ರತ್ಯೇಕ ಮಾರ್ಗವನ್ನು ಅಳವಡಿಸಿಕೊಳ್ಳುವ ಶಿಕ್ಷಣ ವ್ಯವಸ್ಥೆಯು ಸಮಾಜದ ಜೊತೆ ಸಂಬಂಧವನ್ನೇರ್ಪಡಿಸಿಕೊಳ್ಳಲು ಯಾವಾಗಲೂ ಸಾಧ್ಯವಿಲ್ಲ.ಇಂತಹ ಶಿಕ್ಷಣ ವ್ಯವಸ್ಥೆಯು ಸಮಾಜ ಮತ್ತು ಶಿಕ್ಷಣ ಸಂಸ್ಥೆಗಳ ನಡುವಿನ ಅಂತರವನ್ನು ಹೆಚ್ಚಿಸುತ್ತದೆ. ಕೆಲಸ ಮತ್ತು ಶಿಕ್ಷಣದ ನಡುವಿನ ಸಂಬಂಧದ ಕೊರತೆಯಿಂದಾಗಿ ಬಹುಶಃ ಇದು ಮಕ್ಕಳನ್ನು ಅವಶ್ಯಕ ಜೀವನ ಕೌಶಲ್ಯಗಳಿಂದ ವಂಚಿತರಾಗುವಂತೆ ಮಾಡುವ ಪ್ರಮುಖ ಅಂಶ ಇದಾಗಿದೆ. ದೈಹಿಕ ಶ್ರಮ ಮತ್ತು ಉತ್ಪಾದಕ ಕೆಲಸವನ್ನು ಶಾಲಾ ಪಠ್ಯಕ್ರಮದಲ್ಲಿ ಉನ್ನತಸ್ಥಾನದಲ್ಲಿರಿಸುವ ಮೂಲಕ ಶಿಕ್ಷಣವನ್ನು ಅರ್ಥಪೂರ್ಣ, ತಾರ್ಕಿಕ, ಮತ್ತು ಜೀವನಕ್ಕೆ ಉಪಯುಕ್ತವಾಗುವಂತೆ ಮಾಡಿದಂತಾಗುತ್ತದೆ. ನಿಜ ಜೀವನದ ಸನ್ನಿವೇಶಗಳಲ್ಲಿ ಉತ್ಪಾದನೆಗೆ ಸಂಬಂಧಿಸಿದ ಕೆಲಸಗಳು ವಿದ್ಯಾರ್ಥಿಗಳನ್ನು ಕಲಿಯುವ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿಸುವಲ್ಲಿ ಶೈಕ್ಷಣಿಕ ಮಹತ್ವವನ್ನು ಹೊಂದಿರುವುದಷ್ಟೆ ಅಲ್ಲದೆ ಜ್ಞಾನವನ್ನು ನೀಡುತ್ತದೆ ಮತ್ತು ಜೀವನ ಕೌಶಲ್ಯಗಳನ್ನು ಸ್ವಾಭಾವಿಕವಾಗಿ ಬೆಳೆಸುತ್ತದೆ. ಶಿಕ್ಷಣ ಮತ್ತು ಕೆಲಸದ ಸಡುವಣ ಸಂಪರ್ಕದ ಜೊತೆಗೆ ನೀವು ಕಾರ್ಯಶಿಕ್ಷಣದಲ್ಲಿ ಜ್ಞಾನ ಜೀವನ ಕೌಶಲು ಮತ್ತು ಮೌಲ್ಯಗಳ ಉದ್ದೇಶಗಳನ್ನು ಅರ್ಥಮಾಡಿಕೊಂಡಿರಿ. ಕಾರ್ಯಶಿಕ್ಷಣವು

ಮನೋವೈಜ್ಞಾನಿಕ ಮತ್ತು ಸಾಮಾಜಿಕ ಆಧಾರಗಳನ್ನು ಹೊಂದಿದೆ. ಇದು ವಿದ್ಯಾರ್ಥಿಗಳಿಗೆ ಸಂತೋಷ ನೀಡುತ್ತದೆ. ಕೇವಲ ಪುಸ್ತಕದ ಜ್ಞಾನವು ಮಕ್ಕಳಲ್ಲಿ ಶಿಕ್ಷಣದ ಬಗೆಗೆ ನಿರಾಸಕ್ತಿಯನ್ನು ಮೂಡಿಸುತ್ತದೆ. ಆದರೆ ಮಾಡುವುದರ ಮೂಲಕ ಕಲಿಕೆಯು ಅವರನ್ನು ಪುನರ್ಚೇತನಗೊಳಿಸುತ್ತದೆ.

ಕಾರ್ಯಶಿಕ್ಷಣದ ಉದ್ದೇಶಗಳು ಮಕ್ಕಳು ಅವರ ವೈಯಕ್ತಿಕ ಕುಟುಂಬದ ಮತ್ತು ಸಮಾಜದ ಉದ್ದೇಶಗಳನ್ನು ತಿಳಿದುಕೊಳ್ಳಲು ಉತ್ಸಾಹಿಗಳಾಗಿಸುತ್ತವೆ. ಶಿಕ್ಷಣದ ಒಂದು ಪ್ರಮುಖ ಉದ್ದೇಶವೇನೆಂದರೆ, ವಿದ್ಯಾರ್ಥಿಗಳಲ್ಲಿ ಕೆಲಸಗಾರರ ಬಗ್ಗೆ ಗೌರವ ಭಾವನೆ ಮತ್ತು ಶ್ರಮದ ಘನತೆಯನ್ನು ಬೆಳೆಸುವುದಾಗಿದೆ.

## 12.5 ಓದು ಮತ್ತು ಪರಾಮರ್ಶೆಯ ಸಲಹೆಗಳು:


1. Gandhi M.K. (1953) Towards New Education, Navjeevan Publishing House Ahmedabad.
2. Indian Government (1986) National Policy on Education (1986) and programmes for taking steps 1986, Ministry of Human Resource Development, New Delhi.
3. Gujrat New Education Association (2000–2002), New Education Association, Gujrat Vidyapeeth, Ahmedabad.
4. National Council of Educational Research and Technology, New Delhi (1979) National Curriculum Frame Work for Ten years, New Delhi.


## 12.6 ಘಟಕದ ಕೊನೆಯ ಅಭ್ಯಾಸಗಳು

ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ:

1. ಕಲಿಕೆಯ ಪ್ರಾಥಮಿಕ ಹಂತದಲ್ಲಿ ಮಕ್ಕಳಲ್ಲಿ ಸಾಮಾಜಿಕವಾಗಿ ಅಪೇಕ್ಷಣೀಯವಾದ ಗುಣಗಳನ್ನು ಬೆಳೆಸಲು ಯಾವ ವಿಷಯಗಳನ್ನು ನೀವು ಶಿಫಾರಸ್ಸು ಮಾಡುತ್ತೀರಿ? ಕಾರಣಗಳನ್ನು ನೀಡಿ.
2. ಕಾರ್ಯಶಿಕ್ಷಣಕ್ಕೆ ಸಂಬಂಧಿಸಿದಂತೆ ಶ್ರಮದ ಅರ್ಥವೇನು? ಕೆಲಸಾಧಾರಿತ ಮತ್ತು ಕರಕುಶಲ ಚಟುವಟಿಕೆಗಳೊಡನೆ ಸಂಬಂಧಿಸಿದ ಶಿಕ್ಷಣದ ಉಪಯುಕ್ತತೆ ಏನು?
3. ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು 2005 ಹೇಗೆ ಕಾರ್ಯಶಿಕ್ಷಣವನ್ನು ಹೇಗೆ ಪ್ರಮುಖವಾಗಿಸುತ್ತದೆ? ಶಾಲಾ ಶಿಕ್ಷಣಕ್ಕೆ ಇದು ಮಹತ್ವವಾದುದೆಂದು ಎಕೆ ಪರಿಗಣಿಸಲಾಗಿದೆ?
4. ಜ್ಞಾನ, ತಿಳುವಳಿಕೆ ಮತ್ತು ಕೌಶಲ್ಯಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಕಾರ್ಯಶಿಕ್ಷಣದ ಉದ್ದೇಶಗಳನ್ನು ವಿವರಿಸಿ.
5. ಕಾರ್ಯಶಿಕ್ಷಣವನ್ನು ಶಿಕ್ಷಣದಲ್ಲಿ ಒಂದು ಆಸಕ್ತಿಕರ ಮತ್ತು ಅವಶ್ಯಕ ಅಂಶವಾಗಿ ಒಪ್ಪಿಕೊಂಡಿರುವುದಕ್ಕೆ ಸಂಬಂಧಿಸಿದಂತೆ ಇದರ ಸಾಮಾಜಿಕ ಮತ್ತು ಮನೋವೈಜ್ಞಾನಿಕ ಆಧಾರವನ್ನು ಉದಾಹರಣೆಯ ಸಹಿತ ವಿವರಿಸಿ.
6. ಪ್ರಸಕ್ತ ಶಿಕ್ಷಣ ವ್ಯವಸ್ಥೆಯು ನಿರೀಕ್ಷಿತ ಸ್ಥಳ ಮತ್ತು ಸಮಯವನ್ನು ಒದಗಿಸಲು ಏಕೆ ವಿಫಲವಾಗಿದೆ?
7. ಕಾರ್ಯ ಶಿಕ್ಷಣದ ಬಗೆಗೆ ಪೋಷಕರು ಮತ್ತು ವಿದ್ಯಾರ್ಥಿಗಳಲ್ಲಿ ಯಾವ ರೀತಿಯ ಗ್ರಹಿಕೆಗಳು ಮತ್ತು ಮಿಥ್ಯೆಗಳಿವೆ? ಅವುಗಳನ್ನು ನಿವಾರಿಸಲು ನೀವು ಮಾಡುವ ಪ್ರಯತ್ನಗಳೇನು?

## ಘಟಕ –13 ಕಾರ್ಯ ಶಿಕ್ಷಣದ ಅನುಷ್ಠಾನ

## (ಸೈದ್ಧಾಂತಿಕ ಮತ್ತು ಪ್ರಾಯೋಗಿಕ ಅಂಶ)

ಸಂರಚನೆ

13.0 ಪ್ರಸ್ತಾವನೆ

13.1 ಕಲಿಕೆಯ ಉದ್ದೇಶಗಳು

13.2 ಕಾರ್ಯ ಶಿಕ್ಷಣ ಪಠ್ಯಕ್ರಮ
- 13.2.1. ಸಾಮಗ್ರಿಗಳು, ಸಾಧನಗಳು ಮತ್ತು ತಂತ್ರಜ್ಞಾನದ ಬಳಕೆ.
- 13.2.2. ಕಾರ್ಯ ಅನುಭವ

13.3 ವಿದ್ಯಾರ್ಥಿಗಳನ್ನು ಗುಂಪು ಮಾಡುವುದು
- 13.3.1 ಸಮಯ ಹಂಚಿಕೆ
- 13.3.2. ಸ್ಥಳ ಹಂಚಿಕೆ

13.4 ವಿವಿಧ ತರಗತಿಗಳಿಗೆ ಕೆಲಸ ಶಿಕ್ಷಣದ ಅವಧಿಗಳ ಯೋಜನೆ
- 13.4.1 ಮೂಲಭೂತ ಅವಶ್ಯಕತೆಗಳ ಉತ್ತಮ ಪೂರೈಕೆಗೆ ಸಂಬಂಧಿಸಿದ ಚಟುವಟಿಕೆಗಳು.
- 13.4.2. ಪರಿಸರವನ್ನು ಸುಂದರಗೊಳಿಸುವಿಕೆಗೆ ಸಂಬಂಧಿಸಿದ ಚಟುವಟಿಕೆಗಳು.
- 13.4.3. ಸಮಾಜ ಸೇವೆಗೆ ಸಂಬಂಧಿಸಿದ ಚಟುವಟಿಕೆಗಳು.
- 13.4.4. ಸಾಂಸ್ಕೃತಿಕ ಪರಂಪರೆ ಮತ್ತು ರಾಷ್ಟ್ರೀಯ ಐಕ್ಯತೆಗೆ ಸಂಬಂಧಿಸಿದ ಚಟುವಟಿಕೆಗಳು.
- 13.4.5. ಪರಿಸರ ಜಾಗೃತಿಕ ಸಂಬಂಧಿಸಿದ ಚಟುವಟಿಕೆಗಳು

13.5 ಪ್ರಾಥಮಿಕ ತರಗತಿಯಗಳಿಗೆ ಸಂಬಂಧಿಸಿದಂತೆ ಕೆಲಸ ಶಿಕ್ಷಣಕ್ಕೆ ಸಂಬಂಧಿಸಿದ ಸಾಮಗ್ರಿಗಳ ಆಯ್ಕೆ ಮತ್ತು ಸಂಯೋಜನೆ.

13.6 ಸಾಮಗ್ರಿಗಳು ಮತ್ತು ಉಪಕರಣಗಳ ದಾಸ್ತಾನು ಮತ್ತು ನಿರ್ವಹಣೆ.

13.7 ಅನುಭವ ನೀಡಲು ವಿಧಾನಗಳು ಮತ್ತು ಪಠ್ಯಕ್ರಮದ ವಿವಿಧ ವಿಷಯಗಳನ್ನು ಸಂಯೋಜಿಸುವುದು.
- 13.7.1. ಭಾಷೆ
- 13.7.2 ಗಣಿತಶಾಸ್ತ್ರ
- 13.7.3 ಪರಿಸರ ಅಧ್ಯಯನ, ಸಮಾಜವಿಜ್ಞಾನ ಮತ್ತು ಇತಿಹಾಸ

13.8 ಕೆಲಸ ಶಿಕ್ಷಣಕ್ಕೆ ಸಂಬಂಧಿಸಿದ ಬೋಧನೆ, ಕಲಿಕೆ ಚಟುವಟಿಕೆಗಳಿಗಾಗಿ ವಿಧಾನಗಳು.
- 13.8.1 ವೀಕ್ಷಣೆ / ಮೇಲ್ವಿಚಾರಣೆ ವಿಧಾನ
- 13.8.2.ಪ್ರದರ್ಶನ ವಿಧಾನ

13.8.3 ಪ್ರಾಯೋಗಿಕ ವಿಧಾನ

13.8.4 ಯೋಜನಾ ವಿಧಾನ

13.8.5 ವಿಹಾರ ವಿಧಾನ

13.9 ಸಾರಾಂಶಗೊಳಿಸೋಣ

13.10 ಓದು ಮತ್ತು ಪರಾಮರ್ಶೆಯ ಸಲಹೆಗಳು

13.11 ಘಟಕ ಕೊನೆಯ ಅಭ್ಯಾಸ

## 13.0 ಪ್ರಸ್ತಾವನೆ

ಹಿಂದಿನ ಘಟಕದ ಮೂಲಕ ಕಾರ್ಯ ಶಿಕ್ಷಣದ ಪರಿಕಲ್ಪನೆ ಮತ್ತು ಸ್ವರೂಪದ ಬಗ್ಗೆ ನೀವು ತಿಳಿದುಕೊಂಡಿರಿ. 'ಕೆಲಸ' ಎಂದರೆ ಶ್ರಮವನ್ನು ಒಳಗೊಂಡ ಚಟುವಟಿಕೆ ಎಂಬುದನ್ನು ತಿಳಿದುಕೊಂಡಿರಿ. ಔಪಚಾರಿಕ ಶಾಲಾ ಶಿಕ್ಷಣದ ಉಗಮಕ್ಕಿಂತ ಮುಂಚೆಯೆ ಶಿಕ್ಷಣದಲ್ಲಿ ದೈಹಿಕ ಶ್ರಮವು ತುಂಬಾ ಮಹತ್ವವನ್ನು ಪಡೆದುಕೊಂಡಿತ್ತು. ಪ್ರಾಚೀನ ಭಾರತದಲ್ಲಿ ವಿದ್ಯಾರ್ಥಿಗಳು ಅಂಶ ಗುರುಗಳ ಜೊತೆ ವಾಸಿಸುತ್ತಿದ್ದಾಗ ಕಲಿಯುವ ಮತ್ತು ಜೀವಿಸುವ ಸಲುವಾಗಿ ಶ್ರಮದಿಂದ ಕೂಡಿದ ಎಲ್ಲಾ ರೀತಿಯ ಕೆಲಸವನ್ನು ಮಾಡುತ್ತಿದ್ದರು. ಕೆಲಸ ಮತ್ತು ಶಿಕ್ಷಣದಲ್ಲಿ ಯಾವುದೇ ವಿರೋಧಾಭಾಸ ಇರಲಿಲ್ಲ. ಔಪಚಾರಿಕ ಶಾಲಾ ಶಿಕ್ಷಣದ ಪ್ರಾರಂಭವು ಕೆಲಸಾಧಾರಿತ ರೂಪದ ಶಿಕ್ಷಣವನ್ನು ಪುಸ್ತಕ ಜ್ಞಾನವು ಕಡೆಗೆ ತಂದಿತು. 1854 ರಲ್ಲಿ ವುಡ್ ಡಿಸ್‌ಪ್ಯಾಚ್ ಶಿಕ್ಷಣದಲ್ಲಿ ಅದರ ಅನುಪಸ್ಥಿತಿಯನ್ನು ಎತ್ತಿ ತೋರಿಸಿತು. 1973 ರಲ್ಲಿ ವುಡ್ ಮತ್ತು ಡ್ಯಾಬೋ ವ್ಯಕ್ತಿತ್ವದ ಸಾಮಾನ್ಯ ಅಭಿವೃದ್ಧಿಗೆ ದೈಹಿಕ ಶ್ರಮಾಧಾರಿತ ಚಟುವಟಿಕೆಗಳಗೆ ಒತ್ತು ನೀಡಿದರು.

ಈ ವಿಷಯಗಳ ಬಗ್ಗೆ ಹಿಂದಿನ ಘಟಕದಲ್ಲಿ ನೀವು ತಿಳಿದುಕೊಂಡಿರಿ. ಕಾರ್ಯ ಶಿಕ್ಷಣದ ಮಹತ್ವವನ್ನು ತಿಳಿದಿರಿ. ಕಾರ್ಯ ಶಿಕ್ಷಣದ ಕಾರ್ಯವಿಧಾನದ ಕಾರ್ಯ ಕುರಿತಾದ ಜ್ಞಾನವನ್ನು ಈ ಘಟಕದಲ್ಲಿ ನಾವು ಪಡೆಯುವಿದ್ದೇವೆ. ಕಾರ್ಯ ಶಿಕ್ಷಣದ ಪಠ್ಯಕ್ರಮವೇನು. ಪಠ್ಯಕ್ರಮವನ್ನು ವರ್ಗಾಯಿಸಲು ಯಾವ ವಿಧಾನಗಳನ್ನು ಉಪಯೋಗಿಸಲಾಗುವುದು. ಚಟುವಟಿಕೆಗಳಿಗಾಗಿ ವಿದ್ಯಾರ್ಥಿಗಳನ್ನು ಹೇಗೆ ಗುಂಪು ಮಾಡಲಾಗುತ್ತದೆ. ಈ ಎಲ್ಲಾ ಅಂಶಗಳನ್ನು ಈ ಘಟಕದಲ್ಲಿ ಸ್ಪಷ್ಟಪಡಿಸಲಾಗುತ್ತದೆ.

## 13.1 ಕಲಿಕೆಯ ಉದ್ದೇಶಗಳು:

ಈ ಘಟಕದ ಉದ್ದೇಶಗಳು ಕೆಳಕಂಡಂತಿದೆ.

1. ಕಾರ್ಯ ಶಿಕ್ಷಣದ ಪಠ್ಯಕ್ರ,ವನ್ನು ಮತ್ತು ಅದನ್ನು ಇತರೆ ವಿಷಯಗಳೊಂದಿಗೆ ಹೇಗೆ ಪರಸ್ಪರ ಸಂಬಂಧ ಕಲ್ಪಸುತ್ತದೆಂಬುದನ್ನು ಅರ್ಥಮಾಡಿಕೊಳ್ಳುವುದು.
2. ಕಾರ್ಯ ಶಿಕ್ಷಣಕ್ಕಾಗಿ ಸಂಸ್ಥೆ/ಶಾಲೆಗೆ ಬೇಕಾಗಿರುವ ಸಾಧನಗಳು ಮತ್ತು ಸಾಧನಗಳ ಮಹತ್ವವನ್ನು ಪರಿಚಯಿಸಿಕೊಳ್ಳುವುದು.

3. ಕಾರ್ಯ ಶಿಕ್ಷಣವನ್ನು ಅಭ್ಯಾಸ ಮಾಡುವ ಸಲುವಾಗಿ ವಿದ್ಯಾರ್ಥಿಗಳನ್ನು ಗುಂಪು ಮಾಡುವ ಪ್ರಕ್ರಿಯೆಯನ್ನು ಪರಿಚಯಿಸುವುದು.
4. ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಸಾಮರ್ಥ್ಯ/ಚಟುವಟಿಕೆಗಳನ್ನು ಆಯ್ಕೆ ಮಾಡಿಕೊಳ್ಳುವ ಸಾಮರ್ಥ್ಯವನ್ನು ಬೆಳೆಸುವುದು.
5. ಕಾರ್ಯ ಶಿಕ್ಷಣದಲ್ಲಿ ಸಿದ್ಧಪಡಿಸಿದ ಸಾಮಗ್ರಿಗಳನ್ನು ನಿರ್ವಹಿಸುವ ಮತ್ತು ದಾಸ್ತಾನು ಮಾಡುವ ವಿಧಾನಗಳು ಮತ್ತು ಅಗತ್ಯತೆಯನ್ನು ಅರ್ಥಮಾಡಿಕೊಳ್ಳುವುದನ್ನು ಅಭಿವೃದ್ಧಿಪಡಿಸುವುದು.
6. ಇತರೆ ವಿಷಯಗಳೊಡನೆ ಸಂಯೋಜನೆಯನ್ನು ಅರ್ಥಮಾಡಿಕೊಳ್ಳುವುದು ಮತ್ತು ಸಾಮರ್ಥ್ಯ ಗಳಿಸುವುದನ್ನು ವಿಕಾಸಗೊಳಿಸುವುದು.

## 13.2 ಕಾರ್ಯ ಶಿಕ್ಷಣವನ್ನು ಪಠ್ಯಕ್ರಮ

ರಾಷ್ಟ್ರೀಯ ಶಿಕ್ಷಣ ನೀತಿ 1986 ಸಾಮಾಜಿಕವಾಗಿ ಉಪಯುಕ್ತ ಉತ್ಪಾದಕ ಕೆಲಸದ (Socially useful productive work – SUPW) ಪರಿಕಲ್ಪನೆಯನ್ನು ಒಪ್ಪಿಕೊಂಡಿತು ಮತ್ತು ಅದನ್ನು ಉದ್ದೇಶಪೂರ್ವಕ ಮತ್ತು ಅರ್ಥಪೂರ್ಣ ದೈಹಿಕ ಕೆಲಸವೆಂದು ಪರಿಗಣಿಸಿತು. ಇದನ್ನು ಎಲ್ಲಾ ಹಂತಗಳ ಶಿಕ್ಷಣದಲ್ಲಿ ಒಂದು ಪ್ರಮುಖ ವಿಷಯವಾಗಿ ಪರಿಗಣಿಸಬೇಕೆಂದು ಹಾಗೂ ಇದನ್ನು ಒಂದು ಸಂಘಟಿತವಾದ ಮತ್ತು ವ್ಯವಸ್ಥಿತವಾದ ಕಾರ್ಯಕ್ರಮವಾಗಿ ನೀಡಬೇಕೆಂದು ಶಿಫಾರಸ್ಸು ಮಾಡಲಾಯಿತು. ಉತ್ಪಾದಕ ದೈಹಿಕ ಶ್ರಮವನ್ನು ಅಳವಡಿಸಿಕೊಳ್ಳಬೇಕಾದ ಪ್ರಮುಖ ಆರು ಕ್ಷೇತ್ರಗಳನ್ನು ಸೂಚಿಸಲಾಯಿತು. ಅವುಗಳೆಂದರೆ, ಆರೋಗ್ಯ ಮತ್ತು ಆರೋಗ್ಯ ವಿಜ್ಞಾನ, ಆಹಾರ ಮತ್ತು ಪೌಷ್ಠಿಕತೆ, ವಸತಿ, ಉಡುಪುಗಳು, ಸಾಂಸ್ಕೃತಿಕ ಮತ್ತು ಮನರಂಜನೆ ಹಾಗೂ ಸಮುದಾಯ ಕೆಲಸ ಮತ್ತು ಸಮಾಜಿಕ ಸೇವೆಗಳು.

ಕಾರ್ಯ ಶಿಕ್ಷಣವನ್ನು ಪಠ್ಯಕ್ರಮದ ಬಗ್ಗೆ ಆಲೋಚಿಸುವುದಕ್ಕೆ ಮುಂಚೆ ಕಾರ್ಯ ಶಿಕ್ಷಣದ ಉದ್ದೇಶಗಳನ್ನು ಗಮನಿಸಬೇಕು. ಕಾರ್ಯ ಶಿಕ್ಷಣದ ಮೂಲಕ ವಿದ್ಯಾರ್ಥಿಗಳಲ್ಲಿ ಅವಶ್ಯಕ ಜೀವನ ಕೌಶಲ್ಯಗಳನ್ನು ಬೆಳೆಸಬೇಕೆಂಬುದು ಸ್ಪಷ್ಟವಾಗಿದೆ. ಆದ್ದರಿಂದ ಕಾರ್ಯ ಶಿಕ್ಷಣದ ಪಠ್ಯಕ್ರಮವು ನಿತ್ಯ ಜೀವನದ ಸುತ್ತ ಆಧಾರಿತವಾಗಿರಬೇಕು. ಈ ವಿಷಯದ ಮೂಲಕ ಮಾಡುವ ಚಟುವಟಿಕೆಗಳನ್ನು ಮುಖ್ಯವಾಗಿ ಆರು ಕ್ಷೇತ್ರಗಳಿಂದ ಆಯಕೆ ಮಾಡಿಕೊಳ್ಳಲಾಗುತ್ತದೆ.

ಆರೋಗ್ಯ ಮತ್ತು ಆರೋಗ್ಯ ವಿಜ್ಞಾನ, ಆಹಾರ ಮತ್ತು ಪೌಷ್ಠಿಕತೆ, ವಸತಿ, ಉಡುಪು, ಸಂಸ್ಕೃತಿ ಮತ್ತು ಮನರಂಜನೆ ಹಾಗೂ ಸಮುದಾಯ ಕಾರ್ಯ ಮತ್ತು ಸಾಮಾಜಿಕ ಸೇವೆ. ಈ ಎಲ್ಲಾ ಆರು ಕ್ಷೇತ್ರಗಳು ಒಬ್ಬ ವ್ಯಕ್ತಿಯ ಜೀವನದ ಅವಶ್ಯಕ ಅಂಶಗಳಾಗಿವೆ. ಹೀಗಾಗಿ ಕಾರ್ಯ ಶಿಕ್ಷಣದ ಪಠ್ಯಕ್ರಮವು ಈ ಕ್ಷೇತ್ರಗಳಿಂದ ವಿಭಿನ್ನವಾಗಿರುವುದು ಸಾಧ್ಯವಿಲ್ಲ. ಕಾರ್ಯ ಶಿಕ್ಷಣದ ಪಠ್ಯಕ್ರಮವು ಸುತ್ತಮುತ್ತಲಿನ ಪರಿಸ್ಥಿತಿಗೆ ಸಂಬಂಧಿಸಿರಬೇಕೆಂಬುದು ಇಲ್ಲಿ ಮಹತ್ವವಾಗುತ್ತದೆ. ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಹಂತಗಳಲ್ಲಿ ಪಠ್ಯಕ್ರಮದ ಮೂರು ಪ್ರಮುಖ ಅಂಶಗಳಿರುತ್ತವೆ. ಪರಿಸರ ಅಧ್ಯಯನ ಮತ್ತು ಅದರ ಉಪಯೋಗಗಳು. ವಿಧಾನಗಳೊಡನೆ ಸಾಮಗ್ರಿ, ಸಾಧನಗಳು ಮತ್ತು

ಪ್ರಯೋಗಗಳು ಮತ್ತು ಮೂರನೆಯದು ಅಭ್ಯಾಸ. ಮಕ್ಕಳು ಮತ್ತು ಅವರ ಕುಟುಂಬಗಳ ದಿನನಿತ್ಯದ ಅವಶ್ಯಕತೆಗಳನ್ನು ಪೂರೈಸಲು ಮಾಡುವ ಚಟುವಟಿಕೆಗಳಿಂದ ಈ ಎಲ್ಲಾ ಮೂರು ಅಂಶಗಳನ್ನು ಆಯ್ಕೆ ಮಾಡಿಕೊಳ್ಳಲಾಗುವುದು. ನೆರೆಹೊರೆಯಲ್ಲಿ ಮಾಡುವ ಉತ್ಪಾದಕ ಕೆಲಸ ಮತು ಸೇವೆಗಳಲ್ಲಿ ಕೆಲಸದ ಅನುಭವವು ತುಂಬಾ ಮುಖ್ಯವಾದುದು. ಇದು ಕೇವಲ ಒಂದು ಸಲ ಮಾಡುವುದರಿಂದ ಮಕ್ಕಳು ಇದನ್ನು ಸಂಪೂರ್ಣವಾಗಿ ಅರ್ಥ ಮಾಡಿಕೊಂಡಿದ್ದಾರೆ ಅಥವಾ ಈ ಕಲೆಯನ್ನು ಸಾಧಿಸಿದ್ದಾರೆ ಎಂಬುದನ್ನು ನಿರ್ಧರಿಸಲಾಗುವುದಿಲ್ಲ.

ಕಾರ್ಯ ಅನುಭವದ ಚಟುವಟಿಕೆಗಳು ಮತ್ತು ಯೋಜನೆಗಳ ವಾಸ್ತವಿಕ ಆಯ್ಕೆಯು ಆ ನಿರ್ದಿಷ್ಟ ಸ್ಥಳದಲ್ಲಿಲಭ್ಯವಿರುವ ಸಮಾಜದ ನೈಸರ್ಗಿಕ, ಭೌತಿಕ, ಮಾನವ'ಸಂಪನ್ಮೂಲಗಳು ಹಾಗೂ ಸಾಮಾಜಿಕ ಮತ್ತು ಆರ್ಥಿಕ ಹಿನ್ನೆಲೆಯ ಆಧಾರಿತವಾಗಿರಬೇಕು. ಚಟುವಟಿಕೆಗಳು ಮತ್ತು ಯೋಜನೆಗಳ ಆಯ್ಕೆಯಲ್ಲಿ ವೈವಿಧ್ಯತೆಯಿರಬೇಕು. ಪರಿಸರಕ್ಕೆ ಸಂಬಂಧಿಸಿದ ಚಟುವಟಿಕೆಗಳು ಕೆಳಕಂಡಂತಿವೆ:

1. ಅವರ ಮನೆಯಿಂದ ಶಾಲೆಗೆ ಬರುವಾಗ ಮನೆಗಳು, ಮರಗಳು, ಸ್ತಂಭಗಳು, ಅಂಗಡಿಗಳು ಮುಂತಾದ ಎಲ್ಲವನ್ನು ಗಮನಿಸುವುದು. ಇದು ನಮ್ಮನ್ನು ಸೂಕ್ಷ್ಮ ಗ್ರಾಹಿಗಳನ್ನಾಗಿಸಿ, ಅವುಗಳೊಡನೆ ಸಂಬಂಧ ಕಲ್ಪಿಸುತ್ತದೆ.
2. ನೆರೆಹೊರೆಯ ಉದ್ಯಾನವನದಲ್ಲಿ ಪ್ಲಾಸ್ಟಿಕ್ ಚೀಟಿಗಳು ಮತ್ತು ಇತರೆ ಕಸವನ್ನು ಎತ್ತಿಹಾಕುವಲ್ಲಿ ಹಿರಿಯರಿಗೆ ಪರಿಸರವನ್ನು ಸ್ವಚ್ಛವಾಗಿರಿಸಿಕೊಳ್ಳಲು ಸಹಾಯ ಮಾಡುವುದು, ನಿಂತ ನೀರಿಗೆ ಸೂಕ್ತ ಚರಂಡಿ ವ್ಯವಸ್ಥೆಯನ್ನು ಮಾಡುವುದು, ಕಳೆ ತೆಗೆಯುವುದು, ಬೀಡಾಡಿ ಪ್ರಾಣಿಗಳ ಬಗ್ಗೆ ಸಂಬಂಧಿಸಿದ ಸಂಸ್ಥೆಗೆ ಮಾಹಿತಿ ನೀಡುವುದು.
3. ಮನೆಯಲ್ಲಿ ಅಥವಾ ಸಮೀಪದಲ್ಲಿ ನಡೆಯುವ ಕೆಲಸ ಮತ್ತು ಉತ್ಪಾದಕ ಚಟುವಟಿಕೆಗಳನ್ನು ಗಮನಿಸುವುದು. ಉದಾಹರಣೆಗೆ, ಅಡುಗೆ ಮಾಡುವುದನ್ನು ನೋಡುವುದು. (ತಾಯಿಗೆ ಅದರಲ್ಲಿ ಸಹಾಯ ಮಾಡುವುದು) ದರ್ಜಿ ಅಂಗಡಿ, ಮಡಿಕೆ ಮಾಡುವುದು, ಗಾರೆ ಕೆಲಸ, ಬಣ್ಣ ಬಳಿಯುವುದು, ಸುಣ್ಣ ಬಳಿಯುವುದು, ಲೋಡಿಂಗ್, ಕ್ಷೌರಿಕನ ಕೆಲಸ ಮುಂತಾದವು.
4. ತನ್ನ ಶೂಗಳನ್ನು ಪಾಲಿಶ್ ಮಾಡಿಕೊಳ್ಳುವುದು, ರಿಬ್ಬನ್, ಕಾಲುಚೀಲಗಳು, ಕರವಸ್ತ್ರಗಳು, ಒಳಉಡುಪುಗಳನ್ನು ನೀರಿನಿಂದ ಸ್ವಚ್ಛಗೊಳಿಸುವುದು, ಬ್ಯಾಗ್‌ನ್ನು ಸ್ವಚ್ಛಗೊಳಿಸುವುದು, ಬಟನ್‌ಗಳನ್ನು ಹೊಲಿದುಕೊಳ್ಳುವುದು ಮುಂತಾದವುಗಳು.
5. ಮನೆಯಲ್ಲಿ ಅಥವಾ ಶಾಲೆಯಲ್ಲಿ ನಿಯಮಿತವಾಗಿ ಗಿಡಗಳಿಗೆ ನೀರು ಹಾಕುವುದು, ಕಳೆ ತೆಗೆಯುವುದು, ಮತ್ತು ಇತರೆ ಅವಶ್ಯಕ ಚಟುವಟಿಕೆಗಳನ್ನು ಮಾಡುವುದು.
6. ಉದ್ಯಾನವನಗಳು ಮತ್ತು ಹೊಲಗಳಲ್ಲಿ ಬೆಳೆಗಳನ್ನು ಗಮನಿಸುವುದು, ಕೆಲಸವನ್ನು ಗಮನಿಸುವುದು ಮತ್ತು ಪ್ರಶ್ನೆಗಳನ್ನು ಕೇಳುವ ಮೂಲಕ ಕುತೂಹಲವನ್ನು ತಣಿಸಿಕೊಳ್ಳುವುದು.
7. ನೆರೆಹೊರೆಯಲ್ಲಿರುವ ಮರಗಳ ಹೆಸರು ಮತ್ತು ಅವುಗಳ ಉಪಯುಕ್ತತೆಗಳನ್ನು ತಿಳಿದುಕೊಳ್ಳುವುದು ಮತು ಅವುಗಳನ್ನು ಪೋಷಿಸಲು ಸದಾ ಸಿದ್ಧರಾಗಿರುವುದು.
8. ಅಂಚೆ ಕಛೇರಿಗಳು, ಬಸ್ ನಿಲ್ದಾಣಗಳು, ಆಸ್ಪತ್ರೆಗಳು, ಪ್ರಥಮ ಚಿಕಿತ್ಸಾ ಕೇಂದ್ರಗಳು, ಪ್ರಾಣಿ ಸಾಕಾಣಿಕ ಕೇಂದ್ರ ಮುಂತಾದವುಗಳಲ್ಲಿ ನಡೆಯುವ ಚಟುವಟಿಕೆಗಳನ್ನು ಗಮನಿಸುವುದು.

9. ಸಾಂಸ್ಕೃತಿಕ ಮತ್ತು ಧಾರ್ಮಿಕ ಹಬ್ಬಗಳ ಕಾರ್ಯಕ್ರಮಗಳನ್ನು ಗಮನಿಸುವುದು ಮತ್ತು ಅಗತ್ಯವಾದರೆ ಅವುಗಳಲ್ಲಿ ಭಾಗವಹಿಸುವುದು.

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿ – 1

ಕಾರ್ಯ ಶಿಕ್ಷಣದಲ್ಲಿ ಚಟುವಟಿಕೆಗಳನ್ನುಯಾವ ಆರು ಕ್ಷೇತ್ರಗಳ ಆಧಾರದಲ್ಲಿ ಆಯ್ಕೆ ಮಾಡಿಕೊಳ್ಳಲಾಗುತ್ತದೆ?

______________________________________

______________________________________

1. ಸರಿಯಿರುವ ಹೇಳಿಕೆಗಳ ಮುಂದೆ ( ) ಗುರುತು ಹಾಕಿ:
   - ನೆರೆಹೊರೆಯ ಉದ್ದೇಶಪೂರ್ವಕ ವೀಕ್ಷಣೆಯು ಸಂವೇದನೆಯನ್ನು ಹೆಚ್ಚಿಸುತ್ತದೆ.
   - ಶಾಲಾ ಶಿಕ್ಷಣದ ಪ್ರಾಥಮಿಕ ಹಂತದಲ್ಲಿ ತೋಟಗಾರಿಕೆಗೆ ಸಂಬಂಧಿಸಿದ ಚಟುವಟಿಕೆಗಳಲ್ಲಿ ಮಕ್ಕಳನ್ನು ತೊಡಗಿಸಿಕೊಳ್ಳಬಾರದು.
   - ಸಾಂಸ್ಕೃತಿಕ ಮತ್ತು ಧಾರ್ಮಿಕ ಹಬ್ಬಗಳ ಸಂದರ್ಭಗಳಲ್ಲಿ ಕಾರ್ಯ ಶಿಕ್ಷಣದ ದೃಷ್ಟಿಯಿಂದ ಮಕ್ಕಳ ಭಾಗವಹಿಸುವಿಕೆ ಅವಶ್ಯಕವಾಗಿರುತ್ತದೆ.
   - ನಿಮ್ಮ ಶೂಗಳನ್ನು ಪಾಲಿಶ್ ಮಾಡುವುದು, ಶಾಲಾ ಬ್ಯಾಗ್‌ಗಳನ್ನು ಸ್ವಚ್ಛಗೊಳಿಸುವುದು ಮುಂತಾದವುಗಳನ್ನು ಕಾರ್ಯ ಶಿಕ್ಷಣದಲ್ಲಿ ಸೇರಿಸಬಾರದು.

**13.2.1 ಸಾಮಗ್ರಿಗಳು, ಸಾಧನಗಳು ಮತ್ತು ತಂತ್ರಗಳೊಂದಿಗೆ ಪ್ರಯೋಗ**

ಸಾಮಗ್ರಿಗಳು, ಸಾಧನಗಳು ಮತ್ತು ತಂತ್ರಗಳು ಬೃಹತ್ ಕೈಗಾರಿಕೆಗಳು ಅಥವಾ ಮನುಷ್ಯನ ಪ್ರತಿದಿನದ ಜೀವನದಲ್ಲಿ ಮಹತ್ವವ ಪಾತ್ರವನ್ನು ವಹಿಸುತ್ತವೆ. ದಿನಚರಿಯ ಕಾರ್ಯಗಳನ್ನು ನೆರವೇರಿಸುವ ಸಲುವಾಗಿ ಸಾಮಗ್ರಿ, ಸಾಧನಗಳು, ಮತ್ತು ತಂತ್ರಗಳನ್ನು ಕಾರ್ಯ ಶಿಕ್ಷಣವು ಪರಿಚಯಿಸುತ್ತದೆ. ಮತ್ತು ಕನಿಷ್ಠ ಪಕ್ಷ ಪ್ರಾಥಮಿಕ ಹಂತದಲ್ಲಿ ಕೌಶಲ್ಯಗಳನ್ನು ಬೆಳೆಸುವ ಸಲುವಾಗಿ ಇವುಗಳನ್ನು ಅನುಭವಿಸುವ ಅವಕಾಶವನ್ನು ಒದಗಿಸುತ್ತದೆ. ಈ ಕೆಳಗೆ ಅಂತಹ ಕೆಲವು ಚಟುವಟಿಕೆಗಳ ಪಟ್ಟಿಯನ್ನು ನೀಡಲಾಗಿದೆ.

1. ವಿವಿಧ ಕ್ರೀಡಾ ಸಾಮಗ್ರಿಗಳ ಪರಿಚಯ.
2. ಮಣ್ಣು, ಹಳೆ ಕಾಗದ, ಹಳೆ ವೃತ್ತಪತ್ರಿಕೆಗಳು, ಬಿದಿರು, ಎಲೆಗಳು, ಹತ್ತಿ, ಉಪಹೋಗಿಸಲ್ಪಟ್ಟ ಬಟ್ಟೆಯ ಚೂರುಗಳು, ಮುಂತಾದವುಗಳ ಪರಿಚಯ ಮತ್ತು ಅವುಗಳೊಡನೆ ಆಡುವುದು ಮತ್ತು ಅವುಗಳಿಂದ ಉಪಯುಕ್ತ ವಸ್ತುಗಳನ್ನು ತಯಾರಿಸುವುದು.
3. ಸಾಮಗ್ರಿಗಳ ಉಪಯೋಗವನ್ನು ತಿಳಿದುಕೊಳ್ಳುವುದು ಮತ್ತು ಅವುಗಳನ್ನು ಅಡುಗೆ ಮನೆಯಲ್ಲಿ ಮತ್ತು ಗೃಹೋಪಯೋಗಿ ಕೆಲಸದಲ್ಲಿ ಉಪಯೋಗಿಸಲು ಪ್ರಯುತ್ನಿಸುವುದು.

4. ಸ್ವಚ್ಛತೆ ಮತ್ತು ಬಟ್ಟೆ ಒಗೆಯಲು ಬಳಸುವ ಬ್ರಷ್, ಯಂತ್ರ, ಬಕೆಟ್, ಸೋಪ್, ಡಿಟರ್ಜೆಂಟ್ ಪೌಡರ್ ಮುಂತಾದವುಗಳನ್ನು ಪರಿಚಯಿಸುವುದು ಮತ್ತು ಅವುಗಳನ್ನು ಅವುಗಳ ಸಾಮರ್ಥ್ಯಕ್ಕೆ ತಕ್ಕಂತೆ ಬಳಸುವುದು.
5. ಹೂಗಳ ಜೋಡಣೆ, ಹೂವಿನ ಹಾರಗಳನ್ನು ಮತ್ತು ಹೂಗುಚ್ಛಗಳನ್ನು ತಯಾರಿಸುವುದು.
6. ಕಲಾತ್ಮಕ ವಸ್ತುಗಳನ್ನು ಗುರುತಿಸುವುದು ಮತ್ತು ಚಿತ್ರಕಲೆಗೆ ಸಂಬಂಧಿಸಿದ ವಸ್ತುಗಳು ಮತು ಸಾಧನಗಳನ್ನು ಬಳಸುವುದು.

13.2.2. ಕಾರ್ಯ ಅನುಭವ –

ಕಾರ್ಯ ಅನುಭವದ ಅರ್ಥ ಕೆಲಸ ಮಾಡುವ ಮತ್ತು ಕಲಿಕೆಯ ಮೂಲಕ ಅನುಭವ ಪಡೆಯುವುದು. ಇದು ಕೇವಲ ವಿವರವಾದ ಮಾಹಿತಿಯನ್ನು ಪಡೆಯಲು ಅವಕಾಶವನ್ನು ನೀಡುವುದಕ್ಕೆ ಅಲ್ಲದೆ, ಸಾಕಷ್ಟು ಕಲಿಯುವ ಕಲಿಕೆಯನ್ನು ಆನಂದಿಸುವ ತನ್ನ ಸಂದೇಹಗಳಿಗೆ ಪರಿಹರಗಳನ್ನು ಪಡೆದುಕೊಳ್ಳುವ ತನ್ನ ಕುತೂಹಲವನ್ನು ಪರಿಹಿರುಸವಂತಹ ಸನ್ನಿವೇಶಗಳಲ್ಲಿ ಕೆಲಸ ಮಾಡುವ ಅವಕಾಶವನ್ನು ಒದಗಿಸುತ್ತದೆ. ಅಲ್ಲದೆ ಅವನು ಮನೆ, ಕುಟುಂಬ, ಶಾಲೆ ಮತ್ತು ಸಮುದಾಯದ ವಿವಿಧ ಕೆಲಸದ ಪರಿಸ್ಥಿತಿಗಳ ಬಗ್ಗೆ ಮಾಹಿತಿಯನ್ನು ಪಡೆದುಕೊಳ್ಳಬಹುದು.
ಕಾರ್ಯ ಅನುಭವಕ್ಕಾಗಿ ನೀಡದ ಚಟುವಟಿಕೆಗಳು ಮಕ್ಕಳಲ್ಲಿ ಆತ್ಮವಿಶ್ವಾಸ ಮತ್ತು ಸ್ವಾವಲಂಭನೆಯನ್ನು ಪೋಷಿಸುವಂತಿರಬೇಕು. ಸಮಾಜದ ರಚನಾತ್ಮಕ ಕಾರ್ಯಕ್ರಮಗಳಲ್ಲಿ ಸಂತೋಷದಿಂದ ಭಾಗವಹಿಸುವ ಇಚ್ಛೆ ಅವರಿಗಿರಬೇಕು. ಪರಿಸರವನ್ನು ಸ್ವಚ್ಛಗೊಳಿಸುವ ಮತ್ತು ಅದನ್ನು ಸುಂದರವಾಗಿಸುವ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಅವರಿಗೊಂದು ಅವಕಾಶ ಸಿಗಬೇಕು. ಕೆಲಸ ಮತ್ತು ಕೆಲಸಗಾರರ ಬಗ್ಗೆ ಒಂದು ಗೌರವಯುತ ಧೋರಣೆಯನ್ನು ಅಳವಡಿಸಿಕೊಳ್ಳುವಂತಾಗಬೇಕು.
ಪರಿಸರ ಮತ್ತು ಉತ್ಪಾದಕರ ಚಟುವಟಿಕೆಗಳಲ್ಲಿ ಭಾಗವಹಿಸುವ ಮೂಲಕ ಮಕ್ಕಳು ಕೆಲಸದ ಸ್ಥಿತಿಗತಿಗಳ ಬಗ್ಗೆ ವಿವರವಾಧ ಮಾಹಿತಿಯನ್ನು ಪಡೆಯುತ್ತಾರೆ. ಇದು ಘಟನೆಗಳು ಮತ್ತು ಅವರ ನೆರೆಹೊರೆಯ ಪರಿಸರವನ್ನು ಅರಿತುಕೊಳ್ಳುವ ಕುತೂಹಲವನ್ನು ಹೆಚ್ಚಿಸುತ್ತದೆ.

ಚಟುವಟಿಕೆ– 1

ಕಾಗದದ ಮೇಲೆ ವಿವಿಧ ಮಾದರಿಗಳನ್ನು ಮಾಡಿರಿ– ಇಂಕ್ ಮತ್ತು ಬಣ್ಣಗಳೊಡನೆ ವಿನ್ಯಾಸ, ನೂಲುಗಳಿಂದ ವಿನ್ಯಾಸ, ಮಾರ್ಬಲ್ ಕಾಗದವನ್ನು ತಯಾರಿಸಿ.

- ಆಹ್ವಾನ ಪತ್ರಿಕೆಗಳು, ಓದುಗುರುತು (ಬುಕ್‌ಮಾರ್ಕ್), ವಿವಿಧ ದೇಶಗಳ ರಾಷ್ಟ್ರಧ್ವಜಗಳು, ಪಟ್ಟಿಗಳು, ಹಾರಗಳು, ಲಕೋಟೆಗಳನ್ನು ಮಾಡುವುದು,

ಕಾಗದದಿಂದ ದೋಣಿ, ಹಗಲು, ರಾತ್ರಿ ಮುಂತಾದ ಆಕೃತಿಗಳನ್ನು ಮಾಡುವುದು.

- ಮಣ್ಣಿನ ಆಟಿಕೆಗಳನ್ನು ಮಾಡುವುದು.
- ಎಲೆಗಳು, ಶಂಖ, ಚಿಪ್ಪುಗಳು, ಹೂವಿನ ಬೀಜಗಳು, ಪುಕ್ಕಗಳು, ಮುಂತಾದವುಗಳನ್ನು ಸಂಗ್ರಹಿಸುವುದು.
- ಟೀ, ಕಾಫಿ, ನಿಂಬೆರಸ ಮುಂತಾದ ಪಾನೀಯಗಳನ್ನು ಮಾಡುವುದು.
- ಅವರದೇ ಪುಸ್ತಕಗಳಿಗೆ ಹೊದಿಕೆ ಹಾಕುವುದು.
- ಪ್ರತಿನಿತ್ಯ ಜೀವನದ ಕೌಟುಂಬಿಕ ವಸ್ತುಗಳನ್ನು ಖರೀದಿಸುವುದು.
- ಅವರ ಕಿರಿಯರನ್ನು ನೋಡಿಕೊಳ್ಳುವಲ್ಲಿ ಪೋಷಕರಿಗೆ ನೆರವಾಗುವುದು ಮತ್ತು ಅವರ ಅಧ್ಯಯನಕ್ಕೆ ನೆರವಾಗುವುದು.
- ಗಿಡಗಳನ್ನು ಪೋಷಿಸುವುದು.
- ಶಾಲೆಯಲ್ಲಿ ಸ್ವಚ್ಛತೆಗೆ ಸಂಬಂಧಿಸಿದ ಕೆಲಸ.

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿ – 2

1. ಕಾರ್ಯ ಅನುಭವದಡಿಯಲ್ಲಿ ಮಾಡಲಾಗುವ ಚಟುವಟಿಕೆಗಳ ಯಾವುದಾದರೂ ಎರಡು ಆಧಾರಗಳನ್ನು ಬರೆಯಿರಿ.

___

___

2. ಅವರ ದಿನಚರಿಯಲ್ಲಿ ಉಪಯುಕ್ತವಾಗುವ ಯಾವುದಾದರೂ ಐದು ಚಟುವಟಿಕೆಗಳನ್ನು 5ನೇ ತರಗತಿಯ ವಿದ್ಯಾರ್ಥಿಗಳಿಗೆ ಸೂಚಿಸಿ.

## 13.3 ವಿದ್ಯಾರ್ಥಿಗಳನ್ನು ಗುಂಪು ಮಾಡುವುದು

ವಿದ್ಯಾರ್ಥಿಗಳು ಅವರ ಮನೋಭಾವನೆ ಮತ್ತು ಕಲ್ಪನೆಗಳಿಗೆ ರೂಪ ಕೊಟ್ಟಾಗ ಮತ್ತು ಗುಂಪುಗಳಲ್ಲಿ ಕೆಲಸ ಮಾಡಿದಾಗ ಅವರು ಸಂತೋಷಪಡುವುದನ್ನು ಬಹುಶಃ ನೀವು ಗಮನಿಸಿರುತ್ತೀರಿ.

- ಈ ಕಲಿಕಾ ಪ್ರಕ್ರಿಯೆಯ ಮೂಲಕ ಅವರ ಸಂತೋಷದ ಭಾವನೆಗಳಲ್ಲಿ ಸಕಾರಾತ್ಮಕ ವರ್ಧನೆಯಿದೆ.
- ಅವರು ತಂಡಸ್ಫೂರ್ತಿಯನ್ನು ಬೆಳೆಸಿಕೊಳ್ಳುತ್ತಾರೆ.
- ಅವರು ಪರಸ್ಪರ ಬೋಧನೆ, ಕಲಿಕೆಯ ಕೌಶಲ್ಯಗಳನ್ನು ಪ್ರದರ್ಶಿಸುತ್ತಾರೆ.
- ಸಹಕಾರ ಮತ್ತು ನಾಯಕತ್ವದಂತಹ ಗುಣಗಳು ಸಹಜವಾಗಿ ಅಭಿವೃದ್ಧಿಯಾಗುತ್ತದೆ.

ಕಾರ್ಯ ಶಿಕ್ಷಣದಲ್ಲಿನ ಬಹುತೇಕ ಚಟುವಟಿಕೆಗಳ ಸ್ವರೂಪವು ಹೇಗಿದಯೆಂದರೆ ಅವುಗಳನ್ನು ಗುಂಪುಗಳಲ್ಲಿ ಮಾಡಿದಾಗ ಉತ್ತಮ ಫಲಿತಾಂಶವನ್ನು ನೀಡುತ್ತವೆ. ಬುದ್ಧಿ ಸಾಮರ್ಥ್ಯ, ಮೌಲ್ಯಗಳು

ಮತ್ತು ಕೌಶಲ್ಯಗಳಿಗೆ ಸಂಬಂಧಿಸಿದ ಗುಣಗಳು, ಇತರೆ ಸಾಮಾಜಿಕ ಮೌಲ್ಯಗಳಾದ ಪರಸ್ಪರರ ಮತ್ತು ಪರಿಸರದ ಬಗ್ಗೆ ಸಂವೇದನೆ, ಅನುಭೂತಿ, ಸಹಕಾರ, ಪರಸ್ಪರಾವಲಂಬನೆಯ ಅರಿವು, ಪ್ರಕೃತಿಯ ಬಗ್ಗೆ ಪ್ರೀತಿ, ಸೌಂದರ್ಯದ ಬಗ್ಗೆ ಮೆಚ್ಚುಗೆ, ಶ್ರಮದ ಘನತೆ, ನಿಯಮಿತತೆ ಮುಂತಾದವು ಗುಂಪುಗಳಲ್ಲಿ ಕೆಲಸ ಮಾಡಿದಾಗ ಹೆಚ್ಚಾಗಿ ಅರಳುತ್ತವೆ. ಗುಂಪುಗಳಲ್ಲಿ ಕೆಲಸ ಮಾಡುವುದರಿಂದ ಒಂದು ಸಾಮಾನ್ಯ ಸಂಸ್ಕೃತಿಯ ಪರಿಸರ ಬೆಳೆಯುತ್ತದೆ. ಕಲಿಯುವವರನ್ನು ಒಂದು ವ್ಯವಸ್ಥಿತ ರೀತಿಯಲ್ಲಿ ಗುಂಪು ಮಾಡಿದಾಗ ಮಾತ್ರ ಮೇಲೆ ತಿಳಿಸಿದ ಸಕಾರಾತ್ಮಕ ಅಂಶಗಳನ್ನು ಉತ್ತೇಜಿಸಲು ಸಾಧ್ಯ. ವಿದ್ಯಾರ್ಥಿಗಳನ್ನು ಗುಂಪು ಮಾಡುವಾಗ ಕೆಳಕಂಡ ಅಂಶಗಳ ಬಗ್ಗೆ ನೀವು ಗಮನಹರಿಸಬೇಕಾಗುತ್ತದೆ.

- ನೀವು ಒಂದೇ ತರಗತಿಯ ವಿವಿಧ ಗುಂಪುಗಳನ್ನು ಮಾಡುತ್ತಿದ್ದೀರೊ ಅಥವಾ ಎರಡು ಅಥವಾ ಮೂರು ತರಗತಿಗಳನ್ನು ಒಟ್ಟುಗೂಡಿಸಿ ಗುಂಪುಗಳನ್ನು ರೂಪಿಸುತ್ತಿದ್ದೀರೊ.

ಒಂದು ನಿರ್ದಿಷ್ಟ ಕಾರ್ಯಕ್ರಮದ ಉದ್ದೇಶಗಳನ್ನು ವೀಕ್ಷಿಸುತ್ತಿರುವಾಗ ನೀವು ಎರಡೂ ಸನ್ನಿವೇಶಗಳನ್ನು ಎದುರಿಸುತ್ತೀರಿ. ಕೆಲವು ಚಟುವಟಿಕೆಗಳಿಗೆ ನೀವು ತರಗತಿವಾರು ಗುಂಪುಗಳನ್ನು ಮಾಡುತ್ತೀರಿ ಮತ್ತು ಕೆಲವಕ್ಕೆ ಮಿಶ್ರ ಗುಂಪುಗಳನ್ನು ರೂಪಿಸುತ್ತೀರಿ.

ಉದಾಹರಣೆಗೆ:

- ಬೆಳಗಿನ ಸಭೆಯ ಆಯೋಜನೆಯಲ್ಲಿ ಎಲ್ಲಾ ವಿದ್ಯಾರ್ಥಿಗಳ ಭಾಗವಹಿಸುವಿಕೆ. ಎರಡೂ ಸನ್ನಿವೇಶಗಳ ಬಗ್ಗೆ ಆಲೋಚಿಸಿ.
- ಸಹ ಶಿಕ್ಷಣದಲ್ಲಿ ಮಿಶ್ರ ಗುಂಪನ್ನು ರೂಪಿಸಿ.
- ವಿಕಲ ಚೇತನ ಮಕ್ಕಳಿಗೆ ಪ್ರತ್ಯೇಕ ಗುಂಪು ಮಾಡಬೇಡಿ. ಅವರನ್ನು ಇತರೆ ಮಕ್ಕಳೊಡನೆ ಜೊತೆಗೂಡಿಸಿ ಮತ್ತು ಅವರಿಗೆ ಕೆಲವು ಅರ್ಥಪೂರ್ಣ ಪಾತ್ರ ಮತ್ತು ಜವಾಬ್ದಾರಿಯನ್ನು ನೀಡುವುದನ್ನು ಖಚಿತ ಪಡಿಸಿಕೊಳ್ಳಿ
- ಎಲ್ಲಾ ಬುದ್ಧಿವಂತ ಮತ್ತು ಶೀಘ್ರಕಲಿಕೆಯುವರನ್ನು ಒಂದು ಗುಂಪಿನಲ್ಲಿರಿಸಬೇಡಿ. ಅಂದರೆ, ನಿಧಾನ ಕಲಿಕೆಯ ಮತ್ತು ಬುದ್ಧಿವಂಥ ಮಕ್ಕಳ ಮಿಶ್ರ ಗುಂಪನ್ನು ಮಾಡಿ. ಪ್ರಾರಂಭದಲ್ಲಿ ಇಂತಹ ಗುಂಪುಗಳನ್ನು ಮಾಡುವಾಗ ನಿಮ್ಮ ಜವಾಬ್ದಾರಿ ಹೆಚ್ಚಾಗಬಹುದು. ಬುದ್ಧಿವಂತ / ಹಿರಿಯ ಮಕ್ಕಳು ಮತ್ತು ಶೀಘ್ರಕಲಿಕೆಯವರು ಇತರ ಮಕ್ಕಳನ್ನು ಹತ್ತಿಕ್ಕದಂತೆ ನೀವು ನಿರಂತವಾಗಿ ಗಮನಿಸುತ್ತಿರಬೇಕಾಗುತ್ತದೆ. ಸಮಾನ ಭಾಗವಹಿಸುವಿಕೆಯನ್ನು ಖಚಿತ ಪಡಿಸಿಕೊಳ್ಳಿ, ಅವರ ನಿರ್ಧಾರಗಳು ಮತ್ತು ಸಲಹೆಗಳನ್ನು ಆಲಿಸಿ ಮತ್ತು ಅವುಗಳನ್ನು ಅಗತ್ಯಕ್ಕನುಗುಣವಾಗಿ ಅನುಷ್ಠಾನಗೊಳಿಸಿ. ಇದರರ್ಥವೇನೆಂದರೆ, ಗುಂಪುಗಳಲ್ಲಿ ಪ್ರಜಾಸತ್ತಾತ್ಮಕ ಪರಿಸರವಿರಬೇಕು. ಇದಕ್ಕಾಗಿ ಪ್ರಾರಂಭದಲ್ಲಿ ಅವರಿಗೆ ಹೆಚ್ಚಿನ ಸಮಯ ಕೊಡಬೇಕಾಗಬಹುದು.
- ಇತರೆ ಕೆಲವು ಅಂಶಗಳು ಗುಂಪು ರಚನೆಯ ಮೇಲೆ ಪರಿಣಾಮ ಬೀರುತ್ತವೆ.
  - ಸ್ಥಳದ ಲಭ್ಯತೆ
  - ಸಂಪನ್ಮೂಲಗಳು, ಸಾಮಗ್ರಿಗಳು, ಸಾಧನಗಳು ಮುಂತಾದವುಗಳು ಸಾಕಷ್ಟು ಪ್ರಮಾಣದಲ್ಲಿರುವುದು.
  - ಸಮಯದ ಲಭ್ಯತೆ

- ಮೇಲ್ವಿಚಾರಣೆ ಮತ್ತು ಮೌಲ್ಯಮಾಪನದ ವ್ಯವಸ್ಥೆ
- ವಿದ್ಯಾರ್ಥಿಗಳ ಸಂಖ್ಯೆ
- ಚಟುವಟಿಕೆಯ ಸ್ವರೂಪಿ ಮತ್ತು ಅದರ ಉದ್ದೇಶ
- ಕಲಿಯುವವರ ಆಸಕ್ತಿಗಳು, ಹಿಂದಿನ ಜ್ಞಾನ, ಪ್ರಾರಂಭದ ಪ್ರವೇಶದ ನಡತೆ ಇವುಗಳ ಆಧಾರದ ಮೇಲೆಯೂ ಗುಂಪುಗಳನ್ನು ರೂಪಿಸಬಹುದು.

ಪ್ರಾರಂಭಿಕ ಪ್ರವೇಶ ನಡತೆ ಎಂದರೆ ಕೆಲಸವನ್ನು ಮಾಡುವುದಕ್ಕಿಂತ ಮುಂಚೆ ಆ ಕೆಲಸದ ಸ್ವರೂಪದ ಬಗೆಗಿನ ಶಿಕ್ಷಣಾರ್ಥಿಯ ಹಿಂದಿನ ಜ್ಞಾನ ಹಾಗೂ ತಿಳುವಳಿಕೆಯಾಗಿದೆ. ಅನೇಕ ಮಕ್ಕಳು ಆಸಕ್ತಿಯಿಂದ ಅಥವಾ ಒತ್ತಾಯಪೂರ್ವಕವಾಗಿ ಹಲವು ಉತ್ಪಾದಕ ಚಟುವಟಿಕೆಗಳಲ್ಲಿ ಭಾಗವಹಿಸಬೇಕಾದ ಅಥವಾ ದಿನನಿತ್ಯದ ಚಟುವಟಿಕೆಗಳಲ್ಲಿ ನಿರ್ದಿಷ್ಟ ಪಾತ್ರವನ್ನು ವಹಿಸಬೇಕಾದ ಪರಿಸರ ಅವರ ಮನೆಯಲ್ಲಿರುತ್ತದೆ. ನಿಮ್ಮ ತರಗತಿಯಲ್ಲಿ ಕುಟುಂಬದ ಕೆಲಸಗಳಲ್ಲಿ ಭಾಗವಹಿಸಲು ಯಾವುದೇ ಅವಕಾಶ ಸಿಗದ ಕೆಲವು ವಿದ್ಯಾರ್ಥಿಗಳು ಇರಬಹುದು. ಅವರು ವೈಯಕ್ತಿಕ ಕೆಲಸಗಳನ್ನು ಅವರ ಪೋಷಕರ ಬೆಂಬಲದಿಂದ ಮಾಡಲಾಗುತ್ತದೆ.

ಈ ಎರಡು ರೀತಿಯ ಮಕ್ಕಳ ಪ್ರಾರಂಭಿಕ ನಡೆತೆಯಲ್ಲಿ ಗಮನಾರ್ಹ ವ್ಯತ್ಯಾಸಗಳಿರುತ್ತವೆ. ಒಬ್ಬನಿಗೆ ಕೊಟ್ಟಿರುವ ಕಾರ್ಯದ ಜ್ಞಾನ, ತಂತ್ರ ಮತ್ತು ಸಾಮಗ್ರಿಯ ಭಾಗಶಃ ಅಥವಾ ಸಂಪೂರ್ಣ ತಿಳುವಳಿಕೆ ಇದ್ದರೆ, ಮತ್ತೊಬ್ಬನಿಗೆ ಯಾವುದೇ ಅನುಭವ ಇರದಿರಬಹುದು. ಗುಂಪು ರಚನೆ ಪ್ರಕ್ರಿಯೆಯ ನಿಮ್ಮ ಆಧಾರವೇನು? ಪತ್ಯೇಕ ಗುಂಪುಗಳನನು ಮಾಡುವುದರಿಂದ ಆಗುವ ಹಾನಿಯೇನು? ನೀವು ಮಿಶ್ರ ಬಹು ವರ್ಗಗಳ ಮತ್ತು ಮಿಶ್ರ ಸಾಮರ್ಥ್ಯವನ್ನು ಹೊಂದಿರುವ ಮಕ್ಕಳ ಮಿಶ್ರ ಗುಂಪುಗಳನ್ನು ರಚಿಸಿದರೆ ನಿಮ್ಮ ಜವಾಬ್ದಾರಿ ಎಷ್ಟು ಮಟ್ಟಿಗೆ ಹೆಚ್ಚಾಗಬಹುದು? ವಿವಿಧ ಅಂಶಗಳ ಬಗ್ಗೆ ಆಲೋಚಿಸಿದ ನಂತರವೇ ನೀವು ಗುಂಪುಗಳನ್ನು ರಚಿಸಬೇಕೆಂದು ನಿರೀಕ್ಷಿಸಲಾಗುತ್ತದೆ. ಒಂದು ನಿರ್ದಿಷ್ಟ ಚಟುವಟಿಕೆಗಾಗಿ ಅಥವಾ ಒಂದು ಅವಧಿಯ ಪ್ರಾರಂಭದಲ್ಲಿ ರಚಿಸಿದ ಗುಂಪುಗಳು ಶಾಶ್ವತವಘಿರಬೇಕೆಂಬ ಅಗತ್ಯವೇನಿಲ್ಲ. ಗುಂಪುಗಳ ಸಂಘಟನೆಯಲ್ಲಿ ನೀವು ಬದಲಾವಣೆಗಳನ್ನು ತರಬಹುದು. ಗುಂಪು ರಚನೆಯಲ್ಲಿ ಬದಲಾವಣೆಗಳನ್ನು ತರಲು ನಿಮಗೆ ಕೆಲವು ಆಧಾರಗಳಿರಬೇಕು. ಉದಾಹರಣೆಗೆ,

- ಹಿಂದಿನ ಗುಂಪಿನ ವಿಧಾನ
- ಹೊಸ ಸನ್ನಿವೇಶಗಳು
- ಚಟುವಟಿಕೆಗಳ ಸ್ವರೂಪದಲ್ಲಿ ಬದಲಾವಣೆಗಳು
- ನಾವೀನ್ಯತೆಗೆ ಪ್ರಯತ್ನ

ನೀವು ಈ ಹಿಂದೆ ರಚಿಸಿದ ಗುಂಪುಗಳಲ್ಲಿ ಬದಲಾವಣೆಗಳನ್ನೂ ತರುವ ಮೂಲಕ ನಿಮ್ಮ ಜವಾಬ್ದಾರಿಯನ್ನು ಹೆಚ್ಚಿಸಕೊಳ್ಳುತ್ತಿದ್ದೀರೆಂಬುದರಲ್ಲಿ ಅನುಮಾನವಿಲ್ಲ. ಬದಲಾಗಿ ನಿಮ್ಮ ವಿಷಯದ ಬಗ್ಗೆ ನಿಮ್ಮ ಅರಿವು ಮತ್ತು ಪ್ರಾಮಾಣಿಕತೆಯನ್ನು ನೀವು ವ್ಯಕ್ತಪಡಿಸುತ್ತಿದ್ದೀರಿ.

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿ – 3

1. ಕಾರ್ಯ ಶಿಕ್ಷಣಕ್ಕೆ ಸಂಬಂಧಿಸಿದಂತೆ ವಿವಿಧ ಚಟುವಟಿಕೆಗಳನ್ನು ಕೈಗೊಳ್ಳಲು ಗುಂಪುಗಳನ್ನು ರಚಿಸುವುದು ಏಕೆ ಅವಶ್ಯಕತೆ?

---

---

2. ಗುಂಪುಗಳನ್ನು ರಚಿಸುವಾಗ ಯಾವ ಪ್ರಮುಖ ವಿಷಯಗಳನ್ನು ಗಮನದಲ್ಲಿರಿಸಿಕೊಳ್ಳಬೇಕು?

---

---

3. ಒಂದೇ ರೀತಿಯ ಅನುಭವಗಳಿರುವ ಮಕ್ಕಳು ಗುಂಪಗಳನ್ನು ಮಾಡುವುದು ಸೂಕ್ತವೆ? ಕಾರಣ ನೀಡಿ.

---

---

### 13.3.1 ಸಮಯ ಹಂಚಿಕೆ

ಪ್ರತಿಯೊಂದು ಚಟುವಟಿಕೆಯ ಸ್ವರೂಪ ಅದರ ಉದ್ದೇಶಗಳು ಮತ್ತು ನಿರೀಕ್ಷಿತ ಫಲಿತಾಂಶಗಳ ಆಧಾರದ ಮೇಲೆ ಸಮಯವನ್ನು ಹಂಚಿಕೆ ಮಾಡಬಹುದು. ಪ್ರತಿ ಚಟುವಟಿಕೆಯ ಎಲ್ಲಾ ಹಂತಗಳನ್ನು ಶಾಲೆಯಲ್ಲೆ ಕೈಗೊಳ್ಳಬೇಕೆಂಬ ಅವಶ್ಯಕತೆಯೇನಿಲ್ಲ. ಕೆಲವು ಚಟುವಟಿಕೆಗಳು ಶಿಕ್ಷಕರ ಪ್ರಾತ್ಯಕ್ಷಕೆಯಿಂದ ಪ್ರಾರಂಭವಾಗಿ ಅವರ ಅನುಕೂಲಕ್ಕನುಗುಣವಾಗಿ ಮನೆಗಳಲ್ಲಿ ಅಥವಾ ಸಮುದಾಯಗಳಲ್ಲಿ ಅನುಭವ ಪಡೆದುಕೊಳ್ಳಬಹುದು.

ಸಮಯಕ್ಕೆ ಸಂಬಂದಿಸಿದ ಪ್ರಮುಖ ಅಂಶವೇನೆಂದರೆ, ಯಾವ ಚಟುವಟಿಕೆಯನ್ನು ವರ್ಷದ / ಅವಧಿಯ ಯಾವ ಭಾಗದಲ್ಲಿ ಮಾಡಬೇಕು. ಈ ಅಂಶದ ನಿರ್ಧಾರ ಚಟುವಟಿಕೆಯ ಸ್ವರೂಪ ಹಾಗೂ ಶಾಲೆ ಮತ್ತು ಸಮದಾಯದ ಅಗತ್ಯತೆಯನ್ನು ಅವಲಂಬಿಸಿರುತ್ತದೆ.

ಕಾರ್ಯ ಶಿಕ್ಷಣದ ಶಿಕ್ಷಕರಾಗಿ ನೀವು ಒಂದು ಅವಧಿಯ ನಿದಿಷ್ಟ ತಿಂಗಳಿನಲ್ಲಿ ಯಾವುವು ಇತರೆ ಚಟುವಟಿಕೆಗಳು ಮತ್ತು ಅವುಗಳಲ್ಲಿ ಯಾವುವು ಕಾರ್ಯ ಶಿಕ್ಷಣ ಕಾರ್ಯಕ್ರಮದ ಭಾಗವಾಬಹುದೆಂಬುದನ್ನು ನೀವು ಯೋಜಿಸಬಹುದು.

1. ಪ್ರವೇಶ ನಿಯಮಗಳ ಬಗ್ಗೆ ಮಾಹಿತಿಯನ್ನು ಶಾಲೆಗೆ ಮಕ್ಕಳನ್ನು ಕಳುಹಿಸುವ ಕಾಲೋನಿಗಳ ಬೀದಿ ಬೀದಿಯ ಸಭೆಗಳಲ್ಲಿ ವೈಯಕ್ತಿಕವಾಗಿ ಪೋಷಕರನ್ನು ಭೇಟಿ ಮಾಡುವ ಅಥವಾ ಆಹ್ವಾನಿಸುವ ಮೂಲಕ ನೀಡಬಹುದು.
2. ಪ್ರವೇಶದ ಸಮಯದಲ್ಲಿ ಕೆಲವು ವಿಶೇಷ ವ್ಯವಸ್ಥೆಗಳನ್ನು ಮಾಡಲಾಗುತ್ತದೆ. ಉದಾಹರಣೆಗೆ ಶಾಲೆಯ ಮುಖ್ಯದ್ವಾರದಲ್ಲಿ ಸೂಚನೆಗಳನ್ನು ನೀಡುವುದಕ್ಕೆ ಸಂಬಂಧಿಸಿದ ಕೆಲಸ, ಪೋಷಕರಿಗೆ ಆಸನದ ವ್ಯವಸ್ಥೆ, ಅನಕ್ಷರಸ್ಥ ಪೋಷಕರಿಗೆ ಪ್ರವೇಶ ಅರ್ಜಿಯನ್ನು ತುಂಬಲು

ಸಹಾಯ ಮಾಡುವುದು. ಎಲ್ಲರಿಗೂ ಕುಡಿಯುವ ನೀರಿನ ವ್ಯವಸ್ಥೆ ಮಾಡುವುದು. ಅನೇಕ ಕಾರ್ಯ ಶಿಕ್ಷಣ ಕಾರ್ಯಕ್ರಮಗಳನ್ನು ಪರಿಗಣಿಸುವ ಸಾಧ್ಯತೆ.

3. ಏಪ್ರಿಲ್‌ನ ನಂತರ ಮೇ ಮತ್ತು ಜೂನ್‌ನಲ್ಲಿ ಬೇಸಿಗೆ ರಜೆಯಿರುತ್ತದೆ. ವಿದ್ಯಾರ್ಥಿಗಳಿಗೆ ನೀಡಬಹುದಾದ ಕಾರ್ಯಗಳ ಪ್ರಾಜೆಕ್ಟ್‌ಗಳನ್ನು ನೀವು ಯೋಜನೆ ರೂಪಿಸಬಹುದು. ಬೀಜಗಳು ಮತ್ತು ಗಿಡಮೂಲಿಕೆಗಳ ಸಂಗ್ರಹ, ಮಾವಿನ ಬೀಜದಿಂದ ಶಿಳ್ಳೆಯನ್ನು ಮಾಡುವುದು. ವಿವಿಧ ಮಾವಿನ ಹಣ್ಣುಗಳ ಬಗ್ಗೆ ತಿಳಿದುಕೊಳ್ಳುವುದು ಯಾವುದಾದರೂ ಹತ್ತು ದಿನಗಳಿಗೆ ದಿನಚರಿ ಬರೆಯುವುದು. ಮುರಿದ ವಸ್ತುಗಳನ್ನು ಸಂಗ್ರಹಿಸುವುದು. ಮುಂತಾದ ಹಲವು ಚಟುವಟಿಕೆಗಳನ್ನು ಗೃಹಕಾರ್ಯದ ರೂಪದಲ್ಲಿ ನೀಡಬಹುದು.
4. ಬೇಸಿಗೆ ರಜೆಯ ನಂತರ ಶಾಲೆಗಳು ಜುಲೈನಲ್ಲಿ ಪುನರಾರಂಭವಾಗುತ್ತವೆ. ಈಗ ನಿಮಗೆ ಶಾಲಾ ಚಟುವಟಿಕೆಗಳು ಮತ್ತು ಜುಲೈನಲ್ಲಿನ ಹವಾಗುಣಕ್ಕನುಗುಣವಾಗಿ ಅನೇಕ ಕಾರ್ಯಕ್ರಮಗಳಿರುತ್ತವೆ. ನೀವು ವಿದ್ಯಾರ್ಥಿಗಳ ದೈಹಿಕ ಮತ್ತು ಮಾನಸಿಕ ಸಾಮರ್ಥ್ಯಗಳಗನುಗುಣವಾಗಿ ಯಾವುದೇ ಕಾರ್ಯಕ್ರಮವನ್ನು ನೀವು ಆಯ್ಕೆ ಮಾಡಿಕೊಳ್ಳಬಹುದು. ಉದಾಹರಣೆಗೆ,
   ಹೊಸದಾಗಿ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳನ್ನು ಅನೌಪಚಾರಿಕವಾಗಿ ಸ್ವಾಗತಿಸಲು ಸ್ವಾಗತ ಕಾರ್ಯಕ್ರಮವನ್ನು ಆಯೋಜಿಸುವುದು.
5. ಜುಲೈನಲ್ಲಿ ಮಳೆಯಿರುತ್ತದೆ. ಜಾಗದ ಲಭ್ಯತೆಯ ಆಧಾರದ ಮೇಲೆ ಕೃಷಿಗೆ ಸಂಬಂಧಿಸಿದ ಕೆಲಸಗಳನ್ನು ಅವರು ಮಾಡುವಂತೆ ಮಾಡಬಹುದು. ಮಳೆಯ ನಂತರ ತೇವಾಂಶದಿಂದ ರಕ್ಷಣೆ ಪಡೆಯುವ ಮಾರ್ಗಗಳನ್ನು ಕುರಿತ ಚಟುವಟಿಕೆಗಳ ಬಗ್ಗೆ ಯೋಚಿಸಬಹುದು. ಅಲ್ಲದೆ ಕಾಳುಗಳ ಸಂಗ್ರಹ, ಉಡುಪುಗಳ ರಕ್ಷಣೆ ಮುಂತಾದ ಚಟುವಟಿಕೆಗಳನ್ನು ನೀಡಬಹುದು.

ಈ ತಿಂಗಳಿನಲ್ಲಿ ಜುಲೈ 11 ರಂದು 'ವಿಶ್ವ ಜನಸಂಖ್ಯಾ ದಿನ' ವನ್ನು ಆಚರಿಸಲಾಗುತ್ತದೆ. ಈ ದಿನದ ಉದ್ದೇಶಗಳನ್ನು ಗಮನದಲ್ಲಿರಿಸಿಕೊಂಡು ಅನೇಕ ಚಟುವಟಿಕೆಗಳನ್ನು ಆಯೋಜಿಸಬಹುದು.

ಉದಾಹರಣೆ:–

1. ಜಾಗೃತಿ ಜಾಥಾ, ನಾಟಕ, ಸಭೆಗಳನ್ನು ಏರ್ಪಡಿಸುವುದು.
2. ಜನಸಂಖ್ಯೆಯನ್ನು ಕುರಿತು ಘೋಷಣೆಗಳನ್ನು ಬರೆಯುವುದು.

6. ಆಗಸ್ಟ್ ಸ್ಥಳೀಯ ಮತ್ತು ರಾಷ್ಟ್ರೀಯ ಹಬ್ಬಗಳ ತಿಂಗಳಾಗಿದೆ. ರಾಖಿಗಳು ಮತ್ತು ಧ್ವಜಗಳನ್ನು ಮಾಡುವ ಚಟುವಟಿಕೆಗಳು ಹಬ್ಬಗಳ ಸ್ವರೂಪಗಳಿಗೆ ತಕ್ಕಂತೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸಂಘಟಿಸುವುದು.

### 13.3.2 ಸ್ಥಳದ ಹಂಚಿಕೆ

ಕಾರ್ಯ ಶಿಕ್ಷಣಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳ ಯಶಸ್ವಿ ಸಂಘಟನೆಗೆ ಸೂಕ್ತ ಸ್ಥಳ ತುಂಬಾ ಮಹತ್ವವಾದುದು. ಪ್ರಾಥಮಿಕ ಹಂತದಲ್ಲಿ ಮಕ್ಕಳಿಗೆ ಕಾರ್ಯ ಶಿಕ್ಷಣದ ಚಟುವಟಿಕೆಗಳು ಸುಲಭ

ಮತ್ತು ಸಂತೋಷದಾಯಕವಾಗಿರುತ್ತವೆ. ಅವು ಕೆಲಸದ ಪರಿಸ್ಥಿತಿಗಳ ವೀಕ್ಷಣೆ ಹಾಗೂ ಕೆಲಸದ ಪ್ರಾಥಮಿಕ ಚಟುವಟಿಕೆಗಳು ಮತ್ತು ಅಧ್ಯಯನಗಳ ರೂಪದಲ್ಲಿರುತ್ತವೆ. ನೀವು ಈ ವಾಸ್ತವತೆಯನ್ನು ಅರ್ಥಮಾಡಿಕೊಂಡಿದ್ದರೆ, ಸ್ಥಳವನ್ನು ಹಂಚಿಕೆ ಮಾಡಲು ಸಮಸ್ಯೆಯಿರುವುದಿಲ್ಲ. ನಾವು ಚಟುವಟಿಕೆಗಳ ವೀಕ್ಷಣೆ ಮತ್ತು ಪರಿಸರ ಅಧ್ಯಯನಗಳನ್ನು ಸೇರಿಸಿದರೆ, ಆಗ ನಿಸ್ಸಂದೇಹವಾಗಿ ನಮ್ಮ ಕೆಲಸದ ಸ್ಥಳ ಕೇವಲ ತರಗತಿ ಕೊಠಡಿಗಳ ಬದಲಾಗಿ ಸ್ಥಳೀಯ ಪ್ರದೇಶದ ಒಂದು ಭಾಗವಾಗಿರುತ್ತದೆ.

ಉದಾಹರಣೆಗೆ:

- ಸಮುದಾಯ ನೀರಿನ ನಲ್ಲಿಗಳು
- ಕುಂಬಾರರ (ಮಡಿಕೆ ಮಾಡುವವರ) ಕೆಲಸದ ಸ್ಥಳ
- ಚಮ್ಮಾರರ (ಶೂ ತಯಾರಿಸುವವರ) ಕೆಲಸದ ಸ್ಥಳ
- ತರಕಾರಿ ಮಾರುವವರು, ಬೀದಿ ಬದಿ ಮಾರಾಟಗಾರರು,
- ದರ್ಜಿ ಅಂಗಡಿ
- ಅಂಚೆ ಕಛೇರಿ, ಬ್ಯಾಂಕ್, ರೇಷನ್ ಅಂಗಡಿ
- ಆಹಾರ ಸಂರಕ್ಷಣೆ ಕೇಂದ್ರ
- ಸಮುದಾಯ ಕೇಂದ್ರ
- ಪ್ರದೇಶಾಭಿವೃದ್ಧಿ ಕೇಂದ್ರ
- ವಯಸ್ಕ ಮತ್ತು ಅನೌಪಚಾರಿಕ ಶಿಕ್ಷಣ ಕೇಂದ್ರ
- ಪಾರ್ಕ್, ಬಯಲು, ತೋಟ ಮತ್ತು ಹೂಹಾಸುಗಳು
- ಅಂಧರ ಶಾಲೆ, ವೃದ್ಧಾಶ್ರಮ, ಶಿಶುಕೇಂದ್ರ ಮುಂತಾದ ವಂಚಿತ ಗುಂಪುಗಳ ವಿಶೇಷ ಸೌಲಭ್ಯ ಕೇಂದ್ರಗಳು
- ಮಾರ್ಕೆಟ್, ಸೂಪರ್ ಮಾರ್ಕೆಟ್ ಮುಂತಾದವು.
- ಗೃಹ ಕೈಗಾರಿಕೆ
- ವಾರದ ಮಾರುಕಟ್ಟೆ (ಸಂತೆ)
- ಆಗಿಂದಾಗ್ಗೆ ಸಂಘಟಿಸುವ ಮೇಳಗಳು.

ಸ್ಥಳಕ್ಕೆ ಸಂಬಂಧಿಸಿದಂತೆ ಕೆಲವು ಅಂಶಗಳು ಪ್ರಮುಖವಾದವು.

1. ಶಾಲೆಯಿಂದ ಕೆಲಸದ ಸ್ಥಳದ ದೂರ – ಕೆಲಸದ ಸ್ಥಳವು ಶಾಲೆಯಿಂದ ತುಂಬಾ ದೂರವಿದ್ದರೆ, ಸಮಯ ಮತ್ತು ಶಕ್ತಿಯು ವ್ಯರ್ಥವಾಗುತ್ತದೆ. ಆದ್ದರಿಂದ ಸಮೀಪದಲ್ಲಿ ಕೆಲಸದ ಸ್ಥಳಕ್ಕೆ ಆದ್ಯತೆಯಿರಲಿ.
2. ಭೌಗೋಳಿಕ ಮತ್ತು ಸಾಮಾಜಿಕ ಪರಿಸ್ಥಿತಿ – ಭೌಗೋಳಿಕ ಎಂದರೆ, ಹವಾಗುಣದ ಪರಿಸ್ಥಿತಿಗಳು. ಮಕ್ಕಳನ್ನು ತುಂಬಾ ಛಳಿ, ಸೆಕೆ, ಅಥವಾ ಮಳೆಯ ಹವಾಗುಣವಿರುವಾಗ

ಹೊರಗೆ ಕರೆದುಕೊಂಡುವ ಬಗ್ಗೆ ಎಚ್ಚರವಿರಲಿ. ಆರೋಗ್ಯ ಮತ್ತು ಸುರಕ್ಷತೆಗಳು ಸಹ ನೀವು ಎಚ್ಚರವಹಿಸ ಬೇಕಾದ ಅಂಶಗಳು. ಸಮಾಜಿಕ ಪರಿಸ್ಥಿತಿಗಳು ಎಂದರೆ ವಿಶೇಷ ಪ್ರಸಂಗಗಳು (ದುರಂತ ಅಥವಾ ಸಂತೋಷದಾಯಕ) ಸಮೀಪದಲ್ಲಿ ಘಟಿಸುವುದು, ರಾಜಕೀಯ ರ್‍ಯಾಲಿಗಳು, ಮದುವೆಗಳು, ಧಾರ್ಮಿಕ ಆಚರಣೆಗಳು, ಗಲಭೆಗಳು ಮುಂತಾದವು ಇವುಗಳು ಪ್ರವಾಸಗಳಿಗೆ ಸೂಕ್ತ ಸಂದರ್ಭಗಳಲ್ಲ.

3. ವಿದ್ಯಾರ್ಥಿಗಳ ಸಂಖ್ಯೆ – ನಿಮ್ಮ ಯೋಜನೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆಯನ್ನು ನಿರ್ಲಕ್ಷಿಸಲಾಗುವುದಿಲ್ಲ. ಎಷ್ಟು ವಿದ್ಯಾರ್ಥಿಗಳನ್ನು ಪ್ರವಾಸಕ್ಕೆ ಕರೆದುಕೊಂಡು ಹೋಗಬಹುದೆಂಬುದನು ನಿರ್ಧರಿಸುವುದು ಮುಖ್ಯವಾದುದು. ನೀವೊಬ್ಬರೆ ಮಕ್ಕಳನ್ನು ಕರೆದುಕೊಂಡು ಹೋಗುತ್ತಿದ್ದೀರಾ?

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿ – 5

1. ಕಾರ್ಯ ಶಿಕ್ಷಣದಲ್ಲಿ ಚಟುವಟಿಕೆಗಳನ್ನು ಆಯೋಜಿಸಿವಾಗ ಸಮಯ ಹಂಚಿಕೆಯೆಂದರೆ ಏನೆಂದು ಅರ್ಥ ಮಾಡಿಕೊಳ್ಳುತ್ತೀರಿ?

___

___

___

2. 8ನೇ ತರಗತಿಯವರು ಛಳಿಗಾಲದ ರಜೆಯಲ್ಲಿ ಮಾಡಬಹುದಾದ ಯಾವುದಾದರೂ ಮೂರು ಚಟುವಟಿಕೆಗಳನ್ನು ಬರೆಯಿರಿ.

___

___

___

3. ಕಾರ್ಯ ಶಿಕ್ಷಣಕ್ಕೆ ಸಂಬಂಧಿಸಿದ ಚಟುವಟಿಕೆಗಳನ್ನು ಆಯೋಜಿಸಲು ಯಾವ ಅಂಶಗಳನ್ನು ಪರಿಗಣಿಸುತ್ತೀರಿ?

___

___

___

## 13.4 ವಿವಿಧ ತರಗತಿಗಳಿಗೆ ಕಾರ್ಯ ಶಿಕ್ಷಣದ ಅವಧಿಗಳ ಯೋಜನೆ

ಕಾರ್ಯ ಶಿಕ್ಷಣಕ್ಕೆ ಸಂಬಂಧಿಸಿದ ಚಟುವಟಿಕೆಗಳನ್ನು ಯೋಜಿಸುವಾಗ ಕೆಳಕಂಡ ಅಂಶಗಳ ಮೇಲೆ ಗಮನಹರಿಸುವುದು ಮುಖ್ಯ.

- ಮಕ್ಕಳ ಸ್ವಯಂ ಅಭಿವ್ಯಕ್ತಿಗೆ ಅವಕಾಶಗಳನ್ನು ಕಲ್ಪಿಸುವುದು.
- ಆಸ್ಕತಿಯನ್ನು ಉದ್ದೀಪಿಸುವ ಮತ್ತು ಅವರ ಪರಿಸರವನ್ನು ವೀಕ್ಷಿಸುವ ಅವಕಾಶವನ್ನು ಒದಗಿಸುವುದು.

- ಅವರು ತಮ್ಮ ದಿನಚರಿಗಳನ್ನು ಸಮರ್ಪಕವಾಗಿ ನಿರ್ವಹಿಸಲು ಸಹಾಯ ಮಾಡುವುದು.
- ಪರಿಸರ ಸಂರಕ್ಷಣೆಯ ಬಗ್ಗೆ ಜಾಗೃತಿ ಮೂಡಿಸುವುದು.
- ವಿವಿಧ ಚಟುವಟಿಕೆಗಳಿಂದ ಪಡೆದ ಅನುಭವಗಳನ್ನು ಒಟ್ಟುಗೂಡಿಸಲು ನೆರವಾಗುವುದು.
- ಪ್ರತಿದಿನದ ಸಮಸ್ಯೆಗಳನ್ನು ಪರಿಹರಿಸಲು ಅಗತ್ಯವಿರುವ ಮೂಲಭೂತ ಕೌಶಲ್ಯಗಳನ್ನು ಗಳಿಸಿಕೊಳ್ಳಲು ಮಕ್ಕಳಿಗೆ ನೆರವಾಗುವುದು.
- ಇತರರಿಗೆ ನೆರವಾಗಲು ಮತ್ತು ಗುಂಪುಗಳಲ್ಲಿ ಬದುಕಲು ಬೇಕಾದ ಸಕಾರತ್ಮಕ ಮನೋಭಾವವನ್ನು ಬೆಳೆಸುವುದು.

### 13.4.1 ಮೂಲಭೂತ ಅವಶ್ಯಕತೆಗಳ ಉತ್ತ, ಪೂರೈಕೆಗೆ ಸಂಬಂಧಿಸಿದ ಚಟುವಟಿಕೆಗಳು

ಇದರಲ್ಲಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಸೇರಿಸಬಹುದು.

1. ಆರೋಗ್ಯ ಮತ್ತು ನೈರ್ಮಲ್ಯ

   ವೈಯಕ್ತಿಕ ನೈರ್ಮಲ್ಯ, ಸ್ವಚ್ಛತೆ ಮತ್ತು ದಿನನಿತ್ಯದ ಬದುಕಿನಲ್ಲಿ ಬೇಕಿರುವ ವಸ್ತುಗಳ ನಿರ್ವಹಣೆಯ ಬಗ್ಗೆ ಅರಿವು.

   - ಪುಸ್ತಕಗಳು ಮತ್ತು ನೋಟ್ ಪುಸ್ತಕಗಳ ಬೈಂಡ್ ಮಾಡುವುದು.
   - ಶಾಲೆ ಮತ್ತು ಮನೆಯಲ್ಲಿ ಸ್ವಚ್ಛತೆಯನ್ನು ಕಾಪಾಡುವುದು.
   - ರಿಪೇರಿ ಕೆಲಸ, ಪುಸ್ತಕ ರ್‍ಯಾಕ್‌ಗಳು, ಕಾರ್ಪೆಟ್‌ಗಳು, ಪೋಸ್ಟರ್‌ಗಳಿ, ಕ್ಯಾಲೆಂಡರ್, ಚಾರ್ಟ್‌ಪೇಪರ್ ಮತ್ತು ಇತರೆ ಚಿತ್ರಗಳು ಇವುಗಳ ನಿರ್ವಹಣೆ.

2. ಆಹಾರ ಮತ್ತು ಕೃಷಿ:

   - ವಿವಿಧ ಬೀಜಗಳು, ಅರಣ್ಯ ಉತ್ಪನ್ನಗಳು, ಗೊಬ್ಬರ, ಮಣ್ಣುಗಳನ್ನು ಗುರುತಿಸುವುದು.
   - ವ್ಯವಸಾಯ, ಕೃಷಿ ಉತ್ಪನ್ನಗಳು ಮತ್ತು ಗೊಬ್ಬರಗಳಿಗಾಗಿ ಉಪಯೋಗಿಸುವ ಸಲಕರಣೆಗಳನ್ನು ಗುರುತಿಸುವುದು.
   - ಕಾಂಪೋಸ್ಟ್ ಗುಂಡಿಗಳನ್ನು ನಿರ್ಮಿಸುವುದು, ಹೂವಿನ ಗಿಡಗಳ ಹಾಸುಗಳನ್ನು ನಿರ್ಮಿಸುವುದು. ಉತ್ತಮಗುಣಮಟ್ಟದ ಬೀಜಗಳನ್ನು ಆಯ್ಕೆ ಮಾಡಿಕೊಳ್ಳುವುದು. ಬೀಜಗಳನ್ನು ನೆಡುವುದು ಮುಂತಾದವು.
   - ಗಿಡಗಳ ಆರೈಕೆ ಮತ್ತು ನಿರ್ವಹಣೆ ಮಾಡುವುದು.
   - ಆಹಾರ ಮತ್ತು ಹಣ್ಣುಗಳ ಸಂರಕ್ಷಣೆ.
   - ಕಾಫಿ, ಟೀ, ಜಲ್‌ಜೀರಾ ಮುಂತಾದವುಗಳನ್ನು ತಯಾರಿಸುವುದು.
   - ಸ್ಕ್ವಾಷ್ ಮತ್ತು ಉಪ್ಪಿನಕಾಯಿಗಳನ್ನು ತಯಾರಿಸುವುದು.

- ಹೂಜಿಗಳು, ಮಣ್ಣಿನ ಮಡಕೆಗಳು ಮತ್ತು ಹೂದಾನಿಗಳ ಸಹಾಯದಿಂದ ಶೈತ್ಯಕಾರಕಗಳನ್ನು (ಕೂಲರ್ಸ್) ತಯಾರಿಸುವುದು.
- ಪ್ಲಾಸ್ಟಿಕ್, ಸೆಣಬಿನ ಚೀಲ ಮತ್ತು ಹಗ್ಗದ ಸಹಾಯದಿಂದ ಉಯ್ಯಾಲೆಗಳನ್ನು ತಯಾರಿಸುವುದು.

3. ಮನೆ / ವಾಸಸ್ಥಳ

- ಕಾಲುಚೀಲದಿಂದ ಬಾಟಲ್ ಬ್ರಷ್‌ನ್ನು ತಯಾರಿಸುವುದು, ಅನುಪಯುಕ್ತ ವಸ್ತುಗಳಾದ ಹುಲ್ಲು, ತೆಂಗಿನ ನಾರು, ಸೋರೆಬುರುಡೆ, ತೆಳುವಾದ ವೈರ್, ಬಲೆ ಮುಂತಾದವುಗಳನ್ನು ಬಳಸಿಕೊಂಡು ಪಾತ್ರೆಗಳನ್ನು ಸ್ವಚ್ಛಗೊಳಸುವ ಬ್ರಷ್‌ಗಳನ್ನು ತಯಾರಿಸುವುದು.
- ರ್‍ಯಾಕ್ ಮೇಜು, ಕುರ್ಚಿ, ಸ್ಟೂಲ್, ಮಂಚ, ನಲ್ಲಿ ಮುಂತಾದವುಗಳನ್ನು ರಿಪೇರಿ ಮಾಡುವುದು.

4. ಉಡುಪುಗಳು / ಬಟ್ಟೆಗಳು

- ಟಿ.ವಿ. ಪೆಟ್ಟಿಗೆಗಳು ಮುಂತಾದವುಗಳಿಗೆ ಹೊದಿಕೆ ತಯಾರಿಸುವುದು.
- ಗೊಂಬೆಗಳು ಮತ್ತು ಕೈಗೊಂಬೆಗಳನ್ನು ತಯಾರಿಸುವುದನ್ನು ಕಲಿಯುವುದು.
- ಉಳಿದಿರುವ ಉಣ್ಣೆ ಚೂರುಗಳು, ಬಟ್ಟೆಚೂರುಗಳು, ಸೆಣಬಿನ ಚೀಲ ಇವುಗಳನ್ನು ಬಳಸಿಕೊಂಡು ಕಾಲೊರಸುಗಳು ಮತ್ತು ಕುಳಿತುಕೊಳ್ಳುವ ಭಾಷೆಗಳನ್ನು (ಆಸನಗಳು) ತಯಾರಿಸುವುದು.

13.4.2 ಪರಿಸರವನು ಸುಂದರಗೊಳಿಸುವಿಕೆಗೆ ಸಂಬಂಧಿಸಿದ ಚಟುವಟಿಕೆಗಳು

1) ಉಪಯುಕ್ತ ವಸ್ತುಗಳನ್ನು ತಯಾರಿಸುವುದು.

- ಪೆನ್, ಪೆನ್ಸಿಲ್ ಹೋಲ್ಡರ್‌ಗಳು, ಮತ್ತು ಪಿನ್ ಹೋಲ್ಡರ್‌ಗಳು, ಲೆಟರ್‌ವಾಕ್ಸ್, ಬೀಸಣಿಕೆಗಳನ್ನು ತಯಾರಿಸುವುದು.
- ಮುಖವಾಡಗಳನ್ನು ತಯಾರಿಸುವುದು.
- ಶಾಲೆಯಲ್ಲಿ ಪ್ರದರ್ಶನ ಫಲಕಕ್ಕಾಗಿ ಸಾಮಗ್ರಿಗಳನ್ನು ತಯಾರಿಸುವುದು.
- ಮಣ್ಣಿನ ಪಾತ್ರೆಗಳನ್ನು ಒಡೆದ ಬಳೆಗಳು ಅಥವಾ ಇತರೆ ಯಾವುದೇ ವಸ್ತುಗಳಿಂದ ಅಲಂಕರಿಸುವುದು.
- ಮಣ್ಣಿನ ಆಟಿಕೆಗಳನ್ನು ತಯಾರಿಸುವುದು.

2) ಅಲಂಕಾರಕ್ಕಾಗಿ ಸಾಮಗ್ರಿಗಳನ್ನು ತಯಾರಿಸುವುದು.

- ಬಟ್ಟೆಯ ಪಟ್ಟಿಗಳು, ತೆಳುವಾದ ಕಾಗದದ ಬಣ್ಣದ ಪಟ್ಟಿಗಳು, ಮುತ್ತುಗಳು ಅಥವಾ ದಾರಗಳು ಮುಂತಾದವುಗಳ ಸಹಾಯದಿಂದ ಹೂಗಳನ್ನು ತಯಾರಿಸುವುದು.
- ಮಣ್ಣಿನ ಪಾತ್ರೆಗಳನ್ನು ಅಲಂಕರಿಸುವುದು.
- ಮಣ್ಣಿನ ಆಟಿಕೆಗಳು, ಹಕ್ಕಿಗಳು, ಪ್ರಾಣಿಗಳು, ಮುಂತಾದ ವಿವಿಧ ವಸ್ತುಗಳನ್ನು ತಯಾರಿಸುವುದು.
- ಸೆಣಬಿನ ವಸ್ತುಗಳು, ಹಗ್ಗ, ಪ್ಲಾಸ್ಟಿಕ್ ದಾರಗಳು ಮುಂತಾದವುಗಳಿಂದ ಅಲಂಕಾರ ವಸ್ತುಗಳನ್ನು ತಯಾರಿಸುವುದು.
- ಹಳೆಯ ಉಣ್ಣೆಯಿಂದ ಚಾಪೆಗಳನ್ನು ತಯಾರಿಸುವುದು.
- ಬಿದಿರಿನಿಂದ ಹೂದಾನಿಗಳನ್ನು ತಯಾರಿಸುವುದು.

### 13.4.3 ಸಮುದಾಯ ಸೇವೆಗಳಿಗೆ ಸಂಬಂಧಿಸಿದ ಚಟುವಟಿಕೆಗಳು

- ಸಮೀಪದ ವಾಸಸ್ಥಳದಲ್ಲಿ ಸ್ವಚ್ಛತಾ ಅಭಿಯಾನದಲ್ಲಿ ಭಾಗವಹಿಸುವುದು.
- ಹಬ್ಬಗಳು ಮತ್ತು ಕಾರ್ಯಕ್ರಮಗಳ ಸಂದರ್ಭದಲ್ಲಿ ಅಲಂಕಾರ ಮಾಡುವುದರಲ್ಲಿ ಪಾಲ್ಗೊಳ್ಳುವುದು.
- ಅವರ ಸಾಮರ್ಥ್ಯಕ್ಕನುಗುಣವಾಗಿ ಶಾಲಾ ಆವರಣದ ಸ್ವಚ್ಛತೆಯಲ್ಲಿ ಭಾಗವಹಿಸುವುದು.
- ವಿಕಲ ಚೇತನರಿಗೆ ಅವರ ದಿನನಿತ್ಯದ ಕೆಲಸಗಳಲ್ಲಿ ನೆರವಾಗುವುದು.

### 13.4.4. ಸಾಂಸ್ಕೃತಿಕ ಪರಂಪರೆ ಮತ್ತು ರಾಷ್ಟ್ರೀಯ ಐಕ್ಯತೆಗೆ ಸಂಬಂಧಿಸಿದ ಚಟುವಟಿಕೆಗಳು.

- ವಿವಿಧ ಸ್ಥಳಗಳ ಕರಕುಶಲ ವಸ್ತುಗಳ ಬಗ್ಗೆ ಮಾಹಿತಿ ಸಂಗ್ರಹಿಸುವುದು./
- ವಿವಿಧ ಸಂಗೀತ ವಾದ್ಯಗಳಿ, ನೃತ್ಯಗಳ ಚಿತ್ರಗಳನ್ನು ಸಂಗ್ರಹಿಸುವುದು.
- ಸ್ವಾತಂತ್ರ್ಯ ದಿನಾಚರಣೆ, ಗಣರಾಜ್ಯೋತ್ಸವ ಮುಂತಾದ ರಾಷ್ಟ್ರೀಯ ಹಬ್ಬಗಳನ್ನು ಆಚರಿಸುವುದು ಮತ್ತು ಅವುಗಳ ಬಗ್ಗೆ ತಿಳಿದುಕೊಳ್ಳುವುದು.
- ರಾಷ್ಟ್ರಧ್ವಜ ಮುಂತಾದ ರಾಷ್ಟ್ರೀಯ ಸಂಕೇತಗಳ ಚಿತ್ರಗಳ್ನು ಬಿಡಿಸುವುದು.

### 13.4.5. ಪರಿಸರ ಜಾಗೃತಿಗೆ ಸಂಬಂಧಿಸಿದ ಚಟುವಟಿಕೆಗಳು

- ಪರಿಸರ ಮಾಲಿನ್ಯಕ್ಕೆ ಸಂಬಂಧಿಸಿದ ಸುದ್ದಿ ಮತ್ತು ಚಿತ್ರಗಳನ್ನು ಸಂಗ್ರಹಿಸುವುದು.
- ಪರಿಸರ ಮಾಲಿನ್ಯ ಮಾಡುವ ಅಂಶಗಳಿಗೆ ಸಂಬಂಧಿಸಿದ ಚಿತ್ರಗಳನ್ನು ಪ್ರಕಟಣಾ ಫಲಕಗಳಲ್ಲಿ ಪ್ರದಶಿಸುವುದು.
- ಪರಿಸರ ಮಾಲಿನ್ಯಕ್ಕೆ ಸಂಬಂಧಿಸಿದ ಘೋಷಣೆಗಳನ್ನು ರಚಿಸಿ, ಅವುಗಳನ್ನು ಪ್ರದರ್ಶಿಸುವುದು.
- ಪರಿಸರ ಮಾಲಿನ್ಯದ ಹಾನಿಕಾರಕ ಪರಿಣಾಮಗಳಿಗೆ ಸಂಬಂಧಿಸಿದ ಚಾರ್ಟ್‌ಗಳನ್ನು ತಯಾರಿಸುವುದು.
- ವನಮಹೋತ್ಸವ ಗಿಡನೆಡುವಕೆಯಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು.

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿ–5

1. ಪರಿಸರವನ್ನು ಸುಂದರಗೊಳಿಸುವುದಕ್ಕೆ ಸಂಬಂಧಿಸಿದ ಯಾವುದಾದರೂ ಮೂರು ಚಟುವಟಿಕೆಗಳನ್ನು ಬರೆಯಿರಿ.

2. ಸಮುದಾಯ ಸೇವೆಗಳಿಗೆ ಸಂಬಂಧಿಸಿದ ಚಟುವಟಿಕೆಗಳ ಪಟ್ಟಿಯನ್ನು ತಯಾರಿಸಿ. (6 ಮತ್ತು 7 ನೇ ತರಗತಿಗಾಗಿ ಕನಿಷ್ಠ ಮೂರು ಚಟುವಟಿಕೆಗಳು)

## 13.5 ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ಕಾರ್ಯ ಶಿಕ್ಷಣಕ್ಕಾಗಿ ಸಾಮಗ್ರಿಗಳ ಆಯ್ಕೆ ಮತ್ತು ಸಂಯೋಜನೆ.

ಕಾರ್ಯಶಿಕ್ಷಣದ ಬಗೆಗಿನ ನಿಮ್ಮ ತಿಳುವಳಿಕೆಯು ಅದು ಒಂದು ಅರ್ಥಪೂರ್ಣ ಮತ್ತು ಉದ್ದೇಶಪೂರ್ವಕ ಹಾಗೂ ಕೆಲಸಾಧಾರಿತ ಚಟುವಟಿಕೆಯೊಡನೆ ಸಂಬಂಧ ಕಲ್ಪಿಸುತ್ತದೆ. ಇದರ ಫಲವನ್ನು ಉತ್ಪನ್ನ ಅಥವಾ ಯಾವುದೇ ಸೇವೆಯ ರೂಪದಲ್ಲಿ ನೋಡಬಹುದು. ಸೇವೆಗೆ ಸಂಬಂಧಿಸಿದ ಫಲಿತಾಂಶಗಳಿಗೆ ಸಾಮಾಜಿಕ ಪರಿಸ್ಥಿತಿಗಳು ಮತ್ತು ಪರಿಸರ ಯಾವಾಗಲೂ ಲಭ್ಯವಿರುತ್ತದೆ. ಆದರೆ ಏನನ್ನಾದರೂ ತಯಾರಿಸಬೇಕಾದಾಗ ಶಿಕ್ಷಕರು, ಮಕ್ಕಳು ಮನೆಯಿಂದ ಸಾಮಗ್ರಿಗಳನ್ನು ತರುವಂತೆ ಹೇಳುತ್ತಾರೆ ಅಥವಾ ಶಾಲೆಯಿಂದ ಹಣವನ್ನು ಬೇಡುತ್ತಾರೆ.
ವಸ್ತುಗಳನ್ನು ಕೊಳ್ಳಲಾಗದ ಕೆಲವು ವಿದ್ಯಾರ್ಥಿಗಳು ನಿಮ್ಮ ತರಗತಿಯಲ್ಲಿ ಇರಬಹುದು. ಅವರು ಶಾಲೆಗೆ ಹೋಗಲು ಹಿಂಜರಿಯಬಹುದು. ಕಾರ್ಯಶಿಕ್ಷಣಕ್ಕಾಗಿ ವಸ್ತುಗಳನ್ನು ತಯಾರಿಸಲು ಮಾರುಕಟ್ಟೆಯಿಂದ ವಸ್ತುಗಳನ್ನು ಕೊಳ್ಳುವುದು ಅವಶ್ಯಕವೇ ಎಂದು ನಿಮ್ಮನ್ನು ನೀವು ಕೇಳಿಕೊಳ್ಳಿ. ಸೀಮೆಸುಣ್ಣ, ಮೇಣದ ಬತ್ತಿಗಳನ್ನು ತಯಾರಿಸಲು ಅಚ್ಚುಗಳು, ಬಾಂದಿಸಿಗಾಗಿ ಪಾತ್ರೆಗಳು, ಮುಂತಾದವುಗಳನ್ನು ಶಾಲೆಯಿಂದ ಖರೀದಿಸಬಹುದು. ಒಂದು ಪಕ್ಷ ಶಾಲೆಗೆ ಒದಗಿಸಲು ಸಾಧ್ಯವಿಲ್ಲದಿದ್ದಲ್ಲಿ ಈ ಸಾಮಗ್ರಿಗಳನ್ನು ಸಮಾಜದ ಸಹಕಾರದಿಂದ ಲಭ್ಯವಾಗುವಂತೆ ಮಾಡಬಹುದು. ಇದು ಸಾಧ್ಯವಾಗಿದ್ದರೆ, ಬೇರೆ ಚಟುವಟಿಕೆಗಳ ಬಗ್ಗೆ ಯೋಚಿಸಬಾರದೆಂಬ ಕಡ್ಡಾಯವೇನೂ ಇಲ್ಲ. ನಿಮಗೆ ತಿಳಿದಿರುವಂತೆ ಕಾರ್ಯಶಿಕ್ಷಣದಲ್ಲಿ ಕೈಗೊಳ್ಳಬೇಕಾದ ಚಟುವಟಿಕೆಗಳು ಸಲಹಾ ರೂಪದಲ್ಲಿ ಪ್ರಸ್ತಾಪಿಸಲಾಗುತ್ತದೆಯೆ ಹೊರತು ಅವುಗಳನ್ನು ನಿರ್ದೇಶಿಸಲಾಗುವುದಿಲ್ಲ. ಆದ್ದರಿಂದ ನಿಮ್ಮ ನಿವೇಚನೆಯನ್ನು ಉಪಯೋಗಿಸಿ ಸಾಮಗ್ರಿಗಳು ಮತ್ತು ಸಲಕರಣೆಗಳು ಸುಲಭವಾಗಿ ಮಭ್ಯವಾಗುವಂತಹ ಚಟುವಟಿಕೆಗಳನ್ನು ಆಯ್ಕೆ ಮಾಡಿಕೊಳ್ಳಿ.

ನಿಮ್ಮ ಸುತ್ತಮುತ್ತ ವೈವಿಧ್ಯಮಯ ವಸ್ತುಗಳು ಲಭ್ಯವಿದೆಯೆಂದು ಯಾವಾಗಲಾದರೂ ಆಲೋಚಿಸಿದ್ದೀರಾ? ಆ ವಸ್ತುಗಳನ್ನು ಉಪಯೋಗಿಸಲು ಯೋಜನೆಯನ್ನು ನೀವು ಹಾಕಿಕೊಳ್ಳಬಹುದೆ! ನಿಮ್ಮ ಸುತ್ತಮುತ್ತ ಲಭ್ಯವಿರುವ ವಸ್ತುಗಳನ್ನು ಪಟ್ಟಿ ಮಾಡಿ. ಈ ಪಟ್ಟಿಯನ್ನು ಬೇರೆ ಪ್ರದೇಶಗಳನ್ನು ವಾಸಿಸುವ ನಿಮ್ಮ

ಸಹೋದ್ಯೋಗಿಗಳ ಪಟ್ಟಿಯೊಡನೆ ಹೋಲಿಸಿ. ಪ್ರತಿಯೊಂದು ಪಟ್ಟಿಯಲ್ಲಿ ಏನಾದರೊಂದು ಹೊಸತು ಇರುವುದನ್ನು ನೀವು ಕಾಣಬಹುದು./ ಸಂಗ್ರಹಿಸಿದ ಸಾಮಗ್ರಿಗಳನ್ನು ಮೂರು ಘಟನೆಗಳಾಗಿ ವಿಭಜಿಸಬಹುದು.

1. ನಿಸರ್ಗದಿಂದ ಸುಲಭವಾಗಿ ಸಿಗುವ ಸಾಮಾಗ್ರಿಗಳು.
2. ಅನಿಪಯುಕ್ತ ಸಾಮಗ್ರಿಗಳು.
3. ಕಡಿಮೆ ವೆಚ್ಚದ ಸಾಮಗ್ರಿಗಳು.

| ನಿಸರ್ಗನಿಂದ ಸುಲಭವಾಗಿ ಸಿಗುವ ಸಾಮಗ್ರಿಗಳು | ಅನುಪಯುಕ್ತ ಸಾಮಗ್ರಿಗಳು | ಕಡಿಮೆ ವೆಚ್ಚದ ಸಾಮಗ್ರಿಗಳು |
|---|---|---|
| ಗಿಡಗಳು, ಬಿದಿರು, ಎಲೆಗಳು, ಬೀಜಗಳು, ಹಣ್ಣುಗಳು, ಕಾಂಡಗಳು, ಮರದ ತೊಗಟೆ, ಸೆಣಬು, ತೆಂಗಿನ ಚಿಪ್ಪು, ತೆಂಗಿನ ನಾರು, ಮರಳು, ಮಣ್ಣು ಕಲ್ಲುಗಳು, ನೀರು, ಅಂಟು, ಬೇವು, ಅರಗು ಮುಂತಾದವು. | ಖಾಲಿ ಪೆಟ್ಟಿಗೆಗಳು, ಪುಕ್ಕಗಳು ಮರದ ಮತ್ತು ರಟ್ಟಿನ ಪೆಟ್ಟಿಗೆಗಳು, ಉಪಯೋಗಿಸಿದ ನೊರೆ, ಸ್ಪಾಂಜ್ಸ್, ಶೂ ಪೆಟ್ಟಿಗೆಗಳು, ಖಾಲಿ ಕಡ್ಡಿ ಪೆಟ್ಟಿಗೆಗಳು, ಬಿಂದಿಗಳು ಹಳೆ ಬ್ಲಾಂಕೆಟ್‌ಗಳು ಹಳೆ ಚಾಪೆಗಳು, ಹಳೆ ವೃತ್ತಪತ್ರಿಕೆಗಳು ಹಳೆ ಮ್ಯಾಗಜಿನ್‌ಗಳು, ಉಪಯೋಗಿಸದ ಪ್ಲಾಸ್ಟಿಕ್ ಚೀಲಗಳು, ಮೃದು ಪಾನೀಯಗಳ ಮುಚ್ಚಳಗಳು, ಉಪಯೋಗಿಸಿದ ಪ್ಲಾಸ್ಟಿಕ್ ಕಪ್‌ಗಳು, ತೆಳುವಾದ ವೈರ್‌ಗಳು, ದಪ್ಪ ವೈರ್‌ಗಳು, ಟೂತ್ ಪೇಸ್ಟ್‌ನ ಮುಚ್ಚಳಗಳು, ಅನುಪಯುಕ್ತ ಪೆನ್‌ಗಳು, ಹಳೆ ಬ್ಲೇಸ್‌ಗಳು, ಹಳೆ ಪೋಸ್ಟ್‌ಕಾರ್ಡ್‌ಗಳು, ಹಳೆ ಸ್ಟ್ಯಾಂಪ್‌ಗಳು, ಗ್ರೀಟಿಂಗ್ ಕಾರ್ಡ್‌ಗಳು, ಹಳೆ ಲಕೋಟೆಗಳು, ದಾರಗಳು, ಬಿರುಡೆ, ಗುಂಡಿಗಳು, ಸರ, ಸೈಕಲ್ ಟ್ಯೂಬ್, ಐಸ್‌ಕ್ರೀಮ್ ಚಮಚಗಳು, ಮೊಟ್ಟೆಯ ಸಿಪ್ಪೆಗಳು, ಹಳೆ ಪೊರಕೆಗಳು, ಉಪಯೋಗಿಸಿದ ಗುಂಡಿಗಳು. | ಸರಳವಾದ ಆದರೆ ಉಪಯುಕ್ತ ಸಲಕರಣೆಗಳು, ಕತ್ತರಿ, ಚಾಕು, ಸ್ಕೇಲ್, ಟೇಪ್, ಅಂಟು ಮೇಣದ ಬತ್ತಿ, ಬಟ್ಟೆ ಇಂಚುಪಟ್ಟಿ, ವಾಷರ್ ಮೊಳೆಗಳು, ಸ್ಕ್ರೂ ದಾರ, ಮರದ ಚೂರುಗಳು, ಬ್ರಷ್, ಬಣ್ಣಗಳು, ನೀಲಿ ವಿವಿಧ ಬಗೆಯ ಪೇಪರ್, ವೈರ್, ರಬ್ಬರ್ |

ದಯವಿಟ್ಟು ಈ ಪಟ್ಟಿಯನ್ನು ಜಾಗರೂಕತೆಯಿಂದ ವೀಕ್ಷಿಸಿ. ಎಲ್ಲಾ ಸಾಮಗ್ರಿಗಳು ನಮ್ಮ ಸುತ್ತಮುತ್ತ ಸಿಗುವುದನ್ನು ನೀವು ಕಾಣಬಹುದು. ಈ ಸಾಮಗ್ರಿಗಳಿಗೆ ನಾವು ಎಲ್ಲಿಯೂ ಹೋಗಬೇಕಾಗಿಲ್ಲ. ನಿಮ್ಮ ಪಟ್ಟಿ ಈ ಪಟ್ಟಿಗಿಂತ ದೊಡ್ಡದಾಗಿರಬಹುದು. ನೀವು ವಿದ್ಯಾರ್ಥಿಗಳಿಗೆ ಈ ರೀತಿಯ ಸಾಮಗ್ರಿಗಳನ್ನು ಸಂಗ್ರಹಿಸಿ ಶಾಲೆಗೆ ತರಲು ಹೇಳಿದರೆ, ಅವರು ಅತ್ಯಂತ ಉತ್ಸಾಹದಿಂದ ಈ ಕೆಲಸವನ್ನು ಮಾಡುತ್ತಾರೆ. ಈ ಎಲ್ಲಾ ಸಾಮಗ್ರಿಗಳ ಪಟ್ಟಿಯನ್ನು ತಯಾರಿಸಿ, ಯಾವ ವಸ್ತುವನ್ನು ಯಾವಾಗ ಮತ್ತು ಯಾರು ಸಂಗ್ರಹಿಸಿದರು ಎಂಬ ವಿವರವನ್ನು ಬರೆಯಿರಿ. ಸುಲಭವಾಗಿ ಸಿಗದಿರುವ ಏನನ್ನಾದರೂ ಒಂದು ಮಗು ತಂದರೆ, ಬೆಳಗಿನ ಸಭೆಯಲ್ಲಿ ಆ ಮಗುವನ್ನು ಪುರಸ್ಕರಿಸಿ. "ವಾರದ ಮೋಜಿನ ವಸ್ತು" ಎಂಬಂತಹ ಆಕರ್ಷಕ

ಘೋಷಣೆಯನ್ನು ನೀವು ಬರೆಯಬಹುದು. ಇದು ಮಕ್ಕಳು ವಿವಿಧ ವಸ್ತುಗಳನ್ನು ಸಂಗ್ರಹಿಸಲು ಉತ್ತೇಸುತ್ತದೆ. ಇದು ಮಕ್ಕಳಲ್ಲಿ ಸಕಾರಾತ್ಮಕ ಮನೋಭಾವವನ್ನು ಬೆಳೆಸುತ್ತದೆ.

1. ವೈಜ್ಞಾನಿಕ
2. ವಸ್ತುಗಳನ್ನು ವ್ಯವಸ್ಥಿತವಾಗಿ ಇರಿಸುವುದು.
3. ಸುತ್ತಲು ಪರಿಸರವನ್ನು ಗಮನಿಸುವ ಸಾಮರ್ಥ್ಯವನ್ನು ಬೆಳೆಸುವುದು.

ಈಗ ಈ ಸಂಗ್ರಹವನ್ನು ಸಮರ್ಪಕವಾಗಿ ಹೇಗೆ ಬಳಸಬೇಕೆಂದು ಯೋಚಿಸುವ ಅಗತ್ಯವಿದೆ.
ಯೋಜನೆಯ ನಂತರ ಆಯೋಜಿಸಲ್ಪಡುವ ಚಟುವಟಿಕೆಗಳು ಕಲಿಯುವ ಹಲವು ಆಕರ್ಷಕ ಅವಕಾಶಗಳನ್ನು ಮಕ್ಕಳಿಗೆ ನೀಡುತ್ತವೆ. ನಿರ್ಧರಿಸುವುದಕ್ಕಿಂಥ ಮುಂಚೆ ಸಂಗ್ರಹಿಸಿರುವ ಸಾಮಗ್ರಿಗಳಿಂದ ಯಾವ ವಸ್ತುಗಳನ್ನು ತಯಾರಿಸಲು ಅವರು ಇಚ್ಛಿಸುತ್ತಾರೆಂದು ವಿದ್ಯಾರ್ಥಿಗಳನ್ನು ಕೇಳಿ. ಸಾಮಗ್ರಿಯ ಮೂಲ ಮತ್ತು ಅದರ ಉಪಯೋಗಗಳನ್ನು ಚರ್ಚಿಸಿ. ಈ ಚರ್ಚೆಯ ಮೂಲಕ ಪರಿಸರ ಅಧ್ಯಯನ ಮತ್ತು ವಿಜ್ಞಾನದ ಬಗ್ಗೆ ಮಾತನಾಡಬಹುದು. ಅದೇ ಸಮಯದಲ್ಲಿ ಆ ಸಾಮಗ್ರಿಯ ಇತರೆ ಅನೇಕ ಉಪಯೋಗಗಳ ಬಗ್ಗೆಯೂ ಚರ್ಚಿಸಬಹುದು. ಅದೇ ಸಾಮಗ್ರಿಯಿಂದ ಹಲವು ವಸ್ತುಗಳನ್ನು ತಯಾರಿಸಬಹುದೆಂಬುದು ನಿಮಗೀಗಾಲೇ ತಿಳಿದಿದೆ. ವಿವಿಧ ಶಾಲೆಗಳಿಂದ ಸಂಗ್ರಹಿಸಿದ ಪಟ್ಟಿಯೊಂದನ್ನು ಈ ಕೆಳಗೆ ನೀಡಲಾಗಿದೆ. ಒಂದೇ ಸಾಮಗ್ರಿಯಿಂದ ಮಾಡಬಹುದಾದ ವೈವಿಧ್ಯಮಯ ವಸ್ತುಗಳನ್ನು ಇದು ತೋರಿಸುತ್ತದೆ.

## 13.6 ಸಾಮಗ್ರಿಗಳು ಮತ್ತು ಉಪಕರಣಗಳ ದಾಸ್ತಾನು ಮತ್ತು ನಿರ್ವಹಣೆ.

ವೈವಿಧ್ಯಮಯವಾದ ಹೆಚ್ಚುಬೆಲೆಬಾಳುವ ಉಪಯುಕ್ತ ಉಪಕರಣಗಳು ಪ್ರಯೋಗಾಲಯಗಳಲ್ಲಿ ವಿಶೇಷವಾಗಿ ಸರ್ಕಾರಿ ಶಾಲೆಗಳಲ್ಲಿರುತ್ತವೆಂಬುದು ನಿಮ್ಮ ಅನುಭವಕ್ಕೆ ಬಂದಿರಬಹುದು. ಉಪಯೋಗಿಸಬೇಕಾದ ಸಾಮಗ್ರಿಗಳ ಕೊರತೆಯೇನೂ ಇಲ್ಲ. ಆದರೂ ಮಕ್ಕಳು ಪ್ರಯೋಗಿಕ ಕೆಲಸವನ್ನು ಕೆಳಕಂಡ ಅಂಶಗಳ ಕಾರಣದಿಂದ ಮಾಡಲಾಗುವುದಿಲ್ಲ.

- ಉಪಕರಣಗಳು ಸರಿಯಾಗಿ ಕಾರ್ಯನಿರ್ವಹಿಸುವುದಿಲ್ಲ.
- ಸಾಮಗ್ರಿಯು ಕಳಪೆ ಗುಣಮಟ್ಟದ್ದು.
  ನೀವು ಯಾವಾಗಲಾದರೂ ಇದರ ಕಾರಣಗಳ ಬಗ್ಗೆ ಯೋಚಿಸಿದ್ದೀರಾ?
  ನೀವು ಸರಿಯಾದ ದಿಕ್ಕಿನಲ್ಲಿ ಹೋಚಿಸುತ್ತಿದ್ದೀರಿ. ಇದಕ್ಕೆ ಒಂದೇ ಕಾರಣವೇನೆಂದರೆ, ಉಪಕರಣಗಳನ್ನು ಸರಿಯಾಗಿ ನಿರ್ವಹಿಸುತ್ತಿಲ್ಲ ಅಥವಾ ಉಪಯೋಗಿಸುತ್ತಿಲ್ಲ. ಅವರ ಸಾಮಗ್ರಿಗಳು ಮತ್ತು ಉಪಕರಣಗಳು ನಮಗೆ ಸೇರಿದವೆಂದು ಯೋಚಿಸುವ ಅಗತ್ಯವಿದೆ. ಅವುಗಳ ಬಗ್ಗೆ ಎಚ್ಚರಿಕೆ ನಿರ್ವಹಣೆ ಮತ್ತು ಸಂರಕ್ಷಣೆಗೆ ನೀವು ನಮ್ಮ ಮನೆಗಳನ್ನು ನಿರ್ವಹಿಸಲು ಬೇಕಾಗುವ ಅದೇ ಭಾವನೆಗಳು ಮತ್ತು ಕೌಶಲ್ಯಗಳು ಬೇಕಾಗುತ್ತವೆ.

  ಪ್ರಪಥಮ ಕೆಲವೇನೆಂದರೆ, ಕಾರ್ಯ ಶಿಕ್ಷಣಕ್ಕಾಗಿ ಕೊಂಡುಕೊಂಡ ಉಪಕರಣಗಳ ಪಟ್ಟಿಯನ್ನು ತಯಾರಿಸುವುದು ಮತ್ತು ಅವುಗಳನ್ನು ದಾಸ್ತಾನು ಪುಸ್ತಕದಲ್ಲಿ ಕಾಲಂಗಳ

ಪ್ರಕಾರ ನಮೂದಿಸುವುದು. ನಿರ್ವಹಣೆಗೆ ಇಷ್ಟು ಮಾತ್ರ ಸಾಕಾಗುವುದಿಲ್ಲ. ಕೆಳಕಂಡ ಅಂಶಗಳನ್ನು ಸಹ ಗಮನದಲ್ಲಿರಿಸಿಕೊಳ್ಳಬೇಕೆ.

1. ಅಗತ್ಯಕ್ಕನುಗುಣವಾಗಿ ಸಾಮಗ್ರಿ ಮತ್ತು ಉಪಕರಣಗಳನ್ನು ಸಂಗ್ರಹಿಸುವುದನ್ನು ಸುಲಭಗೊಳಿಸಿ. ಸಂಗ್ರಹವನ್ನು ಸುಲಭಗೊಳಿಸುವುದೆಂದರೆ, ಸಾಮಗ್ರಿ ಮತ್ತು ಉಪಕರಣಗಳನ್ನು ಉಪಯೋಗಿಸಲು ಹಿಂಜರಿಕೆಯಿರಬಾರದು ಎಂದರ್ಥ. ಅನೇಕ ಶಾಲೆಗಳಲ್ಲಿ ಸಾಮಗ್ರಿಗಳು ಮುರಿದುಹೋಗುತ್ತವೆಂಬ ಕಾರಣಕ್ಕೆ ಅವುಗಳನ್ನು ಉಪಯೋಗಿಸುವುದಿಲ್ಲ. ಬಹುತೇಕ ಉಪಕರಣಗಳು ಉಪಯುಓಗಿಸಲ್ಪಡದೆ ಅನುಪಯುಕ್ತವಾಗಿಬಿಡುತ್ತಿವೆ. ನೀವು ಹಾಗೆ ಮಾಡಬಾರದೆಂದು ನಿರೀಕ್ಷಿಸಲಾಗುತ್ತದೆ.
2. ಅವುಗಳನ್ನು ವಿದ್ಯಾರ್ಥಿಗಳಿಗೆ ನೀಡಿದಾಗಲೆಲ್ಲ ಅವುಗಳನ್ನು ಎಚ್ಚರಿಕೆಯ ಬಳಕೆಯ ಪ್ರಮುಖ ಅಂಶಗಳನ್ನು ಅವರಿಗೆ ತಿಳಿಸಬೇಕು.
3. ಅದನ್ನು ಹತ್ತಿ ಅಥವಾ ಹಳೆ ಹತ್ತಿ ಬಟ್ಟೆ / ಚಿಂದಿಗಳಿಂದ ಒರೆಸಿದ ನಂತರ ಪ್ಯಾಕ್ ಮಾಡಿ ಇರಿಸಬೇಕು.
4. ಸಾಮಗ್ರಿ ಮತ್ತು ಉಪಕರಣಗಳನ್ನು ಸಂಗ್ರಹಿಸುವ ಸ್ಥಳದ ಬಗ್ಗೆ ಎಚ್ಚರ ವಹಿಸುವುದು ಮುಖ್ಯವಾದುದು. ಸಾಮಗ್ರಿ ಅಥವಾ ಉಪಕರಣಗಳನ್ನು ಇರಿಸುವ ಕಪಾಟು, ಪೆಟ್ಟಿಗೆ, ಮೇಜು ಮುಂತಾದ ಜಾಗಗಳು ಸ್ವಚ್ಛವಾಗಿವೆಯೇ ಅಥವಾ ಇಲ್ಲವೇ ಎಂಬುದು ನಿಮಗೆ ತಿಳಿದಿರಬೇಕು. ದೂಳನ್ನು ತೆಗೆಯುವುದು ಅವಶ್ಯಕ.
5. ಕೆಲವು ಕಾರಣಗಳಿಗಾಗಿ ಉಪಕರಣಗಳನ್ನು ಉಪಯೋಗಿಸದೇ ಇದ್ದಲ್ಲಿ ಅವುಗಳನ್ನು ಆಗಿಂದಾಗ್ಗೆ ಸ್ವಚ್ಛಗೊಳಿಸಬೇಕು. ಅವಶ್ಯಕತೆಗನುಗುಣವಾಗಿ ಅವುಗಳನ್ನು ಬಿಸಿಲಿನಲ್ಲಿರಿಸುವುದು ಅಗತ್ಯ.
6. ಕೆಲವು ಕಾರಣಗಳಿಗೆ ಎಣ್ಣೆ ಹಾಕಬೇಕಾಬಹುದು. ಆದ್ದರಿಂದ ಸರಿಯಾದ ಸಮಯದಲ್ಲಿ ಮತ್ತು ಸೂಕ್ತ ಪ್ರಮಾಣದಲ್ಲಿ ಎಣ್ಣೆ ಹಾಕುವುದನ್ನು ಖಚಿತಪಡಿಸಿಕೊಳ್ಳಿ.
7. ಸಾಮಾನ್ಯವಾಗಿ ನಾವು ಕಾಣುವುದೇನೆಂದರೆ, ಉಪಕರಣಗಳಲ್ಲಿ ಸಣ್ಣ ಪ್ರಮಾಣದ ಸಮಸ್ಯೆಯಿದ್ದರೂ ಅವುಗಳನ್ನು ಅನುಪಯುಕ್ತವೆಂದು ಘೋಷಿಸಿಬಿಡಲಾಗುತ್ತದೆ. ಬಹುಶಃ ಈ ಪ್ರವೃತ್ತಿಯಿಂದ ನೀವು ದೂರವಿರಲು ಇಚ್ಛಿಸುತ್ತೀರಿ. ಮೆಕ್ಯಾನಿಕ್‌ನೊಡನೆ ಸಮಾಲೋಚಿಸಿದ ನಂತರವಷ್ಟೆ ನೀವು ಅದನ್ನು ಪುನಃ ಉಪಯೋಗಿಸಲು ಅಥವಾ ಎಸೆದ ಬಿಡಲು ನಿರ್ಧರಿಸಬೇಕು.
8. ಸಾಮಾನ್ಯ ಮುರುಯುವಿಕೆಯನ್ನು ರಿಪೇರಿ ಮಾಡುವ ಕೌಶಲ್ಯವನ್ನು ನೀವು ಗಳಿಸಿಕೊಳ್ಳಬೇಕೆಂದು ನಿರೀಕ್ಷಿಸಲಾಗುತ್ತದೆ. ನಿಮ್ಮ ವಿದ್ಯಾರ್ಥಿಗಳಲ್ಲಿ ಅದೇ ಕೌಶಲ್ಯಗಳನ್ನು ಬೆಳೆಸಿ, ಅಗತ್ಯವಿದ್ದಾಗ ಉಪಕರಣಗಳನ್ನು ರಿಪೇರಿ ಮಾಡುವ ಸಾಮರ್ಥ್ಯ ಅವರಿಗೆ ಬರಬೇಕು.

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿ– 6

ಕಾರ್ಯ ಶಿಕ್ಷಣದಲ್ಲಿ ಸಾಮಗ್ರಿಗೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಗಳ ಮುಂದೆ (✔) ಗುರುತು ಹಾಕಿ.

1. ಕಾರ್ಯ ಶಿಕ್ಷಣದಡಿಯಲ್ಲಿ ಪ್ರಾಯೋಗಿಕ ಕೆಲಸವನ್ನು ಮಾಡಲು ಅನೇಕ ಉಪಕರಣಗಳು ಮತ್ತು ಸಾಮಗ್ರಿಗಳನ್ನು ಅತ್ಯಗತ್ಯವಾಗಿ ಖರೀದಿಸಬೇಕಾಗುತ್ತದೆ.
2. ಪರಿಸರದಲ್ಲಿ ಸಿಗುವ ಸಾಮಗ್ರಿಯನ್ನು ಪತ್ತೆಹಚ್ಚುವುದು ಮತ್ತು ಅದನ್ನು ತರಗತಿಯಲ್ಲಿ ಉಪಯೋಗಿಸುವುದು ಸೃಜನಶೀಲತೆಯ ಸಂಕೇತವಾಗಿದೆ.
3. ಶಾಲಾ ವ್ಯವಸ್ಥೆಯು ಸಾಮಗ್ರಿಗಳನ್ನು ಖರೀದಿಸದಿದ್ದರೆ ಪ್ರಾಯೋಗಿಕ ಕಾರ್ಯವನ್ನು ರದ್ದುಪಡಿಸಬೇಕು.
4. ಸಮರ್ಪಕ ನಿರ್ವಹಣೆಗಾಗಿ ಅವುಗಳನ್ನು ವಿದ್ಯಾರ್ಥಿಗಳಿಗೆ ನೀಡಬಾರದೆಂಬುದು ಮುಖ್ಯವಾದುದು.
5. ಅತಿ ಸಣ್ಣ ತಾಂತ್ರಿಕ ಸಮಸ್ಯೆಗಳಿಗೆ ಕೇವಲ ತಜ್ಞರೊಡನೆ ಮಾತ್ರ ಸಮಾಲೋಚಿಸಬೇಕು.

## 13.7 ಅಂತರಶಾಸ್ತ್ರೀಯ ವಿಷಯಗಳಲ್ಲಿ ಅನುಭವಗಳನ್ನು ನೀಡಲು ವಿಧಾನಗಳು:

**1964–66** ಆಯೋಗವು ಶಿಕ್ಷಣದ ಶೈಕ್ಷಣಿಕ ರೂಪದಲ್ಲಿ ಬೃಹತ್ ಬದಲಾವಣೆಯೂ ಅಗತ್ಯವನ್ನು ಮನಗಂಡಿತು. ಶಿಕ್ಷಣ ಪ್ರಕ್ರಿಯೆಯಲ್ಲಿ ಉತ್ಪಾದಕ ಕಾರ್ಯವನ್ನು ಶಿಕ್ಷಣದ ಮಾಧ್ಯಮವಾಗಿ ಕಡ್ಡಾಯವಾಗಿ ಸೇರಿಸಬೇಕೆಂದು ಗಾಂಧೀಜಿಯವರು ಹೇಳುತ್ತಿದ್ದರು. ಅವರ ಅಂಕಗಣಿತ, ವಿಜ್ಞಾನ, ಪರಿಸರ, ಇತಿಹಾಸ ಭೂಗೋಳಶಾಸ್ತ್ರ ಮತ್ತು ಪೌರನೀತಿ ಮುಂತಾದ ಎಲಲ್ ವಿಷಯಗಳನ್ನು ಮರಗೆಲಸ, ಗಾರೆ ಕೆಲಸ, ಕೃಷಿ, ಮುದ್ರಣ ಮತ್ತು ಇತರೆ ಉತ್ಪಾದಕ ಚುಟುವಟಿಕೆಗಳ ಮೂಲಕ ಕಲಿಸಬೇಕು. ದೂರದ ಸಾಮಾಜಿಕ ಬದಲಾವಣೆಗಳ ಶಿಕ್ಷಣ ಪ್ರಕ್ರಿಯೆಯೊಡನೆ ಕೆಲಸವನ್ನು ಜೋಡಿಸುವ ಕುರಿತು ಅವರ ಮಾತನಾಡಿದ್ದಾರೆ. ಅಂದರೆ ಯಾವುದೇ ವಿಷಯ, ಕಾರ್ಯಕ್ರಮ ಅಥವಾ ಘಟನೆಗೆ ಸಂಬಂಧಿಸಿದಂತೆ ಸೈದ್ಧಾಂತಿಕ ಜ್ಞಾನವನ್ನು ಪ್ರತ್ಯೇಕವಾಗಿ ಬೋಧಿಸುವುದಕ್ಕೆ ಬದಲಾಗಿ ಅದನ್ನು ಕೆಲಸದ ಮೂಲಕ ವಿವರಿಸಬೇಕು. ಈ ವಿಷಯವನ್ನು ಅರ್ಥಮಾಡಿಕೊಳ್ಳಲು ಗಾಂಧೀಜಿಯವರ ಕೆಳಕಂಡ ಹೇಳಿಕೆಯನ್ನು ಗಮನಿಸಿ.

"....... ನಮ್ಮ ಉದ್ದೇಶ ವೃತ್ತಿ ಮತ್ತು ಕರಕುಶಲದ ಜೊತೆಗೆ ವ್ಯಕ್ತಿಯ ಬೌದ್ಧಿಕ ಅಭಿವೃದ್ಧಿಯಾಗಬೇಕು. ಆದ್ದರಿಂದ ಕೇವಲ ವೃತ್ತಿಪರತೆ ಮತ್ತು ಕರಕುಶಲತೆಗಳನ್ನು ಬೋಧಿಸುವುದಕ್ಕೆ ಬದಲಾಗಿ ಸಂಪೂರ್ಣ ಶಿಕ್ಷಣವನ್ನು ಅದರ ಮಾಧ್ಯಮ ನೀಡಬೇಕು. ನೂಲುವ ಸೂಜಿಯ ಉದಾಹರಣೆಯನ್ನು ತೆಗೆದುಕೊಳ್ಳಿ. ನೂಲುವ ಸೂಜಿಯ ಮೂಲಕ ಅವರು ಏನನ್ನು ಕಲಿಯುತ್ತಾರೆ? ಅವರು ನೂಲಿನ ಇತಿಹಾಸ, ಲ್ಯಾಂಕಾಷ್ಟೆರ್ ಮತ್ತು ಇಡೀ ಬ್ರಿಟಿಷ್ ಸಾಮ್ರಾಜ್ಯದ ಬಗ್ಗೆ ತಿಳಿಯಬಹುದು. . . . . . ನೂಲುವ ಸೂಜಿ ಹೇಗೆ ಕೆಲಸ ಮಾಡುತ್ತದೆ? ಅದರ ಉಪಯೋಗವೇನು? ಯಾವ ಶಕ್ತಿ ಅದರಲ್ಲಿ ಅಂತರ್ಗತವಾಗಿದೆ. ಮಕ್ಕಳು ಮಾಡುವಾಗ ಈ ರೀತಿ ಕಲಿಯುತ್ತಾರೆ. ನೂಲುವ ಸೂಜಿಯ ಸುತ್ತ ಎಷ್ಟು ನೂಲನ್ನು ಸುತ್ತಲಾಗಿತ್ತು ಮತ್ತು ಎಷ್ಟು ಸಲ ನೂಲುವ ಸೂಜಿಯು ತಿರುಗಿತು ಎಂಬುದನ್ನು ಅವನು ಕೇಳುವಾಗ ಸ್ವಲ್ಪ ಗಣಿತಶಾಸ್ತ್ರವನ್ನು ಅವನು ಕಲಿಯುತ್ತಾನೆ. . . .. ಹೀಗೆ ಅವನು ಹಂತ ಹಂತವಾಗಿ ಗಣಿತಶಾಸ್ತ್ರದಲ್ಲಿ ಕೌಶಲ್ಯವನ್ನು

ಹೊಂದುತ್ತಾನೆ. ಇದರಲ್ಲಿ ಅತ್ಯಂತ ಆಕರ್ಷಣೀಯ ವಿಷಯವೇನೆಂದರೆ, ಅವನಿಗೆ ಯಾವುದೇ ಮಾನಸಿಕ ಒತ್ತಡವಿರುವುದಿಲ್ಲ".

ವಾರ್ಧಾದಲ್ಲಿ ಅಕ್ಟೋಬರ್ 1937 ರಲ್ಲಿ ನಡೆದ ಶಿಕ್ಷಣ ಸಮ್ಮೇಳನದಲ್ಲಿ ಗಾಂಧೀಜಿಯವರ ಉಪನ್ಯಾಸದ ಒಂದು ಭಾಗ.

ಶಿಕ್ಷಣ ಕಾರ್ಯಕ್ಕೆ ಸಂಬಂಧಿಸಿದ ಚಟುವಟಿಕೆಗಳನ್ನು ಪ್ರತ್ಯೇಕವಾಗಿ ಆಯೋಜಿಸುವುದಕ್ಕೆ ಬದಲಾಗಿ ಇತರೆ ವಿಷಯಗಳೊಡನೆ ಪರಸ್ಪರ ಸಂಬಂಧವೇರ್ಪಡಿಸುವ ಮೂಲಕ ಆಯೋಜಿಸಬೇಕು. ಮತ್ತು ಸಂಯೋಜಿಸಬೇಕೆಂಬುದು ಗಾಂಧೀಜಿಯವರ ಹೇಳಿಕೆಯ ಮೂಲಕ ನಿಮಗೆ ಸ್ಪಷ್ಟವಾಗಿರಬಹುದು. ಕಾರ್ಯಶಿಕ್ಷಣಕ್ಕೆ ಸಂಬಂಧಿಸಿದ ಚಟುವಟಿಕೆಗಳನ್ನು ವಿವಿಧ ವಿಷಯಗಳೊಡನೆ ಸಹಯೋಗಿಸುವುದಕ್ಕೆ ಸಂಬಂಧಿಸಿದಂತೆ ಕೆಳಕಂಡ ಸಲಹೆಗಳನ್ನು ನೀಡಲಾಗಿದೆ.

### 13.7.1 ಭಾಷೆ:–

ಭಾಷೆಗೆ ಸಂಬಂಧಿಸಿದಂತೆ ಕೆಳಕಂಡ ಅಂಶಗಳನ್ನು ಪರಿಗಣಿಸುವುದು ಅವಶ್ಯಕ.

- ಪೂರ್ಣಗೊಂಡ ಕೆಲಸದ ಬಗ್ಗೆ ಲಿಖಿತ ಅಭಿವ್ಯಕ್ತಿ.
- ಸಮರ್ಪಕ ಪದಗಳು ಮತ್ತು ಸರಳ ವಾಕ್ಯಗಳ ಉಪಯೋಗ .
- ಆಲೋಚನೆಗಳನ್ನು ವ್ಯವಸ್ಥಿತ ರೀತಿಯಲ್ಲಿ ವ್ಯಕ್ತಪಡಿಸುವುದು.
- ಸಂವಾಹನನ್ನಾಗಿ ಆರ್ಕಷಣೀಯ ಮತ್ತು ಅರ್ಥಪೂರ್ಣ ಶೀರ್ಷಿಕೆಯನ್ನು ಸೂಚಿಸುವುದು.
- ಚಿಕ್ಕ ಮತ್ತು ಸರಳವಾಕ್ಯಗಳಲ್ಲಿ ವರದಿಯನ್ನು ಸಿದ್ಧಪಡಿಸುವುದು.
- ಅನುಭವಗಳನ್ನು ಸ್ಪಷ್ಟವಾಗ ಬರೆಯುವುದು.
- ಶಬ್ಧಕೋಶದ ಉತ್ತಮಪಡಿಸಿಕೊಳ್ಳುವುದು.
- ನುಡಿಗಟ್ಟುಗಳನ್ನು ಬಳಸುವುದು.
- ಸಂದರ್ಭಕ್ಕೆ ತಕ್ಕಂತೆ ವ್ಯಾಕರಣ ಬಳಕೆ/ ವ್ಯಾಕರಣದ ಬಳಕೆಯನ್ನು ಸಾಂದರ್ಭೀಕರಣಗೊಳಿಸುವುದು.

### 13.7.2 ಗಣಿತ ಶಾಸ್ತ್ರ

ಕಾರ್ಯ ಶಿಕ್ಷಣಕ್ಕೆ ಸಂಬಂಧಿಸಿದ ಚಟುವಟಿಕೆಗಳು ಗಣಿತಶಾಸ್ತ್ರದ ಜ್ಞಾನವನ್ನು ಪಡೆದುಕೊಳ್ಳಲು ನೆರವಾಗುತ್ತವೆ.

1. ಬ್ಲಾಕ್ ಬೋರ್ಡಿಗೆ ಬಣ್ಣ ಬಳಿಯುವಾಗ ಕೆಳಕಂಡವುಗಳಿಗೆ ಗಮನ ನೀಡಿ:
    - ವಿಸ್ತೀರ್ಣ, ಉದ್ದ ಮತ್ತು ಅಗಲಗಳಿಗೆ ತಕ್ಕಂತೆ ವೆಚ್ಚ.
    - ಸಮಯದ ಅವಶ್ಯಕತೆಯನ್ನು ಅಂದಾಜಿಸುವುದು.

- ಮಾನವ ಶಕ್ತಿ / ಶ್ರಮದ ವೆಚ್ಚ.

2. ವಿವಿಧ ಜ್ಯಾಮಿತಿ ಆಕೃತಿಗಳ ಜ್ಞಾನ
3. ಒಂದು ವಸ್ತುವನ್ನು ತಯಾರಿಸಿದ ನಂತರ ಅದರ ಬೆಲೆಯನ್ನು ಲೆಕ್ಕಾ ಹಾಕುವುದು.
4. ಅಳತೆ ಮಾಡುವ ಕೌಶಲ್ಯ
5. ಸಂಖ್ಯೆಗಳ ಬಗ್ಗೆ ಜ್ಞಾನ ಮತ್ತು ಅವುಗಳನ್ನು ಅರ್ಥಮಾಡಿಕೊಳ್ಳುವುದು.
6. ಮಾಪನದ ಘಟಕಗಳನ್ನು ಅರ್ಥಮಾಡಿಕೊಳ್ಳುವುದು ಮತ್ತು ಒಂದರಿಂದ ಇನ್ನೊಂದಕ್ಕೆ ಪರಿವರ್ತಿಸುವುದು.
7. ಬಡ್ಡಿ, ಅಸಲು ಮತ್ತಿ ಮುಂತಾದ ಪರಿಕಲ್ಪನೆಗಳ ಪರಿಚಯ.

13.7.3. ಪರಿಸರ ಅಧ್ಯಯನ, ಸಮಾಜ ವಿಜ್ಞಾನಗಳು ಮತ್ತು ಇತಿಹಾಸ ಮುಂತಾದವು.

ಪ್ರತಿಯೊಂದು ಕೆಲಸ ಮತ್ತು ವಿಧಾನ ಭವ್ಯ ಇತಿಹಾಸವನ್ನು ಹೊಂದಿದೆ. ಆ ಕೆಲಸದ ಐತಿಹಾಸಿಕ ಮಹತ್ವದ ಬಗ್ಗೆ ಜ್ಞಾನವನ್ನೂ ಗಳಿಸಿಕೊಳ್ಳುವುದು ಪುಸ್ತಕಗಳಿಂದ ಪಡೆಯುವ ಜ್ಞಾನಕ್ಕಿಂತ ಹೆಚ್ಚು ಪ್ರಮುಖ ಮತ್ತು ಅರ್ಥಪೂರ್ಣವಾದದು. ಕಾರ್ಯ ಶಿಕ್ಷಣದಡಿ ಕೈಗೊಂಡ ಚಟುವಟಿಕೆಗಳು ಸಾಮಾಜಿಕ, ಸಾಂಸ್ಕೃತಿಕ ಮತ್ತು ಐತಿಹಾಸಿಕ ವಿಷಯಗಳ ಬಗ್ಗೆ ಸೂಕ್ಷ್ಮ ಮತ್ತು ಆಳವಾದ ತಿಳುವಳಿಕೆಯನ್ನು ಬೆಳೆಸುತ್ತದೆ. ಉದಾಹರಣೆಗೆ:

- ಕೃಷಿ ಚಟುವಟಿಕೆಗಳಲ್ಲಿ ಕಾರ್ಯನಿರತನಾಗಿರುವ ಜನರ ಜೀವನಶೈಲಿ.
- ಅಗತ್ಯ ಮತ್ತು ಪೂರೈಕೆಗಳ ನಡುವಿನ ಸಂಬಂಧ.
- ಮನುಷ್ಯನ ಜೀವನ ಮತ್ತು ಪ್ರಾಣಿಯೊಡನೆ ಸಂಬಂಧ.
- ಕೈಗಾರಿಕೆ ಮತ್ತು ಪರಿಸರ.
- ವಸ್ತುಗಳನ್ನು ನಿರ್ಮಿಸುವಲ್ಲಿ ಶ್ರಮದ ಮಹತ್ವ.
- ದರಗಳು/ಬೆಲೆಗಳನ್ನು ನಿರ್ಧರಿಸುವುದು.
- ಜಾತಿ ಮತ್ತು ಧರ್ಮ.

  ಕೆಲಸ ಮಾಡುವಾಗ ವೈಜ್ಞಾನಿಕ ತತ್ವಗಳನ್ನು ಅರ್ಥಮಾಡಿಕೊಳ್ಳಬಹುದು. ಉದಾಹರಣೆಗೆ ರಾಟೆಯು ಹೇಗೆ ಕೆಲಸ ಮಾಡುತ್ತದೆ> ಸನ್ನೆ ಮತ್ತು ಆಧಾರಗಳ ತತ್ವಗಳೇನು> ನೆನೆಸಿದ ನಂತರ ಕಾಳುಗಳನ್ನು ಬೇಯಿಸುವುದರಿಂದಾಗುವ ಅನುಕೂಲಗಳೇನು> ಸಮತೂಕದ ಆಹಾರದ ಬಗೆಗೆ ಭೂತಕಾಲದ ಮೌಲ್ಯಗಳು ಎಂದರೇನು? ಮುಂತಾದವು.

  ಇಲ್ಲಿ ಕೆಲವು ಅಂಶಗಳನ್ನಷ್ಟೆ ಸೂಚಿಸಲಾಗಿದೆ. ಗುಂಪಿನಲ್ಲಿ ಕಾರ್ಯ ಶಿಕ್ಷಣದ ಮೂಲಕ ಅರ್ಥಮಾಡಿಕೊಳ್ಳಬಹುದಾದ ಇಂತಹ ಅನೇಕ ತತ್ವಗಳ ಪಟ್ಟಿಯನ್ನು ನೀವು ತಯಾರಿಸಬಹುದು.

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿ – 7

1. ಪಠ್ಯಕ್ರಮದಲ್ಲಿನ ಸುತ್ತುವ ಕೋಲಿನ ಕಾರ್ಯನಿರ್ವಹಣೆಯ ಮೂಲಕ ಯಾವ ಅಂಶಗಳನ್ನು
ಅರ್ಥಮಾಡಿಕೊಳ್ಳುವುದನ್ನು ಅಭಿವೃದ್ಧಿಪಡಿಸಬಹುದು?

---

---

2. ಕಾರ್ಯ ಶಿಕ್ಷಣದ ಯಾವುದೇ ಚಟುವಟಿಕೆಯ ಮೂಲಕ ಭಾಷೆಗೆ ಸಂಬಂಧಿಸಿದಂತೆ ಕಲಿಯಬಹುದಾದ ಯಾವುದಾದರೂ ನಾಲ್ಕು ಕೌಶಲ್ಯಗಳನ್ನ ಸೂಚಿಸಿ.

---

---

## 13.9 ಕಾರ್ಯ ಶಿಕ್ಷಣಕ್ಕೆ ಸಂಬಂಧಿಸಿದ ಬೋಧನೆ-ಕಲಿಕೆ ವಿಧಾನಗಳು:

ಕಾರ್ಯ ಶಿಕ್ಷಣಕ್ಕಾಗಿ ಚಟುವಟಿಕೆಗಳನ್ನು ಆಯೋಜಿಸಲು ಇರುವ ವಿಧಾನಗಳಾವುವು? ಅಥವಾ ಯಾವ ವಿಧಾನ ಇರಬೇಕೆಂಬುದು ಹಲವು ಅಂಶಗಳಿಂದ ನಿರ್ಧರಿಸಲ್ಪಡುತ್ತದೆ. ಈ ನಿರ್ಧಾರಕ ಅಂಶಗಳಲ್ಲಿ ಕೆಳಗಿನ ಅಂಶಗಳನನು ಸೇರಿಸಲಾಗುತ್ತದೆ.

- ಕಾರ್ಯಾನುಭವದ ರೂಪ ಮತ್ತು ಉದ್ದೇಶಗಳ ಬಗೆಗೆ ನಿಮ್ಮ ಪರಿಕಲ್ಪನೆಗಳೇನು?
- ನಮ್ಮ ಅಭಿಪ್ರಾಯದಲ್ಲಿ ಮಕ್ಕಳು ಹೇಗೆ ಪಡೆದುಕೊಳ್ಳುತ್ತಾರೆ ಹೇಗೆ ಕಲಿಯುತ್ತಾರೆ ಮತ್ತು ನಡತೆಯ ಮಾರ್ಗಗಳನ್ನು ಹೇಗೆ ಅಭಿವೃದ್ಧಿ ಪಡಿಸಿಕೊಳ್ಳುತ್ತಾರೆ.
- ಪ್ರತಿಯೊಂದು ಮಗುವಿಗೆ ಗರಿಷ್ಠ ವೈಯಕ್ತಿಕತೆಯನ್ನು ಅನುಭವಿಸಲು ಅಥವಾ ಕೆಲಸವನ್ನು ಪೂರೈಸಲು ಅವಕಾಶಗಳನ್ನು ಒದಗಿಸುವ ಕುರಿತ ನಮ್ಮ ಮೌಲ್ಯಗಳೇನು.
- ಮೇಲ್ಕಂಡ ಪ್ರಶ್ನೆಗಳಿಗೆ ಉತ್ತರಗಳು ಕಾರ್ಯ ಶಿಕ್ಷಣದ ರೂಪದ ವಿಧಾನಗಳ್ನು ನಿರ್ಧರಿಸುವಲ್ಲಿ ನಿಮಗೆ ಆಧಾರವನ್ನು ಒದಗಿಸುತ್ತವೆ. ಕಾರ್ಯ ಶಿಕ್ಷಣದಡಿಯಲ್ಲಿ ಮಾಡುವ ಮೂಲಕ ಕಲಿಯುವ ಅವಕಾಶವನ್ನು ಮಕ್ಕಳಿಗೆ ನೀಡಲಾಗುತ್ತದೆಂಬುದು ನಿಮಗೆ ಚೆನ್ನಾಗಿ ತಿಳಿದಿದೆ. ಕೆಲಸವನ್ನು ಅವರೇ ಮಾಉವವರೆಗೆ ಆ ಕೆಲಸಕ್ಕೆ ಸಂಬಂಧಿಸಿದ ಅನುಭವವನ್ನು ಅವರ ಗಳಿಸಲಾರರು. ಹೀಗಾಗಿ ಕಾರ್ಯಾನುಭವ ಆಧಾರಿತ ವಿಧಾನಗಳಲ್ಲಿ ವಿದ್ಯಾರ್ಥಿಗಳ ಸಕ್ರಿಯ ಭಾಗವಹಿಸುವಿಕೆಗೆ ಸರಳ ಅವಕಾಶಗಳಿವೆ. ಕೆಲವು ಕಾರ್ಯಾನುಭವ ಆಧಾರಿತ ವಿಧಾನಗಳು ಈ ಕೆಳಕಂಡಂತಿವೆ.

### 13.8.1 ವೀಕ್ಷಣಾ ವಿಧಾನಗಳು

ಪ್ರತಿಯೊಂದು ಮಗುವಿಗೂ ಅನ್ವೇಷಿಸುವ ಪ್ರವೃತ್ತಿ ಇರುತ್ತದೆಂಬುದು ನಮ್ಮೆಲ್ಲರಿಗೂ ತಿಳಿದಿದೆ. ಸ್ವಾಭಾವಿಕವಾಗಿಯೆ ಅವರು ಕುತೂಹಲಗಳಾಗಿರುತ್ತಾರೆ. ತಮ್ಮ ಸುತ್ತಮುತ್ತ ನಡೆಯುವ ವಿದ್ಯಮಾನಗಳ ಕುರಿತು ಅವರು ಯಾವಾಗಲೂ ಕುತೂಹಲಭರಿತರಾಗಿತ್ತಾರೆ. ತಮಗೆ ಎಲ್ಲಾ ತಿಳಿದಿರಬೇಕೆಂದು ಅವರು ಭಾವಿಸುತ್ತಾರೆ. ಕಾರ್ಯಾನುಭವದ ವೀಕ್ಷಣಾ ವಿಧಾನವು ಈ ರೀತಿಯ

ಅವರ ಜಿಜ್ಞಾಸೆಯ ಪ್ರವೃತ್ತಿಯ ಮೇಲೆ ಆಧಾರಿತವಾಗಿದೆ. ಈ ವಿಧಾನವನ್ನು ನಾವು ಎರಡು ರೀತಿಯಲ್ಲಿ ಬಳಸಬಹುದು.

- ವಿದ್ಯಾರ್ಥಿಗಳನ್ನು ಯಾವುದೇ ಘಟನೆ, ವಸ್ತು ಅಥವಾ ಸಾಮಾಜಿಕ –ಸಾಂಸ್ಕøತಿಕ ಕಾರ್ಯಕ್ರಮಗಳನ್ನು ವೀಕ್ಷಿಸುವಂತೆ ಹೇಳುವುದು ಮತ್ತು ಅವರ ಜ್ಞಾನ ಮತ್ತು ತಿಳುವಳಿಕೆಯನ್ನು ಬೆಳೆಸುವುದು.
- ಸಾಮಾಜಿಕ ಪರಿಸರ ಮತ್ತು ಕೆಲಸದ ಸ್ಥಳಗಳಲ್ಲಿನ ಆರ್ಥಿಕ ಚಟುವಟಿಕೆಗಳನ್ನು ವೀಕ್ಷಿಸುವ ಮೂಲಕ ಅವರು ಅನುಭವ ಗಳಿಸಬಹುದು.
  ಸಾಮಾಜಿಕ– ಸಾಂಸ್ಕೃತಿಕ ಘಟನೆಗಳಿಗೆ ಸಂಬಂಧಿಸಿದಂತೆ ಮಕ್ಕಳಿಗೆ ಯಾವುದೇ ಸೂಚನೆಗಳನ್ನು ನೀಡಲಾಗುವುದಿಲ್ಲ. ಆದರೆ ವೀಕ್ಷಿಸಲಾದ ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳನ್ನು ತರಗತಿಯಲ್ಲಿ ವಿವರಿಸಲಾಗುವುದು. ಆನಂತರ ಮಕ್ಕಳು ಅವರ ವಿಮರ್ಶೆಗಳನ್ನು ನೀಡುತ್ತಾರೆ. ಕಾರ್ಯ ಶಿಕ್ಷಣದಲ್ಲಿ ಯಾವ ರೀತಿಯ ಕಾರ್ಯಕ್ರಮಗಳ ವೀಕ್ಷಣೆಗೆ ಅವಕಾಶ ಕಲ್ಪಿಸಬಹುದು? ಈ ಪ್ರಶ್ನೆಯು ಅತಾರ್ಕಿಕವಾದ ತಿಳುವಳಿಕೆಯನ್ನು ಸೂಚಿಸುತ್ತದೆ. ಏಕೆಂದರೆ, ಜೀವನಕ್ಕೆ ಸಂಬಂಧಿಸಿದ ಪ್ರತಿಯೊಂದು ಘಟನೆಯಲ್ಲಿ ಕಾರ್ಯ ಶಿಕ್ಷಣದ ಅಧ್ಯಯನದ ವಿಷಯವಾಗಿರುತ್ತದೆ.

### 13.8.2 ಪ್ರದರ್ಶನ ವಿಧಾನ:

ಮಕ್ಕಳು ತಮ್ಮ ನಡವಳಿಕೆಯನ್ನು ಹೇಗೆ ಕಲಿಯುತ್ತಾರೆ? ಈ ಪ್ರಶ್ನೆಗೆ ಸರಳವಾದ ಉತ್ತರವಿದೆ– ಅವರ ವೀಕ್ಷಣಾ ಸಾಮರ್ಥ್ಯದಿಂದ ಹಿರಿಯರನ್ನು ಗಮನಿಸುವ ಮೂಲಕ ಅಥವಾ ಹಿರಿಯರಿಂದ ಕಲಿತು ಅದನ್ನೇ ಅವರು ಮಾಡಲು ಪ್ರಾರಂಭಿಸುತ್ತಾರೆ. ಹಿರಿಯರಷ್ಟೇ ಏಕೆ, ಅವರ ಜೊತೆಗಾರರು ಮಾಡುವ ಯಾವುದನ್ನೇ ಗಮನಿಸಿದರೂ ಅದನ್ನೇ ತಮ್ಮ ದಿನಚರಿಯಲ್ಲಿ ಅಳವಡಿಸಿಕೊಳ್ಳಲು ಅವರು ಪ್ರಯತ್ನಿಸುತ್ತಾರೆ.

ಮೇಲ್ಕಂಡ ಅಂಶಗಳಿಗೆ ಗಮನಕೊಡಿ, “ಅವರು ಯಾವುದನ್ನೇ ಗಮನಿಸಿದರೂ” ಇದರರ್ಥವೇನೆಂದರೆ, ಏನನ್ನೇ ಪ್ರದರ್ಶಿಸಿದರೂ ಅವರು ಅದನ್ನು ಕಲಿಯಲು ಪ್ರಯತ್ನಿಸುತ್ತಾರೆ.

ಕಾರ್ಯ ಶಿಕ್ಷಣದ ಈ ವಿಧಾನವು ಸಾಮಾನ್ಯದಿಂದ ನಿರ್ದಿಷ್ಟದ ಕಡೆಗೆ ಮುಂದುವರಿಯುತ್ತದೆ. ಇದರರ್ಥವೇನೆಂದರೆ, ಒಂದು ನಿರ್ದಿಷ್ಟ ಚಟುವಟಿಕೆಯ ವಿಧಾನವನ್ನು ಶಿಕ್ಷಣಾರ್ಥಿಗಳ ಮುಂದೆ ಪ್ರದರ್ಶಿಸಲಾಗುತ್ತದೆ. ಚಟುವಟಿಕೆಯ ಪ್ರದರ್ಶನದ ಜೊತೆಗೆ ಆ ಚಟುವಟಿಕೆಗೆ ಸಂಬಂಧಿಸಿದ ನಿಯಮಗಳ ಸಮಂಜಸತೆಯನ್ನು ಸಹ ಉದಾಹರಣೆಗಳ ಮೂಲಕ ಸಾಬೀತು ಮಾಡಲಾಗುತ್ತದೆ. ಈ ವಿಧಾನವನ್ನು ಅನುಸರಿಸಲು ದಯವಿಟ್ಟು ಕೆಳಕಂಡ ಹಂತಗಳನ್ನು ಪಾಲಿಸಿ.

- ನಿಯಮಗಳೊಡನೆ ವಿಧಾನದ ಪ್ರದರ್ಶನ – ಅಪೇಕ್ಷಿತ ನಿಯಮಗಳನ್ನು ತಾರ್ಕಿಕವಾಗಿ ವಿಶ್ಲೇಷಿಸಿಸಲಾಗುತ್ತದೆ. ಮತ್ತು ಅವುಗಳನ್ನು ವಿದ್ಯಾರ್ಥಿಗಳ ಮಾನಸಿಕ ಸಾಮರ್ಥ್ಯಕ್ಕನುಗುಣವಾಗಿ ಪ್ರಸ್ತುತಪಡಿಸಲಾಗುತ್ತದೆ.

- ವಿಧಾನಕ್ಕೆ ಸಂಬಂಧಿಸಿದ ನಿಯಮಗಳ ನಡುವೆ ಸಂಬಂಧವನ್ನು ಸ್ಥಾಪಿಸುವುದು– ನಿಯಮಗಳನ್ನು ಪ್ರಸ್ತುತಪಡಿಸಿದ ನಂತರ ಅವುಗಳ ನಡುವಿನ ತಾರ್ಕಿಕ ಸಂಬಂಧವನ್ನು ಸ್ಥಾಪಿಸಲಾಗುತ್ತದೆ. ಇದನ್ನು ವಿಶ್ಲೇಷಿಸುವ ಪ್ರಕ್ರಿಯೆಯೆಂದು ಕರೆಯಬಹುದು? ಇದನ್ನು ಯಾಕೆ ಮಾಡಲಾಗುತ್ತದೆ? ಮತ್ತು ಈ ಕೆಳಕಂಡ ನಿಯಮಗಳನ್ನು ಅನ್ವಯಿಸಬಹುದೆ?
- ಉದಾಹರಣೆಗಳ ಮೂಲಕ ಸಮರ್ಥನೆ – ಈ ಹಂತವು ತಾರ್ಕಿಕ ವಿಧಾನಕ್ಕೆ ಅವಶ್ಯಕವಾದುದು. ಕುಂಡದಲ್ಲಿ ಗಿಡನೆಡುವ ಪ್ರಕ್ರಿಯೆಯನ್ನು ನೀವು ಪ್ರದರ್ಶಿಸುತ್ತಿದ್ದೀರಿ. ಮಣ್ಣನ್ನು ಹೇಗೆ ಧೂಳು ಮಾಡಲಾಗುತ್ತದೆ, ಅದು ಯಾಕೆ ಅವಶ್ಯಕ ಎಂಬುದರ ಬಗ್ಗೆ ಪ್ರಶ್ನೆಗಳನ್ನು ಕೇಳುತ್ತಿದ್ದೀರಿ. ಅದೇ ಸಮಯದಲ್ಲಿ ನಿಮ್ಮ ಅನುಭವದ ಆಧಾರದ ಮೇಲೆ ಅವರಿಗೆ ಉದಾಹರಣೆಗಳನ್ನು ನೀಡುತ್ತಿದ್ದೀರಿ.

### 13.8.3 ಪ್ರಾಯೋಗಿಕ ವಿಧಾನ

ಈ ವಿಧಾನದಲ್ಲಿ ಶಿಕ್ಷಣಾರ್ಥಿಗಳು ಒಂದು ನಿರ್ದಿಷ್ಟ ಗುರಿಯನ್ನು ಸಾಧಿಸುವ ಸಲುವಾಗಿ ಪ್ರಾಯೋಗಿಕವಾಗಿ ಕಾರ್ಯನಿರ್ವಹಿಸುತ್ತಾರೆ. ಈ ವಿಧಾನದಲ್ಲಿ ಹೊಸ ಸನ್ನಿವೇಶಗಳಲ್ಲಿ ಮಾಡುವುದರ ಮೂಲಕ ಕಲಿಯುವ ಮತ್ತು ಈ ಹಿಂದಿನ ಅನುಭವಗಳ ಆಧಾರದಲ್ಲಿ ಕಲಿಯುವುದಕ್ಕೆ ಒತ್ತು ನೀಡಲಾಗುತ್ತದೆ. ಅಭ್ಯಾಸ ಮಾಡುವಾಗ ಎಲ್ಲ ಇಂದ್ರಿಯಗಳು ಸಕ್ರಿಯವಾಗಿರುತ್ತವೆ. ವಿದ್ಯಾರ್ಥಿಗಳು ಸಂಶೋಧಕರಂತೆ ಕೆಲಸ ಮಾಡುತ್ತಾರೆ. ಏಕೆಂದರೆ, ಪ್ರಾಯೋಗಿಕ ವಿಧಾನದಲ್ಲಿ ಮಾಡುವುದರಿಂದ ಕಲಿಯುವುದು ತುಂಬಾ ಮುಖ್ಯವಾದುದು, ಈ ವಿಧಾನದ ಕೆಲವು ಮೂಲಭೂತ ತತ್ವಗಳು ಈ ಕೆಳಕಂಡಂತಿವೆ:

- ಮಾಡುವುದರಿಂದ ಕಲಿಯುವಿಕೆ: ಇಡೀ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಗಳು ಪ್ರಮುಖ ಪಾತ್ರ ವಹಿಸುತ್ತಾರೆ. ಅವರಿಗೆ ಮಾಹಿತಿಯನ್ನು ನೀಡಲಾಗುತ್ತದೆ. ಇದು ಅವರಲ್ಲಿ ಆಸಕ್ತಿಯನ್ನು ಸೃಷ್ಟಿಸಿ, ಅವರ ಕೆಲಸದಲ್ಲಿ ತೊಡಗಿಕೊಳ್ಳುವಂತೆ ಉತ್ತೇಜಿಸುತ್ತದೆ. ಉಳಿದುದನ್ನು ಅವರು ತಮ್ಮ ಸ್ವಂತ ಪ್ರಯತ್ನದಿಂದ ಕಂಡುಕೊಳ್ಳಬೇಕಾಗುತ್ತದೆ.
- ವಿದ್ಯಾರ್ಥಿಗಳ ಸಕ್ರಿಯತೆ: ವಿದ್ಯಾರ್ಥಿಗಳು ಮಾಡುವ ಮೂಲಕ ಕಲಿಯುತ್ತಿರುವುದರಿಂದ, ಸ್ವಾಭಾವಿಕವಾಗಿಯೇ ಅವರ ಸಕ್ರಿಯತೆ ಕಂಡುಬರುತ್ತದೆ. ಅವರು ನಿಷ್ಕ್ರಿಯವಾಗಿದ್ದಲ್ಲಿ ಅವರಿಂದ ಯಾವುದೇ ಹೊಸ ಸಿದ್ಧಾಂತಗಳನ್ನು ಪ್ರತಿಪಾದಿಸುವುದಾಗಲಿ, ಹೊಸ ಅನ್ವೇಷಣೆಯಾಗಲಿ, ಸಮಸ್ಯೆಯ ಪರಿಹಾರವಾಗಲಿ ಸಾಧ್ಯವಾಗುವುದಿಲ್ಲ.
- ಮಾನಸಿಕವಾದುದು: ಈ ವಿಧಾನದಲ್ಲಿ ವಿದ್ಯಾರ್ಥಿಗಳು ಅವರ ಆಸಕ್ತಿ ಕುತೂಹಲ ಅಗತ್ಯಗಳು, ಉತ್ಸಾಹ ಮತ್ತು ಅವರ ಸ್ವಾಭಾವಿಕ ಕೆಲಸ ಮಾಡುವ ಶೈಲಿಗನುಗುಣವಾಗಿ ಕೆಲಸ ಮಾಡುತ್ತಾರೆ. ಅವರ ಹಿಂದಿನ ಅನುಭವಗಳಿಂದ ಅವರು ಅನುಕೂಲ ಪಡೆಯುತ್ತಾರೆ.

- ವೈಜ್ಞಾನಿಕವಾದುದು: ಏಕೆ ಎಂಬ ಪ್ರಶ್ನೆಯನ್ನು ಪ್ರತಿ ಹಂತದಲ್ಲಿಯೂ ಕೇಳುವ ಮೂಲಕ ವಿದ್ಯಾರ್ಥಿಗಳು ಉತ್ತರವನ್ನು ಕಂಡುಕೊಳ್ಳುತ್ತಾರೆ. ಅವರ ವ್ಯವಸ್ಥಿತವಾಗಿ ಕಾರ್ಯನಿರ್ವಹಿಸುವುದರಿಂದ ವೈಜ್ಞಾನಿಕ ಸಿದ್ಧತೆಯ ಕೌಶಲ್ಯವನ್ನು ಬೆಳೆಸಿಕೊಳ್ಳುತ್ತಾರೆ. ತಮ್ಮನ್ನು ತಾವೆ ಒಬ್ಬ ಅನ್ವೇಷಕ ಎಂದು ಪರಿಗಣಿಸುವ ಮೂಲಕ ಅವರು ತತ್ವಗಳು, ನಿಯಮಗಳು, ಮತ್ತು ಆಧಾರಗಳನ್ನು ಪರೀಕ್ಷಿಸುತ್ತಾರೆ. ಅವರು ಒಂದು ನಿರ್ದಿಷ್ಟ ಜಾಗರೂಕತೆ ಮತ್ತು ವಾಸ್ತವಾಂಶಗಳನ್ನು ಗುರುತಿಸುವ ವೀಕ್ಷಣಾ ಶಕ್ತಿಯನ್ನು ಗಳಿಸಿಕೊಳ್ಳುತ್ತಾರೆ.

### 13.8.4 ಪ್ರಾಜೆಕ್ಟ್ ವಿಧಾನ:

ಈ ವಿಧಾನದಲ್ಲಿ ಒಂದು ನಿರ್ದಿಷ್ಟ ಕಾರ್ಯದ ಉದ್ದೇಶವನ್ನು ವಿದ್ಯಾರ್ಥಿಗಳೇ ನಿರ್ಧರಿಸುತ್ತಾರೆ. ಸಿದ್ಧತೆ, ಯೋಜನೆಗಳನ್ನು ಮಾಡಿಕೊಳ್ಳುತ್ತಾರೆ. ಗುರಿಯನ್ನು ಪೂರೈಸಲು ಅಗತ್ಯವಿರುವ ಸಂಪನ್ಮೂಲಗಳನ್ನು ಸಂಗ್ರಹಿಸುತ್ತಾರೆ. ತಂತ್ರಗಳೇನು ಮತ್ತು ಕಾರ್ಯವನ್ನು ಪೂರ್ಣಗೊಳಿಸಲು ಎಷ್ಟು ಸಮಯ ಬೇಕಾಗುತ್ತದೆಂದು ನಿರ್ಧರಿಸುತ್ತಾರೆ. ಶಿಕ್ಷಣಕಾರ್ಯದ ನಿಜವಾದ ರೂಪವನ್ನು ತಿಳಿದುಕೊಳ್ಳಲು ಪ್ರಯತ್ನಿಸುವುದಕ್ಕಿಂತ ಮುಂಚೆ 'ಪ್ರಾಜೆಕ್ಟ್' ನ ವ್ಯಾಖ್ಯೆಯನ್ನು ನಾವು ಚರ್ಚಿಸೋಣ.

- "ಪ್ರಾಜೆಕ್ಟ್ ವಿಧಾನವು ಸಾಮಾಜಿ ಕ ಪರಿಸರದಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಳ್ಳುವ ಮೂಲಕ ಸಾಧಿಸಲಾಗುವ ಒಂದು ಉದ್ದೇಶಪೂರ್ವಕ ಚಟುವಟಿಕೆಯಾಗಿದೆ" – ಕೆಲ್‌ಪ್ಯಾಟ್ರಿಕ್.
- "ಪ್ರಾಜೆಕ್ಟ್ ವಿಧಾನವು ಸ್ವಾಭಾವಿಕ ಪರಿಸರದಲ್ಲಿ ಪೂರ್ಣಗೊಳಿಸಲಾಗುವ ಒಂದು ಸಮಸ್ಯಾತ್ಮಕ ಪ್ರಕ್ರಿಯೆಯಾಗಿದೆ" – ಜೆ.ಎ. ಸ್ಟೀವನ್‌ಸನ್
- ಪ್ರಾಜೆಕ್ಟ್ ವಿಧಾನವನ್ನು ಶೈಕ್ಷಣಿಕ ಪರಾಮರ್ಶೆ, ವಿಶೇಷವಾಗಿ ಕಾರ್ಯಾನುಭವಕ್ಕೆ ಸಂಬಂಧಿಸಿದಂತೆ ವೆಸ್ಲೆ ಕೆಳಕಂಡಂತೆ ವಿವರಿಸಿದ್ದಾನೆ.
- "ಪ್ರಾಜೆಕ್ಟ್‌ಗಳು ಚಟುವಟಿಕೆಯನ್ನು ಕಲಿಯಲು ಬೇಕಾದ ಸ್ವಾಭಾವಿಕ ಪರಿಸರದಲ್ಲಿ ಕೆಲವು ಪ್ರಮುಖ ಕೌಶಲ್ಯಗಳ ಮೂಲಕ ಸಾಧಿಸಲಾಗುವ ಸಂಘಟಿತ ಚಟುವಟಿಕೆಗಳಾಗಿವೆ" .
- ಎಲ್ಲಾ ತಜ್ಞರು ಅವರ ಅಭಿಪ್ರಾಯಕ್ಕನುಗುಣವಾಗಿ ವ್ಯಾಖ್ಯಾನಿಸಿದ್ದ ಆರಾದರೂ ಅವೆಲ್ಲವೂ ಪ್ರಾಜೆಕ್ಟ್ ವಿಧಾನದ ಕೆಲವು ಸಾಮಾನ್ಯ ವ್ಯವಸ್ಥೆಗಳನ್ನು ಸೂಚಿಸುತ್ತವೆ.
- ಪ್ರತಿಯೊಂದು ಪ್ರಾಜೆಕ್ಟ್ ವಿಧಾನವನ್ನು ಒಂದು ನಿರ್ದಿಷ್ಟ ಉದ್ದೇಶಗಳನ್ನು ಸಾಧಿಸಲು ಬಳಸಲಾಗುತ್ತದೆ.
- ವಿದ್ಯಾರ್ಥಿಗಳ ಸಾಮಾಜಿಕ ಮತ್ತು ಸಾಂಸ್ಕೃತಿಕ ಜೀವನ, ಅವರ ವೈಯಕ್ತಿಕ ಬೆಳವಣಿಗೆ ಸಾಮಾಜಿಕವಾಗಿ ಒಪ್ಪಿತವಾದ ಅಭ್ಯಾಸಗಳು ಮತ್ತು ನಡವಳಿಕೆಗಳಿ ನಂಬಿಕೆಗಳ ಬೆಳವಣಿಗೆ ಇವುಗಳನ್ನು ಗಮನದಲ್ಲಿರಿಸಿಕೊಂಡು ಉದ್ದೇಶಗಳನ್ನು ರೂಪಿಸಲಾಗುತ್ತದೆ.

- ಉದ್ದೇಶಗಳ ಆಧಾರದ ಮೇಲೆ ವಿವಿಧ ಚಟುವಟಿಕೆಗಳನ್ನು ಸಂಘಟಿಸಲಾಗುತ್ತದೆ.
- ವಿದ್ಯಾರ್ಥಿಗಳು ಅವರ ವಾಸ್ತವಿಕ ಸಾಮಾಜಿಕ ಪರಿಸರದಲ್ಲಿ ಚಟುವಟಿಕೆಗಳನ್ನು ಮಾಡಿ ಮುಗಿಸುತ್ತಾರೆ.
- ಕೆಲಸ ಮಾಡುವಾಗ ಅವರು ಸಾಮಾಜಿಕವಾಗಿ ಅಪೇಕ್ಷಣೀಯವಾದ ಮೌಲ್ಯಗಳನ್ನು ಬೆಳೆಸಿಕೊಳ್ಳುತ್ತಾರೆ.
- ಕಾರ್ಯವನ್ನು ಪೂರ್ಣಗೊಳಿಸಿದ ನಂತರ ಅವರು ನಿರ್ದಿಷ್ಟ ಮನೋಸಾಮರ್ಥ್ಯವನ್ನು ಬೆಳೆಸಿಕೊಳ್ಳುತ್ತಾರೆ.
- ಕಾರ್ಯ ಶಿಕ್ಷಣದಲ್ಲಿ ಕಲಿಕಾ ಪ್ರಕ್ರಿಯೆಯು ನಾಲ್ಕು ಹಂತಗಳಿವೆ:
- ಗುರಿಗಳನ್ನು ನಿಗದಿಪಡಿಸುವುದು.
- ಯೋಜನೆ
- ಯೋಜನೆಯನ್ನು ಸಕ್ರಿಯೆಗೊಳಿಸುವುದು.
- ಮೌಲ್ಯಮಾಪನ
- ಮೌಲ್ಯಮಾಪನವನ್ನು ಕೊನೆಯ ಹಂತವಾಗಿ ಬರೆದಿದ್ದರೂ ಸಹ ಅದು ಗುರಿಗಳನ್ನು ನಿಗದಿಪಡಿಸುವಾಗಲೇ ಪ್ರಾರಂಭವಾಘುತ್ತದೆ. ಗುರಿಯನ್ನು ನಿಗದಿಪಡಿಸುವ ಪ್ರಕ್ರಿಯೆಯನ್ನು ಸಹ ಮೌಲ್ಯಮಾಪನ ಮಾಡಬಹುದು.

### 13.8.5 ವಿಹಾರ ವಿಧಾನ:

ತರಗತಿ ಕೊಠಡಿಯ ನಾಲ್ಕು ಗೋಡೆಗಳ ಮಧ್ಯೆ ಪುಸ್ತಕದ ಜ್ಞಾನವನ್ನು ಪಡೆಯುವ ವಿದ್ಯಾರ್ಥಿಗಳ ಪರಿಸ್ಥಿತಿಯು ಬಾವಿಯನ್ನೇ ಸಾಗರವೆಂದು ಭಾವಿಸುವ ಕಪ್ಪೆಯಂತಿರುತ್ತದೆ. ನಿಜವಾಗಿಯೂ ವಿಹಾರವು ಬೋಧನೆಯ ಒಂದು ಅದ್ಭುತ ವಿಧಾನವಾಘಿದೆ. ಕಾರ್ಯಶಿಕ್ಷಣದ ಬೋಧನೆ ಕಲಿಕೆಯಲ್ಲಿ ವಿಹಾರ ವಿಧಾನವು ಅನೇಕ ಅನುಕೂಲಗಳನ್ನು ಒಳಗೊಂಡಿದೆ:

- ತರಗತಿ ಕೊಠಡಿಗಳ ಅವಧಿಗಳ ವ್ಯವಸ್ಥೆಯು ಏಕತಾನತೆ ಮತ್ತು ನೀರಸವಾಗಿರುತ್ತದೆ. ವಿಹಾರ ವಿಧಾನಗವು ಈ ದಿಕ್ಕಿನಲ್ಲಿ ಒಂದು ಸಕಾರಾತ್ಮಕ ಬದಲಾವಣೆಯನ್ನು ತರಬಲ್ಲದು.
- ತರಗತಿಯಲ್ಲಿ ಚರ್ಚಿಸಲಾಗುವ ವಿಷಯದ ಪ್ರಾಯೋಗಿಕ ಜ್ಞಾನವನ್ನು ಪಡೆಯುವುದು ವಿದ್ಯಾರ್ಥಿಗಳಿಗೆ ತುಂಬಾ ಮುಖ್ಯವಾಗಿರುತ್ತದೆ. ಈ ದಿಕ್ಕಿನಲ್ಲಿ ವಿಹಾರ ವಿಧಾನವು ಪ್ರಮುಖ ಪಾತ್ರ ವಹಿಸುತ್ತದೆ.
- ಪ್ರಯಾಣಿಸುವಾಗ ವಿದ್ಯಾರ್ಥಿಗಳ ವೀಕ್ಷಣೆಯ ಸಾಮರ್ಥ್ಯ ಬೆಳವಣಿಗೆಯಾಗುತ್ತದೆ. ವಾಸ್ತವದಲ್ಲಿ ಕಾರ್ಯವು ಪೂರ್ಣಗೊಳ್ಳುವುದನ್ನು ಅವರು ಗಮನನಿಸುತ್ತಾರೆ. ಅವರು ವಸ್ತುಗಳನ್ನು ನೈಜ ಸನ್ನಿವೇಶದಲ್ಲಿ ವೀಕ್ಷಿಸುತ್ತಾರೆ.
- ವಿಹಾರದ ಮೂಲಕ ಪಡೆದುಕೊಂಡ ಜ್ಞಾನವು ಶಾಶ್ವತವಾದುದು. ಏಕೆಂದರೆ, ಇದು ಶಿಕ್ಷಣಾರ್ಥಿಗಳ ಸಕ್ರಿಯ ಭಾಗವಹಿಸುವಿಕೆಯನಮ್ಮು ಒಳಗೊಂಡಿದೆ.

- ಪ್ರಯಾಣಿಸುವಾಗ ವಿದ್ಯಾರ್ಥಿಗಳು ಗುಂಪಿನಲ್ಲಿ ಕೆಲಸ ಮಾಡುವ ಅವಕಾಶವನ್ನು ಪಡೆಯುತ್ತಾರೆ.
- ವಿಹಾರದ ಮೂಲಕ ವಿದ್ಯಾರ್ಥಿಗಳು ಬೇರೆ ಸ್ಥಳಗಳಲ್ಲಿ ಹೇಗೆ ನಡೆದುಕೊಳ್ಳಬೇಕುಇ ಮತ್ತು ಜನರೊಡನೆ ಹೇಗೆ ಸಂವಹನ ನಡೆಸಬೇಕೆಂಬುದನ್ನು ಕಲಿಯುತ್ತಾರೆ.

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿ–9

1. ಕಾರ್ಯ ಶಿಕ್ಷಣದಲ್ಲಿ ಬೋಧನೆ ಕಲಿಕೆಯ ಯಾವ ವಿಧಾನಗಳನ್ನು ನೀವು ಬಳಸುತ್ತೀರಿ?

---

---

2. 8ನೇ ತರಗತಿಗಾಗಿ ಕಾರ್ಯ ಶಿಕ್ಷಣದ ಪ್ರತಿಯೊಂದು ಕ್ಷೇತ್ರಕ್ಕೆ ಸಂಬಂಧಿಸಿದಂತೆ ಎರಡು ಚಟುವಟಿಕೆಗಳ ಹೆಸರುಗಳನ್ನು ಬರೆಯಿರಿ.

---

---

## 13.10 ಸಾರಾಂಶಗೊಳಿಸೋಣ:

ಕಾರ್ಯ ಶಿಕ್ಷಣದ ಕಾರ್ಯಕ್ಷೇತ್ರವು ವಿಶಾಲವಾದುದು. ಇಡೀ ಸಾಮಾಜಿಕ ಸಾಂಸ್ಕೃತಿಕ , ಆರ್ಥಿಕ ಪರಿಸ್ಥಿತಿಗಳು ಕಾರ್ಯಶಿಕ್ಷಣದ ಕಾರ್ಯ ಕ್ಷೇತ್ರಗಳೆಂದು ಹೇಳಬಹುದು. ಈ ಘಟಕದ ಮೂಲಕ ಕಾರ್ಯ ಶಿಕ್ಷಣವನ್ನು ಹೇಗೆ ಸಕ್ರಿಯಗೊಳಿಸಬಹುದೆಂಬುದನ್ನು ನೀವು ತಿಳಿದುಕೊಂಡಿರಿ. ಈ ಚಟುವಟಿಕೆಗಳನ್ನು ಆಯೋಜಿಸುವಾಗ ಯವ ಕಾರ್ಯಕ್ಷೇತ್ರಗಳು ಮುಖ್ಯ ಆಧಾರಗಳಾಗಿರಬೇಕು. ಸಾಮಗ್ರಿಗಳಿ ಮತ್ತು ಉಪಕರಣಗಳನ್ನು ಲಭ್ಯಗೊಳಿಸುವುದು ಹೇಗೆ ಅವುಗಳನ್ನು ಹೇಗೆ ನಿರ್ವಹಿಸಬೇಕು. ಮತ್ತು ದಾಸ್ತಾನು ಮಾಡಬೇಕು ಎಂಬುದನ್ನು ನೀವು ತಿಳಿದಿರಿ.

ಗುಂಪುಗಳನ್ನು ಯಾವ ಆಧಾರದ ಮೇಲೆ ರಚಿಸಬೇಕೆಂಬುದನ್ನೂ ನೀವು ತಿಳಿದಿರಿ. ವಿವಿಧ ತರಗತಿಗಳಿಗಾಗಿ ಆಯೋಜಿಸಬೇಕಾದ ವಿವಿಧ ಚಟುವಟಿಕೆಗಳ ಬಗ್ಗೆ ಅರ್ಥ ಮಾಡಿಕೊಂಡಿರಿ.

ಪಠ್ಯಕ್ರಮದಲ್ಲಿನ ವಿಷಯಗಳ ಜೊತೆಗೆ ಕಾರ್ಯ ಶಿಕ್ಷಣವನ್ನು ಹೇಗೆ ಜೋಡಿಸಬಹುದೆಂಬುದನ್ನು ಸಹ ನೀವು ತಿಳಿದುಕೊಂಡಿರಿ.

## 13.11 ಓದು ಮತ್ತು ಪರಾಮರ್ಶೆಯ ಸಲಹೆಗಳು

1. National Curriculum Frame work (2005) National Council of Educational Research & Training, New Delhi.

## 13.12 ಘಟಕದ ಕೊನೆಯ ಅಭ್ಯಾಸಗಳು:

ಈ ಘಟಕದ ಆಧಾರದ ಮೇಲೆ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ:–

1. ಕಾರ್ಯ ಶಿಕ್ಷಣದ ಚಟುವಟಿಕೆಗಳು ಸಲಹಾತ್ಮಕವಾದವು, ನಿಗದಿತವಾದುವಲ್ಲ. ಇದಕ್ಕೆ ಸಂಬಂಧಿಸಿದಂತೆ ಯಾವುದೇ ಐದು ಅಂಶಗಳನ್ನು ಪ್ರಸ್ತುತಪಡಿಸಿ.
2. ನೀವು ಕಾರ್ಯ ಶಿಕ್ಷಣದ ಉಸ್ತುವಾರಿಯಾಗಿದ್ದೀರಿ. ಚಟುವಟಿಕೆಗಳಿಗೆ ಬೇಕಾದ ಸಾಮಗ್ರಿಗಳನ್ನು ಹೇಗೆ ಹೊಂದಿಸುವಿರಿ?
3. VI, VII ಮತ್ತು VIII ನೇ ತರಗತಿಗಳಿಗಾಗಿ ಪ್ರತಿ ತರಗತಿಗೆ ಪರಿಸರ ಸಂರಕ್ಷಣೆಗೆ ಸಂಬಂಧಿಸಿದ ಯಾವುದಾದರೂ ಎರಡು ಚಟುವಟಿಕೆಗಳ ಪಟ್ಟಿಯನ್ನು ತಯಾರಿಸಿ. ಶೈಕ್ಷಣಿಕ ಅವಧಿಯ ಯಾವ ತಿಂಗಳಿನಲ್ಲಿ ಈ ಚಟುವಟಿಕೆಗಳನ್ನು ಆಯೋಜಿಸಲು ಇಚ್ಛಿಸುತ್ತೀರೆಂಬುದನ್ನು ಸಹ ಪಟ್ಟಿಯಲ್ಲಿ ನಮೂದಿಸಿ.
4. ವಿಹಾರವೆಂದರೆ ಏನೆಂದು ಅರ್ಥಮಡಿಕೊಳ್ಳುತ್ತೀರಿ? ವಿಹಾರಕ್ಕೆ ಸೂಕ್ತವಾಗಿರುವ ಸ್ಥಳಗಳ ಪಟ್ಟಿಯನ್ನು ತಯಾರಿಸಿ.
5. ವಿದ್ಯಾರ್ಥಿಗಳನ್ನು ವಿಹಾರಕ್ಕೆ ಕರೆದುಕೊಂಡು ಹೋಗುವ ಸಂದರ್ಭದಲ್ಲಿ ಮತ್ತು ಅದಕ್ಕೆ ಮುಂಚಿತವಾಗಿ ಯಾವ ಪ್ರಮುಖ ಅಂಶಗಳನ್ನು ನೀವು ಗಮನದಲ್ಲಿರಿಸಕೊಳ್ಳುತ್ತೀರಿ? ಉದಾಹರಣೆಯೊಡನೆ ವಿವರಿಸಿ.

# ಘಟಕ –14
## ಕಾರ್ಯಶಿಕ್ಷಣದಲ್ಲಿ ಕೌಶಲ್ಯಗಳ ಅಭಿವೃದ್ಧಿ (ಪ್ರಾಯೋಗಿಕ ಕಾರ್ಯ)

ರಚನೆ

14.0 ಪರಿಚಯ

14.1 ಕಲಿಕೆಯ ಉದ್ದೇಶಗಳು

14.2 ಕಾರ್ಯಶಿಕ್ಷಣದಲ್ಲಿ ಚಟುವಟಿಕೆಗಳನ್ನು ಆಯ್ಕೆ ಮಾಡಿಕೊಳ್ಳಲು ಆಧಾರ ಮತ್ತು ಒರೆಗಲ್ಲುಗಳು

14.3 ಚಟುವಟಿಕೆಗಳ ಪ್ರದರ್ಶನ

- 14.3.1 ಗೊಂಬೆ ಮತ್ತು ಬೆಂಕಿ ಪೊಟ್ಟಣ
- 14.3.2 ರಬ್ಬರ್ ಆಟದ ಸಾಮಾನು
- 14.3.3 ಜೊತೆ ಬೆಂಕಿ ಪೊಟ್ಟಣಗಳು
- 14.3.4 ಕಾರ್ಡ್‌ಬೋರ್ಡ್‌ನಿಂದ ಗಾಡಿ, ಮುಖವಾಡಗಳನ್ನು ಮಾಡುವುದು.

14.4 ಸಮಾಪ್ತಿಗೊಳಿಸೋಣ.

14.5 ಅಧ್ಯಯನ ಮತ್ತು ಪರಮಾರ್ಶನ ಸಲಹೆಗಳು.

14.6 ಘಟಕ ಅಂತ್ಯದ ಚಟುವಟಿಕೆಗಳು.

## 14.0 ಪರಿಚಯ

ಶಿಕ್ಷಣದ ಪ್ರಮುಖ ಲಕ್ಷಣವೆಂದರೆ ವಿದ್ಯಾರ್ಥಿಗಳು ಉಪನ್ಯಾಸದ ಮೂಲಕ ಯಾವುದೇ ಜ್ಞಾನವನ್ನು ಪಡೆದಿರಲಿ ಅಥವಾ ಯಾವುದೇ ರೀತಿಯ ತಿಳುವಳಿಕೆಯನ್ನು ಅಭಿವೃದ್ಧಿಪಡಿಸಿಕೊಂಡಿರಲಿ ಅವರ ದಿನನಿತ್ಯದ ಅಗತ್ಯತೆಗಳನ್ನು ಪೂರೈಸಿಕೊಳ್ಳಲು ಅವರನ್ನು ಚಟುವಟಿಕೆಗಳಲ್ಲಿ ಜೊಡಿಸುವುದರ ಮೂಲಕ ಅವರು ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗವಹಿಸಬಹುದಾಗಿದೆ. ಈ ಘಟಕದ ಮುಖಾಂತರ ಕಾರ್ಯಶಿಕ್ಷಣದಲ್ಲಿ ಚಟುವಟಿಕೆಗಳನ್ನು ಆಯ್ಕೆ ಮಾಡಿಕೊಳ್ಳಲು ಏನು ಆಧಾರ ಎನ್ನುವುದನ್ನು ತಿಳಿದುಕೊಳ್ಳುವಿರಿ.

ನಿಮ್ಮ ಶಾಲೆಯಲ್ಲಿ ವಿದ್ಯಾರ್ಥಿಗಳಿಗಾಗಿ ಕೈಗೊಳ್ಳಲೇಬೇಕಾದ ವಿವಿಧ ರೀತಿಯ ಚಟುವಟಿಕೆಗಳನ್ನು ನೀವು ತಿಳಿದುಕೊಳ್ಳುವಿರಿ. ನಿಮ್ಮ ಶಾಲೆಯಲ್ಲಿ ಕೈಗೊಳ್ಳುವ ಚಟುವಟಿಕೆಗಳ ಪಟ್ಟಿಯನ್ನು ನಿಮಗೆ ನೀಡಲಾಗಿದೆ. ಚಟುವಟಿಕೆಗಳನ್ನು ಕೈಗೊಳ್ಳಲು ಕೆಲವು ಕೌಶಲ್ಯಗಳು ಈ ಘಟಕದಲ್ಲಿವೆ.

## 14.1 ಕಲಿಕೆಯ ಉದ್ದೇಶಗಳು

ಪ್ರಸ್ತುತ ಈ ಘಟಕದ ಮುಖಾಂತರ ನೀವು ಇವುಗಳನ್ನು ತಿಳಿದುಕೊಳ್ಳಲು ಸಮರ್ಥರಾಗುವಿರಿ.

1. ಕಾರ್ಯ ಶಿಕ್ಷಣದ ಮುಖಾಂತರ ಕೌಶಲ್ಯ ಅಭಿವೃದ್ಧಿಗೆ ಸಂಬಂಧಿಸಿದಂತೆ ತಿಳುವಳಿಕೆಯನ್ನು ಅಭಿವೃದ್ಧಿಪಡಿಸುವುದು.
2. ಕಾರ್ಯಶಿಕ್ಷಣದಲ್ಲಿ ಅವರವರ ಶಾಲೆಗಳಲ್ಲಿ ಕೈಗೊಳ್ಳಬಹುದಾದ ಚಟುವಟಿಕೆಗಳ ವಿವರವಾದ ಪಟ್ಟಿಯನ್ನು ತಯಾರಿಸುವುದು.
3. ಚಟುವಟಿಕೆಗಳನ್ನು ಆಯ್ಕೆ ಮಾಡಿಕೊಳ್ಳಲು ಆಧಾರವಾದ ಅಂಶಗಳು ಮತ್ತು ಓರೆಗಲ್ಲುಗಳನ್ನು ವಿವರಿಸುವುದು.
4. ವಿವಿಧ ಚಟುವಟಿಕೆಗಳನ್ನು ಕೈಗೊಳ್ಳಲು ಮತ್ತು ಸಂಘಟಿಸಲು ಅಗತ್ಯವಾದ ಸಲಕರಣೆ, ಪ್ರಕ್ರಿಯೆ ಮತ್ತು ಹಂತಗಳ ಪರಿಚಯ ಮಾಡಿಕೊಳ್ಳುವುದು.
5. ವಿವಿಧ ಪಠ್ಯ ವಿಷಯಗಳೊಂದಿಗೆ ಚಟುವಟಿಕೆಗಳನ್ನು ಸಂಯೋಜಿಸಲು ಅಗತ್ಯವಾದ ಕೌಶಲ್ಯವನ್ನು ಪಡೆಯುವುದು.
6. ವಿವಿಧ ಚಟುವಟಿಕೆಗಳನ್ನು ಸಂಘಟಿಸುವುದು ಮತ್ತು ಪ್ರದರ್ಶಿಸುವುದು.

## 14.2 ಕಾರ್ಯಶಿಕ್ಷಣದಲ್ಲಿ ಚಟುವಟಿಕೆಗಳನ್ನು ಆಯ್ಕೆ ಮಾಡಿಕೊಳ್ಳಲು ಆಧಾರ ಮತ್ತು ಓರೆಗಲ್ಲುಗಳು

ನಿಮ್ಮ ವಿಷಯದಲ್ಲಿ ಚಟುವಟಿಕೆಗಳನ್ನು ಆಯ್ಕೆ ಮಾಡಿಕೊಳ್ಳುವಾಗ ನೀವು ಖಂಡಿತವಾಗಿಯೂ ಈ ಕೆಲವು ಅಂಶಗಳಿಗೆ ಗಮನ ನೀಡಬೇಕು. ಏಕೆಂದರೆ–

- ನಿಮ್ಮ ತರಗತಿಯಲ್ಲಿ ವಿದ್ಯಾರ್ಥಿಗಳು ವೈವಿಧ್ಯಮಯ ಅನುಭವಗಳನ್ನು ಹೊಂದಿರುತ್ತಾರೆ.
- ಅವರ ಆಸಕ್ತಿಗಳು, ಸಾಮರ್ಥ್ಯಗಳು, ಜಾಣತನ ಮತ್ತು ಅಭಿರುಚಿಗಳು ಒಂದೇ ಆಗಿರುವುದಿಲ್ಲ.
- ಅವರ ಸಾಮಾಜಿಕ ಮತ್ತು ಆರ್ಥಿಕ ಹಿನ್ನಲೆ ವಿಭಿನ್ನವಾಗಿರುತ್ತದೆ.
- ಅವರ ಜ್ಞಾನದ ಆಧಾರದ ಮೇಲಿನ ಅನುಭವಗಳು ಮತ್ತು ಕೌಶಲ್ಯಗಳಿಗೆ ಮಿತಿ ಇರುತ್ತದೆ.
- ನಿಮ್ಮ ಪರಿಸರದಲ್ಲಿ ಸಂಪನ್ಮೂಲದ ಲಭ್ಯತೆಗೆ ಮಿತಿ ಇರುತ್ತದೆ.

ಈ ಕೆಳಗೆ ನೀಡಲಾಗಿರುವ ಕೆಲವು ಅಂಶಗಳಿಗೆ ಹೆಚ್ಚು ಮಹತ್ವ ನೀಡುವುದರ ಜೊತೆಗೆ ಇನ್ನು ಅನೇಕ ಅಂಶಗಳ ಆಧಾರದ ಮೇಲೆ ನೀವು ನಿಮ್ಮ ಚಟುವಟಿಕೆಗಳನ್ನು ಯೋಜಿಸಿಕೊಳ್ಳಬಹುದು.

- ಕಾರ್ಯಶಿಕ್ಷಣದ ಉದ್ದೇಶಗಳು– ಕಾರ್ಯಶಿಕ್ಷಣದ ಉದ್ದೇಶಗಳನ್ನು ಹೊಂದಿರುವ ಚಟುವಟಿಕೆಗಳನ್ನು ಗಮನದಲ್ಲಿಟ್ಟುಕೊಳ್ಳುವುದು ಮೊದಲನೆಯದಾಗಿ ಮುಖ್ಯವಾಗಿರುತ್ತದೆ. ಕಾರ್ಯಶಿಕ್ಷಣದ ಎಲ್ಲಾ ಚಟುವಟಿಕೆ ಉದ್ದೇಶ ಮತ್ತು ಅರ್ಥವನ್ನು ಹೊಂದಿರಬೇಕು. ಪ್ರತಿ ಚಟುವಟಿಕೆಯು ಈ ಎಲ್ಲಾ ಉದ್ದೇಶಗಳನ್ನು ಪೂರೈಸುವುದು ಅವಶ್ಯಕವೇ?

- ಮಗುವಿನ ಹಿನ್ನಲೆ– ಕಾರ್ಯಶಿಕ್ಷಣಕ್ಕಾಗಿ ಚಟುವಟಿಕೆಗಳನ್ನು ಆಯ್ಕೆ ಮಾಡಿಕೊಳ್ಳುವಾಗ ನಾವು ಅಗತ್ಯವಾದ ಮಾಹಿತಿ ಮತ್ತು ವಿವಿಧ ಚಟುವಟಿಕೆಗಳಲ್ಲಿ ಭಾಗವಹಿಸಬಹುದಾದ ಮಕ್ಕಳ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಪರಿಸರದ ತಿಳುವಳಿಕೆ ಬೇಕಾಗುತ್ತದೆ.
- ವಿದ್ಯಾರ್ಥಿಗಳ ಮಟ್ಟ, ಆಸಕ್ತಿ ಮತ್ತು ಅಗತ್ಯ – ಚಟುವಟಿಕೆಯ ಆಯ್ಕೆ ಮತ್ತು ಮಕ್ಕಳ ಭೌತಿಕ, ಮಾನಸಿಕ ಬೆಳವಣಿಗೆಗಳು ಒಂದಕ್ಕೊಂದು ನಿಕಟ ಸಂಬಂಧವನ್ನು ಹೊಂದಿವೆ.

ಭೌತಿಕ ಮತ್ತು ಬುದ್ಧಿವಂತಿಕೆ ಸಾಮರ್ಥ್ಯಗಳ ಜೊತೆಗೆ ಮಕ್ಕಳ ಅಗತ್ಯತೆಗಳು ಮತ್ತು ಆಸಕ್ತಿಗಳು ಅಷ್ಟೇ ಪ್ರಮುಖವಾಗಿವೆ. ಒಂದು ವೇಳೆ ಮಕ್ಕಳು ತೋಟಗಾರಿಕೆ ಚಟುವಟಿಕೆಯಲ್ಲಿ ಹೆಚ್ಚು ಆಸಕ್ತಿ ತೋರಿಸಿದರೆ ಅವರು ತೋಟಗಾರಿಕೆಗೆ ಸಂಬಂಧಿಸಿದ ಚಟುವಟಿಕೆಗಳನ್ನು ಕೈಗೊಳ್ಳಬಹುದು. ಇದು ಬಹು ಉದ್ದೇಶಗಳನ್ನು ಹೊಂದಿದೆ.
ಸಮಯ ಮತ್ತು ಜಾಗದ ಲಭ್ಯತೆ – ಪ್ರತಿ ರೀತಿಯ ಚಟುವಟಿಕೆಗಾಗಿ ನಿರ್ದಿಷ್ಟ ಸಮಯ ಮತ್ತು ಸೂಕ್ತ ಜಾಗ ಬೇಕಾಗುತ್ತದೆ. ಸಮಯದ ಅವಶ್ಯಕತೆಯನ್ನು ಎರಡು ರೀತಿಯಿಂದ ಗ್ರಹಿಸಬಹುದು.

ಒಂದು – ನಿರ್ದಿಷ್ಟ ಚಟುವಟಿಕೆಗಾಗಿ ಎಷ್ಟು ಸಮಯದ ಅವಶ್ಯಕತೆ ಇದೆ.
ಎರಡು – ಯಾವಾಗ ಆ ನಿರ್ದಿಷ್ಟ ಚಟುವಟಿಕೆಯನ್ನು ಕೈಗೊಳ್ಳಬಹುದು.

ನೀವು ಈ ಎರಡು ಅಂಶಗಳನ್ನು ಸುಲಭವಾಗಿ ಆಲೋಚಿಸಬಹುದು. ನಿಮ್ಮ ಅನುಭವಗಳ ಆಧಾರದ ಮೇಲೆ ನಿರ್ದಿಷ್ಟ ಚಟುವಟಿಕೆಯನ್ನು ಕೈಗೊಳ್ಳಲು ಎಷ್ಟು ಸಮಯ ಬೇಕಾಗುತ್ತದೆ ಎನ್ನುವುದನ್ನು ನಿರ್ಧರಿಸಲು ಶಕ್ತರಾಗಿರುತ್ತೀರಿ. ಇಲ್ಲಿ ಚಟುವಟಿಕೆಯ ಸ್ವರೂಪದೊಂದಿಗೆ ವಿದ್ಯಾರ್ಥಿಗಳ ಸಂಖ್ಯೆಯೂ ಮುಖ್ಯವಾಗಿದೆ.

ಉದಾಹರಣೆಗೆ ಕಾವಿ ಬಣ್ಣದೊಂದಿಗೆ ಪಾಟ್‌ಗಳಿಗೆ ಬಣ್ಣ ಹಚ್ಚುವ ಚಟುವಟಿಕೆಗೆ ನೀವು ಇದಕ್ಕೆ ಒಂದು ಘಂಟೆ ಸಮಯಬೇಕು ಎಂದು ನಿರ್ಧರಿಸಿದರೆ ಎಷ್ಟು ಪಾಟ್‌ಗಳು ಮತ್ತು ವಿದ್ಯಾರ್ಥಿಗಳ ಸಂಖ್ಯೆಯನ್ನು ತಿಳಿದುಕೊಳ್ಳಬೇಕಾಗುತ್ತದೆ. ಬಣ್ಣ ಹಚ್ಚುವ ಬ್ರಷ್‌ಗಳು, ಸಾಮಗ್ರಿಗಳು ಮತ್ತು ಕಾವಿ ಬಣ್ಣ ಎಷ್ಟು ಬೇಕಾಗುತ್ತದೆ ಎನ್ನುವುದು ಕೂಡಾ ಇದರಲ್ಲಿ ಸೇರಿದೆ ಅಥವಾ ಇದಕ್ಕಾಗಿ ಪ್ರತ್ಯೇಕ ಸಮಯವನ್ನು ನಿಗದಿಪಡಿಸಲಾಗುತ್ತದೆ. ಒಂದು ವೇಳೆ ಪ್ರತಿ ವಿದ್ಯಾರ್ಥಿ ಪಾಟ್‌ಗೆ ಪ್ರತ್ಯೇಕವಾಗಿ ಬಣ್ಣ ಹಚ್ಚಬೇಕೆ ಅಥವಾ ಇದು ಗುಂಪು ಚಟುವಟಿಕೆಯಾಗಿದೆಯೇ ಎನ್ನುವುದನ್ನು ತಿಳಿದುಕೊಳ್ಳಬೇಕಾಗುತ್ತದೆ. ಈ ಎಲ್ಲಾ ಅಂಶಗಳು ಪ್ರತ್ಯೇಕ ಚಟುವಟಿಕೆಗೆ ಸಮಯದ ಮಿತಿಯನ್ನು ಆಯ್ಕೆ ಮಾಡಿಕೊಳ್ಳುವಾಗ ಆಧಾರವನ್ನು ಒದಗಿಸುತ್ತವೆ.
ಈ ಕೆಳಗೆ ಪ್ರಶ್ನೆಗಳ ರೂಪದಲ್ಲಿ ಕೆಲವು ಅಂಶಗಳನ್ನು ನೀಡಲಾಗಿದೆ. ನೀವು ಅವುಗಳ ಬಗ್ಗೆ ಯೋಚಿಸಬೇಕು.

- ❖ ಆಯ್ಕೆ ಮಾಡಲಾದ ಜಾಗ ಮಕ್ಕಳಿಗೆ ಭೌತಿಕ, ಮಾನಸಿಕ ಮತ್ತು ಭಾವನಾತ್ಮಕ ಸುರಕ್ಷತೆಯನ್ನು ಒದಗಿಸುತ್ತದೆಯೇ?

- ವ್ಯಕ್ತಿಗಳಿಗೆ ಕುಳಿತುಕೊಳ್ಳಲು ಮತ್ತು ಚಲನೆಗೆ ಹಾಗೂ ಗುಂಪು ಚಟುವಟಿಕೆಗಳಿಗೆ ಸೌಲಭ್ಯಗಳಿವೆಯೇ?
- ಚಟುವಟಿಕೆಗೆ ಅಗತ್ಯವಾಗಿರುವ ಸಾಮಗ್ರಿಗಳನ್ನು ಒಂದು ವೇಳೆ ಅವನು ಸುರಕ್ಷಿತವಾಗಿಟ್ಟುಕೊಂಡಿರುವನೋ ಅಥವಾ ಇಲ್ಲವೋ.
- ನೀವು ಚಟುವಟಿಕೆಗಳನ್ನು ಸುಲಭವಾಗಿ ಮೇಲ್ವಿಚಾರಣೆ ಮಾಡಬಹುದೋ? ಅಥವಾ ಇಲ್ಲವೋ? ಮತ್ತು ಎಲ್ಲಾ ವಿದ್ಯಾರ್ಥಿಗಳ ಪ್ರದರ್ಶನವನ್ನು ಅವಲೋಕಿಸುವುದು ಸಾಧ್ಯವಾಗುವಂತಿದೆಯೇ ಅಥವಾ ಇಲ್ಲವೋ?
- ಸಂಪನ್ಮೂಲಗಳ ಲಭ್ಯತೆ– ಒಂದು ವೇಳೆ ಶಿಕ್ಷಕ ತನ್ನ ವಿದ್ಯಾರ್ಥಿಗಳು ಕಪ್ಪೆಚಿಪ್ಪುಗಳಿಂದ ಕೆಲಸ ಮಾಡುವಂತೆ ಆಶಿಸಿದಾಗ ಇದಕ್ಕೆ ಪೂರಕವಾಗಿ ಶಿಕ್ಷಕ ಸೃಜನಾತ್ಮಕತೆಯನ್ನು ಅಭಿವೃದ್ಧಿ ಪಡಿಸಬೇಕಾಗುತ್ತದೆ. ಶಿಕ್ಷಕ ತನ್ನ ವಿದ್ಯಾರ್ಥಿಗಳಿಗೆ ಬೇರೆ ಬೇರೆ ಆಕಾರ ಮತ್ತು ಗಾತ್ರದ ಕಪ್ಪೆಚಿಪ್ಪುಗಳನ್ನು ತರುವಂತೆ ಕೇಳಿಕೊಳ್ಳಬಹುದು. ನೀವು ಮುಂದೆ ಏನಾಗುತ್ತದೆ ಎನ್ನುವದನ್ನು ಉತ್ತಮವಾಗಿ ಕಲ್ಪಿಸಿಕೊಳ್ಳಬಹುದು. 40 ವಿದ್ಯಾರ್ಥಿಗಳಲ್ಲಿ ಕೇವಲ 3 ವಿದ್ಯಾರ್ಥಿಗಳು ಮಾತ್ರ ಕಪ್ಪೆಚಿಪ್ಪುಗಳನ್ನು ತಂದಿರುತ್ತಾರೆ.

ಶಿಕ್ಷಕ ನಿರಾಶನಾಗುತ್ತಾನೆ ಮತ್ತು ಮಕ್ಕಳಿಗೆ ಎರಡು ದಿನಗಳ ಕಾಲಾವಕಾಶವನ್ನು ಪುನಃ ನೀಡುತ್ತಾನೆ. ಎರಡು ದಿನಗಳ ನಂತರವೂ ಅದೇ ಸ್ಥಿತಿ ಇದೆ. ಅವನ ಪ್ರಕಾರ ;

- ವಿದ್ಯಾರ್ಥಿಗಳು ಏಕೆ ಅಂಥ ಅದ್ಭುತವಾದ ಚಟುವಟಿಕೆಯನ್ನು ಮಾಡಲು ಬಯಸುವುದಿಲ್ಲ.
- ಪೋಷಕರು ಮಕ್ಕಳಿಗೆ ಈ ಸಾಮಗ್ರಿಗಳನ್ನು ಕೂಡಿಸಿಕೊಳ್ಳಲು ಏಕೆ ಸಹಾಯ ಮಾಡುವುದಿಲ್ಲ.

ನೀವು ಈ ರೀತಿ ಆಲೋಚಿಸಲಾರಿರಾ? ಸರಿಯಾದುದನ್ನು ನೀವು ಯೋಚಿಸಿರುವಿರಿ. ಸ್ಥಳೀಯ ಪರಿಸರದ ಹೊರಗಿನಿಂದ ಸಾಮಾಗ್ರಿಗಳನ್ನು ಹೇಗೆ ಆಯ್ಕೆ ಮಾಡಲಾಗುತ್ತದೆ ನದಿ ಅಥವಾ ಸಮುದ್ರದ ದಡದಲ್ಲಿರುವ ಪಟ್ಟಣಗಳಲ್ಲಿ ವಾಸಿಸುತ್ತಿರುವ ಮಕ್ಕಳು ಕಪ್ಪೆಚಿಪ್ಪುಗಳನ್ನು ಸಂಗ್ರಹಿಸುವುದನ್ನು ನಿರೀಕ್ಷಿಸಬಹುದು. ಆದರೆ ಎಲ್ಲಾ ಮಕ್ಕಳು ಇದನ್ನು ಮಾಡುತ್ತಾರೆಂದು ನಿರೀಕ್ಷಿಸುವುದು ಕಷ್ಟ. ಕಪ್ಪೆಚಿಪ್ಪುಗಳನ್ನು ಖರೀದಿಸಬಹುದು. ಆದರೆ ಎಲ್ಲಾ ಮಕ್ಕಳು ಹಣಕೊಟ್ಟು ಖರೀದಿಸಲು ಶಕ್ತರಾಗಿರುತ್ತಾರಾ? ಎರಡನೆ ಪ್ರಮುಖ ಅಂಶವೆಂದರೆ, ಚಟುವಟಿಕೆಯಲ್ಲಿನ ಉದ್ದೇಶಗಳನ್ನು ಮಾರುಕಟ್ಟೆಯಲ್ಲಿ ಸಾಮಗ್ರಿಗಳನ್ನು ಕೊಂಡುಕೊಳ್ಳುವುದರ ಮೂಲಕ ಸಾಧಿಸುವುದಾಗಿದೆ.

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿ.

1. ಕಾರ್ಯಶಿಕ್ಷಣಕ್ಕಾಗಿ ಚಟುವಟಿಕೆಗಳನ್ನು ಆಯ್ಕೆ ಮಾಡಿಕೊಳ್ಳುವಾಗ ನೀವು ಯಾವ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳುವಿರಿ.

2. ಗುಡ್ಡಗಾಡು ಪ್ರದೇಶದಲ್ಲಿರುವ ಮಾಧ್ಯಮಿಕ ಶಾಲೆಯ 6,7, ಮತ್ತು 8ನೇ ತರಗತಿ ಮಕ್ಕಳಿಗೆ ಎರಡು ಚಟುವಟಿಕೆಗಳನ್ನು ಸೂಚಿಸಿ.

______________________________________________

______________________________________________

## 14.3 ಚಟುವಟಿಕೆಯ ಪ್ರದರ್ಶನ

ಚಟುವಟಿಕೆಯನ್ನು ಸಂಘಟಿಸಲು ನೀವು ವೈವಿಧ್ಯಮಯ ತಂತ್ರಗಳು, ವಿಧಾನಗಳು ಮತ್ತು ಸಾಮಗ್ರಿಗಳನ್ನು ಬಳಸಬಹುದು. ಸ್ಥಳ ಮತ್ತು ವ್ಯಕ್ತಿಯ ಅನುಭವದ ಆಧಾರದ ಮೇಲೆ ಚಟುವಟಿಕೆಯನ್ನು ಕೈಗೊಳ್ಳುವ ವಿಧಾನ ವಿಭಿನ್ನವಾಗಿರುತ್ತದೆ. ಪ್ರಸ್ತುತ ಘಟಕದಲ್ಲಿ ಕೆಲವು ಚಟುವಟಿಕೆಗಳನ್ನು ಸೂಚಿಸಲಾಗಿದೆ.

### 14.3–1 ಗೊಂಬೆ ಮತ್ತು ಬೆಂಕಿಪೊಟ್ಟಣ

ನಿರೀಕ್ಷಿತ ಕಲಿಕೆಯ ಫಲಿತಾಂಶ

- ಹಳೆಯ ವಸ್ತುಗಳನ್ನು ಉಪಯೋಗಿಸಿಕೊಂಡು ಹೊಸ ವಸ್ತುಗಳನ್ನು ಮಾಡುವುದನ್ನು ಕಲಿಯುವುದು.
- ಕೈ ಮತ್ತು ಕಣ್ಣಿನ ಸಂಯೋಜನೆ ಸ್ಥಾಪಿಸುವುದು.
- ಬಣ್ಣಗಳ ಮುಖಾಂತರ ಕಾಗದದ ಮೇಲೆ ವಿಭಿನ್ನ ಮುಖಗಳನ್ನು ಅವರು ಬರೆಯುವಂತೆ ಮಾಡುವುದು.
- ಹೊಸ ಪದಗಳನ್ನು ಬಳಸಿ ಕತೆ ಹೇಳುವುದು
- ಅಭಿನಯದ ಮೂಲಕ ಅದನ್ನು ತಿಳಿಸುವುದು

ಸಾಮಗ್ರಿಗಳು ಮತ್ತು ಪರಿಕರಗಳು

- ಹಳೆಯ (ಬಳಸಲಾದ) ವೃತ್ತ ಪತ್ರಿಕೆಗಳು
- ದಪ್ಪ ದಾರ ಅಥವಾ ಸೆಣಬಿನ ದಾರ
- ಬೆಂಕಿ ಪೊಟ್ಟಣದ ಹೊರ ಭಾಗ
- ಅಂಚಿ ಕಡ್ಡಿಗಳು
- ಹಾರ್ಡ್‌ಬೋರ್ಡಿನ ಮೇಲೆ ಬಣ್ಣ ಬಣ್ಣದ ಮುಖಗಳು ಫೆವಿಕೋಲ್

ಮಾಡುವುದು ಹೇಗೆ

ಅಂಚಿಕಡ್ಡಿಯ ಉದ್ದದ ಮಧ್ಯಭಾಗ ಅಂಟಿಸಿ, 2/3ನೇ ಕಡ್ಡಿಯ ಮುಂಭಾಗವು ಹೊರಭಾಗವಾಗಿರುತ್ತದೆ. ಆನಂತರ ಗೊಂಬೆಯ ದೇಹವನ್ನು ಇಲ್ಲಿ ಅಂಟಿಸಿ.

- ಬೆಂಕಿ ಪೊಟ್ಟಣದ ಮೇಲೆ ಕಾರ್ಡ್ ಬೋರ್ಡಿನ ಮುಖವನ್ನು ಅಂಟಿಸಿ.

- ವೃತ್ತಪತ್ರಿಕೆಗಳಿಂದ 7 ಸೆಂಟಿಮೀಟರ್‌ನಿಂದ 12 ಸೆಂಟಿ ಮೀಟರ್ ಅಳತೆಯ ತುಂಡುಗಳನ್ನು ಕತ್ತರಿಸಿ.
- ಪೆನ್ಸಿಲ್ ಮೇಲೆ ಕಾಗದದ ತುಂಡನ್ನು ಸುರಳಿ ಮಾಡುವುದು.
- ಕಾಗದದ ತುಂಡಿನ ಅಂತಿಮ ಪದರವನ್ನು ಫೆವಿಕೋಲ್‌ನಿಂದ ಅಂಟಿಸಿ. ಪೆನ್ಸಿಲ್‌ನ್ನು ಓತ್ತಿ ಮತ್ತು ಅದನ್ನು ಪದರದಿಂದ ಹೊರಕ್ಕೆ ತನ್ನಿ.
- ವೃತ್ತ ಪತ್ರಿಕೆಗಳಿಂದ ಅಂಥ 9 ಟ್ಯೂಬ್‌ಗಳನ್ನು ಮಾಡಿ.
- ಕೈಯನ್ನು ಮಾಡಲು ಎರಡು ಟ್ಯೂಬ್‌ಗಳಿಂದ ದಾರವನ್ನು ತೂರಿಸಿ. ಮಣಿಕಟ್ಟುಗಳ ಬದಿಯಿಂದ ಗಂಟನ್ನು ಕಟ್ಟಿ.
- ಕುತ್ತಿಗೆಯ ಮಧ್ಯಭಾಗವನ್ನು ಅಂಚಿಕಡ್ಡಿಯ ಮೊನಚಿನೊಂದಿಗೆ ಕಟ್ಟಿ, ಎರಡು ಟ್ಯೂಬ್‌ಗಳಲ್ಲಿ ದಾರವನ್ನು ಪೋಣಿಸುವುದರ ಮೂಲಕ ಮತ್ತೊಂದು ಕೈಯ್ಯನ್ನು ತಯಾರಿಸಿ, ಮತ್ತೊಂದು ಮಣಿಕಟ್ಟಿಗೂ ಗಂಟು ಕಟ್ಟಿ.
- ಇದೇ ರೀತಿ ಕಾಲುಗಳನ್ನು ತಯಾರಿಸಿ, ದೇಹದ ಮುಖಾಂತರ ಕಾಲಿನಿಂದ ಕುತ್ತಿಗೆಯವರೆಗೆ ದಾರವನ್ನು ಕಟ್ಟಿ (ನೀವು ಒಂದು ವೇಳೆ ಸೂತ್ರದ ಗೊಂಬೆಯನ್ನು ಕೋಲಿನಿಂದ ಕಾರ್ಯನಿರ್ವಹಿಸುವಂತೆ ಮಾಡಲು ಬಯಸಿದರೆ ಉದ್ದದ ಮತ್ತು ಗಟ್ಟಿದಾರವನ್ನು ಬಳಸಿ) ಬಟ್ಟೆಗಳು ಮತ್ತು ಸೂತ್ರದ ಗೊಂಬೆಗೆ ಬಣ್ಣದ ಕಾಗದಗಳ ತುಂಡುಗಳ ಸಹಾಯದಿಂದ ನೀವು ಡ್ರೆಸ್‌ನ್ನು ತಯಾರಿಸಬಹುದು.

14..3.2. ರಬ್ಬರ್ ಆಟದ ಗೊಂಬೆ

ನಿರೀಕ್ಷಿತ ಕಲಿಕೆಯ ಫಲಿತಾಂಶ

- ನಿರುಪಯುಕ್ತ ವಸ್ತುಗಳಿಂದ ಆಟದ ಸಾಮಾನುಗಳ್ನು ಮಾಡಲು ತೀವ್ರ ಆಸಕ್ತಿಯನ್ನು ಬೆಳೆಸಿ.
- ದೂರ ಮತ್ತು ಅಲಗದ ಬಗ್ಗೆ ಜ್ಞಾನವನ್ನು ಪಡೆದುಕೊಳ್ಳುವುದು.
- ವಿವಿಧ ಆಕಾರಗಳನ್ನು ತಯಾರಿಸುವುದನ್ನು ಕಲಿಯುವುದು.
- ಅವರ ಆಸಕ್ತಿಗನುಗುಣವಾಗಿ ಹೊಸ ಆಟಗಳನ್ನು ಕಲ್ಪಿಸಿಕೊಳ್ಳುವ ಸಾಮರ್ಥ್ಯವಿರಬೇಕು.

ಸಾಮಗ್ರಿಗಳು ಮತ್ತು ಉಪಕರಣಗಳು

- ಹಳೆಯ ರಬ್ಬರ್ ಚಪ್ಪಲಿ
- ಕಾಂಪಾಸ್
- ಬಾಲ್ ಪೆನ್ನಿನ ಉಪಯೋಗಿಸಲಾದ ರೀಫಿಲ್
- ತೆಳುವಾದ ಬಿದಿರು ಕಡ್ಡಿ
- ತೆಳುವಾದ ಗಟ್ಟಿದಾರ

- ದಪ್ಪದಾರ
- ಉಪಯೋಗಿಸಲಾದ ಬೆಂಕಿಕಡ್ಡಿಗಳು
- ಚಾಕು
- ರಬ್ಬರನ್ನು ಕತ್ತರಿಸಲು ಹಳೆ ವೃತ್ತ ಪತ್ರಿಕೆಗಳ ರಾಶಿ

ಮಾಡುವುದು ಹೇಗೆ

- ರಬ್ಬರಿನ ಚಪ್ಪಲಿಯಿಂದ 5 ಸೆಂ.ಮೀ. ವಿಶಾಲವಾದ ತುಂಡನ್ನು ಕತ್ತರಿಸಿ (ನಿರುಪಯುಕ್ತ ಹಳೆ ಚಪ್ಪಲಿಗಳು)
- ಈ ತುಂಡಿನಿಂದ ಪ್ರತಿ ಆಕಾರದ ತುಂಡುಗಳನ್ನು ಕತ್ತರಿಸಿಕೊಳ್ಳಿ. (ಸಾಧ್ಯವಾದಷ್ಟು)
- ಕಾಂಪಾಸ್‌ನಿಂದ 'V' ಆಕಾರದ ಎರಡು ಭಾಗಗಳಲ್ಲಿ ತೂತನ್ನು ಮಾಡಿ, ತೂತುಗಳು ತುಸು ಓರೆಯಾಗಿರಲಿ. ಚಿತ್ರದಲ್ಲಿ ತೋರಿಸಿರುವಂತೆ ತುಂಡಿನ ಒಳಭಾಗದಲ್ಲಿ ಓರೆಯಾಗಿರಲಿ.
- ರೀಫಿಲ್ಲನ್ನು ಎರಡುಭಾಗಗಳಲ್ಲಿ ಕತ್ತರಿಸಿ. 'V' ಆಕಾರದ ತುಂಡುಗಳಲ್ಲಿನ ತೂತಿನಲ್ಲಿ ಈ ತುಂಡುಗಳನ್ನಿಡಿ.
- 125 ಸೆಂ.ಮೀ. ಉದ್ದದ ತೆಳುವಾದ ದಾರಗಳ ಎರಡು ತುಂಡುಗಳನ್ನು ತೆಗೆದುಕೊಳ್ಳಿ, ಪ್ರತಿ ತುಂಡಿನ ಒಂದು ಕೊನೆ ಭಾಗವನ್ನು ಬಿದಿರಿನ ಕಡ್ಡಿಯೊಂದಿಗೆ ಬಿಗಿಯಾಗಿ ಕಟ್ಟಿ. ಬಿದಿರಿನ ಮಧ್ಯದಲ್ಲಿ ಸೀಳಿ. ಈ ಸೀಳಿನಲ್ಲಿ ದಪ್ಪ ಕುಣಿಕೆಯನ್ನು ಕಟ್ಟಿ.
- ರೀಫಿನಲ್ಲಿನ ಮುಖಾಂತರ ದಾರದ ಮತ್ತೊಂದು ತುದಿಯನ್ನು ತನ್ನಿ. ಚಿತ್ರದಲ್ಲಿ ತೋರಿಸಿರುವಂತೆ ಬೆಂಕಿ ಕಡ್ಡಿಯ ಪ್ರತಿ ಭಾಗವನ್ನು ಕಟ್ಟಿ.
- ಉಂಗುರದ ಮಧ್ಯವನ್ನು ಮೊಳೆಯೊಂದಿಗೆ ತೂಗುಹಾಕಿ.
- ಈಗ ಪ್ರತಿ ಕೈಯ್ಯನ್ನು ನಿಧಾನವಾಗಿ ತಳ್ಳುವುದರ ಮೂಲಕ ಬೆಂಕಿಕಡ್ಡಿಯನ್ನು ಈಗ ಹಿಡಿದಿಟ್ಟುಕೊಳ್ಳಿ. ಇದರಿಂದ ದಾರ ನಿಧಾನವಾಗಿ ಬಿಗಿಯಾಗುತ್ತದೆ. ಈಗ ದಾರವನ್ನು ಬಲಕ್ಕೆ ಮತ್ತು ಎಡಕ್ಕೆ ಒಂದರ ನಂತರ ಒಂದನ್ನು ಎಳೆಯಿರಿ. ಈಗ ದಾರವನ್ನು ಸಡಿಲುಗೊಳಿಸಿದಾಗ 'V' ಆಕಾರದ ರಬ್ಬರ್ ಮೇಲಕ್ಕೆ ಹೋಗುತ್ತದೆ ಮತ್ತು ಕೆಳಕ್ಕೆ ಜಾರುತ್ತದೆ. ಈ ಪ್ರಕ್ರಿಯೆಯನ್ನು ಪುನರಾವರ್ತಿಸಿ.

ಗಮನಿಸಿ – ಈಗ ನೀವು ಪತಂಗದ ಚಿತ್ರವನ್ನು ಅಂಟಿಸಬಹುದು ಅಥವಾ 'V' ಆಕಾರದ ರಬ್ಬರಿನಲ್ಲಿ ಜೇನುನೊಣಕ್ಕೆ ಕಡ್ಡಿಯ ಮಧ್ಯಭಾಗದಲ್ಲಿ ನೀವು ಹೂವನ್ನು ನೇತುಹಾಕಬಹುದು. ಅಥವಾ ನೀವು ಕಪ್ಪೆ ಮತ್ತು ಜೇನುನೊಣ ಅಥವಾ ಹಲ್ಲಿ ಮತ್ತು ದೀಪದ ಹುಳುವಿನ ಚಿತ್ರವನ್ನು ಅಂಟಿಸಬಹುದು. ಅವು ಮೇಲಕ್ಕೆ ಮತ್ತು ಕೆಳಕ್ಕೆ ಚಲಿಸಿದಾಗ ಅವು ಒಂದನ್ನೊಂದು ಹಿಂಬಾಲಿಸುವಂತೆ ಕಾಣಿಸುತ್ತವೆ.

14.3.3. ಬೆಂಕಿ ಕಡ್ಡಿಯ ಗಾಡಿ.

ನಿರೀಕ್ಷಿತ ಕಲಿಕೆಯ ಫಲಿತಾಂಶ –

- ನಿರುಪಯುಕ್ತ ಸಾಮಗ್ರಿಗಳಿಂದ ಆಟದ ಗೊಂಬೆಗಳನ್ನು ಹೇಗೆ ಮಾಡುಬಹುದೆಂಬುದನ್ನು ಕಲಿಯಲು ಶಕ್ತರಾಗುವುದು.
- ಕತ್ತರಿಯ ಸಹಾಯದಿಂದ ವಿವಿಧ ಆಕಾರಗಳನ್ನು ಕತ್ತರಿಸಲು ಸಮರ್ಥರಾಗುವುದು.
- ಗುಂಪುಗಳಲ್ಲಿ ಕೆಲಸ ಮಾಡುವುದನ್ನು ಕಲಿಯುವುದು.
- ಸಾರಿಗೆಯ ಮಾಧ್ಯಮಗಳನ್ನು ಚರ್ಚಿಸುವುದನ್ನು ಕಲಿಯುವುದು.
- ವಸ್ತುಗಳನ್ನು ಸಂಘಟಿತ ರೀತಿಯಲ್ಲಿ ಇಡುವುದನ್ನು ಕಲಿಯುವುದು.

ಸಾಮಗ್ರಿಗಳು ಮತ್ತು ಉಪಕರಣಗಳು

- ಉಪಯೋಗಿಸಲಾದ ಬೆಂಕಿ ಪೊಟ್ಟಣಗಳು
- ಜೋಡಿ ಕತ್ತರಿಗಳು
- ಬಣ್ಣದ ಕಾಗದಗಳ ತುಂಡುಗಳು
- ಸಣ್ಣಗಾಡಿ – ಒಂದು ಖಾಲಿ ಬೆಂಕಿಪೊಟ್ಟಣ ಮತ್ತು ಎರಡೂವರೆ ಪೊಟ್ಟಣದಲ್ಲಿನ ಉಪಯೋಗಿಸಲಾದ ಬೆಂಕಿ ಕಡ್ಡಿಗಳು.
- ದೊಡ್ಡಗಾಡಿ – ಖಾಲಿ ಬೆಂಕಿಪೊಟ್ಟಣದ ಎರಡು ಡ್ರಾಯರ್‌ಗಳು ಮತ್ತು ಎರಡು ಬೆಂಕಿ ಪೊಟ್ಟಣಗಳು.
- ಜೀಪ್ – ಬೆಂಕಿ ಪೊಟ್ಟಣದ ಒಂದು ಡ್ರಾಯರ್ ಮತ್ತು ಒಂದು ಬೆಂಕಿ ಪೊಟ್ಟಣ
- ಎಲ್ಲದಕ್ಕೂ–
- ಗಾಲಿಗಳಿಗಾಗಿ ಕಾರ್ಡ್ ಶೀಟ್‌ಗಳು
- ಕಿಟಕಿ ಸ್ಕ್ರೀನ್‌ಗಾಗಿ ಪಾರದರ್ಶಕ ಕಾಗದ

ಹೇಗೆ ಮಾಡುವುದು

– ಬೆಂಕಿ ಪೊಟ್ಟಣದ ಖಾಲಿ ಪೊಟ್ಟಣ ತೆಗೆದುಕೊಳ್ಳಿ, ಪೊಟ್ಟಣ ತೆರೆಯುವ ಕಡೆ ಪಾರದರ್ಶಕ ಕಾಗದವನ್ನು ಅಂಟಿಸಿ. ಇದು ಗಾಳಿಯ ಸ್ಕ್ರೀನ್ ಆಗಿ ಕಾರ್ಯ ನಿರ್ವಹಿಸುತ್ತದೆ.

– ಪೊಟ್ಟಣದ ಮೇಲ್ಭಾಗ ಮತ್ತು ಕೆಳಭಾಗದಲ್ಲಿ ಬಣ್ಣದ ಕಾಗದ ಅಂಟಿಸಿ.

– ಖಾಲಿ ಬೆಂಕಿ ಪೊಟ್ಟಣ ತೆಗೆದುಕೊಳ್ಳಿ ಮತ್ತು ಅದರ ಡ್ರಾಯರ್‌ನ 1/3 ಭಾಗ ತೆರೆಯಿರಿ. ಈಗ ಅದರ ಹಿಂದಿನ ಮುಂದಿನ ಭಾಗಕ್ಕೆ ಅಂಟಿಸಿ. ಇದರಿಂದ ಡ್ರಾಯರ್ ತನ್ನ ಸ್ಥಾನದಿಂದ ಚಲಿಸುವುದಿಲ್ಲ.

– ಅದರ ಮೇಲೆ ಅದೇ ಬಣ್ಣದ ಕಾಗದವನ್ನು ಸಹ ಅಂಟಿಸಿ.

– ಚಿತ್ರದಲ್ಲಿ ತೋರಿಸಿರುವಂತೆ ಈಗ ಪೂರ್ಣ ಬೆಂಕಿಪೊಟ್ಟಣದ ಮೇಲೆ ಡ್ರಾಯರ್‌ನ್ನು ಅಂಟಿಸಿ.

- ಕಾರ್ಡ್ ಶೀಟಿನಿಂದ ಗುಂಡಾಗಿರುವ ಗಾಲಿಗಳನ್ನು ಕತ್ತರಿಸಿ. ಇದರ ಮೇಲೆ ಗಾಲಿಗಳನ್ನು ಅಂಟಿಸಿ. ನೀವು ಇದರ ಮೇಲೆ ನಾಮಫಲಕವನ್ನು ಅಂಟಿಸಬಹುದು. ನೀವು ಕೆಂಪುಗುಂಡಿಯನ್ನು ಹೆಡ್‌ಲೈಟ್ ಆಗಿ ಬಳಸಿಕೊಳ್ಳಬಹುದು.

ಟ್ರಕ್ –

- ಎರಡು ಖಾಲಿ ಪೊಟ್ಟಣಗಳನ್ನು ತೆಗೆದುಕೊಳ್ಳಿ. ಚಿತ್ರದಲ್ಲಿ ತೋರಿಸಿರುವಂತೆ ಅದನ್ನು ಕತ್ತರಿಸಿ ಪಕ್ಕ (ಬದಿ)ಗಳನ್ನು ಅವು ಇರುವ ಹಾಗೆಯೇ ಬಿಡಿ.
- ಚಿತ್ರದಲ್ಲಿ ತೋರಿಸಿರುವಂತೆ ಸೀಳಿರುವ ಭಾಗದಲ್ಲಿ ಡ್ರಾಯರ್‌ನ್ನು ಜೋಡಿಸಿ ಇದು ಇಂಜಿನ್ ಮತ್ತು ಟ್ರಕ್‌ನ ರಚನೆಯನ್ನು ಮಾಡುತ್ತದೆ.
- ಚಾಲಕರ ಕ್ಯಾಬಿನ್ ಮಾಡಲು ಮತ್ತೊಂದು ಖಾಲಿ ಪೊಟ್ಟಣವನ್ನು ಇಂಜಿನ್ ಪಕ್ಕದಲ್ಲಿ ಅಂಟಿಸಿ. ಈ ಖಾಲಿ ಪೊಟ್ಟಣದ ಮುಂಭಾಗವನ್ನು ಕತ್ತರಿಸುವುದರ ಮೂಲಕ ಚಾಲಕರ ಕಿಟಕಿಯನ್ನು ಮಾಡಿ. ಈಗ ಪೊಟ್ಟಣದ ಕೆಳಭಾಗದಲ್ಲಿನ ಬದಿಯಲ್ಲಿ ಹೊರಚಾಚಿರುವ ಭಾಗವನ್ನು ಕತ್ತರಿಸಿ.
- ಸಂಪೂರ್ಣ ಮಾದರಿಯ ಮೇಲೆ ಬಣ್ಣದ ಕಾಗದಗಳ ತುಂಡುಗಳನ್ನು ಅಂಟಿಸಿ.

ಸೂತ್ರದ ಗೊಂಬೆ ಅಥವಾ ಆಟದ ಗೊಂಬೆಯನ್ನು ಹಳೆಯ ಕಾಲುಚೀಲಗಳಿಂದ ಮಾಡಿ.

ನಿರೀಕ್ಷಿತ ಕಲಿಕೆಯ ಫಲಿತಾಂಶ

- ಗೊಂಬೆಗೆ ಡ್ರೆಸ್ ಮಾಡಲು ಬಟ್ಟೆ ಉಪಯುಕ್ತ ಎನ್ನುವುದನ್ನು ಗುರುತಿಸುವಂತೆ ಮಾಡುವುದು.
- ಗೊಂಬೆಯನ್ನು ಅಳೆಯುವಂತೆ ಮಾಡುವುದು.
- ಗಾತ್ರ ಮತ್ತು ಅಳತೆಗೆ ತಕ್ಕಂತೆ ಬಟ್ಟೆಯನ್ನು ಕತ್ತರಿಸುವಂತೆ ಮಾಡುವುದು.
- ಗೊಂಬೆಯ ಬಗ್ಗೆ ಕತೆಯನ್ನು ಕಲ್ಪಿಸಿಕೊಳ್ಳುವಂತೆ ಮಾಡುವುದು.

ಸಾಮಗ್ರಿಗಳು ಮತ್ತು ಉಪಕರಣಗಳು

- ಹಳೆಯ ನೈಲಾನ್ ಕಾಲುಚೀಲಗಳು
- ಉಣ್ಣೆ ಅಥವಾ ಹತ್ತಿ ಬಟ್ಟೆ
- ಕಟ್ಟಿಂಗ್ಸ್ (ಚಿಕ್ಕ ಅಥವಾ ದೊಡ್ಡವು)
- ನಕ್ಷತ್ರಗಳು, ಮುತ್ತುಗಳು, ಮಣಿಗಳು ಮುಂತಾದ ಅಲಂಕಾರಿಕ ಸಾಮಗ್ರಿಗಳು.
- ಫೆವಿಕೋಲ್
- ಸೂಜಿ, ದಾರ, ಕತ್ತರಿಗಳು
- ರಬ್ಬರ್ ಪಟ್ಟಿ
- ಸ್ಕೆಚ್ ಪೆನ್

ಮಾಡುವುದು ಹೇಗೆ?

- ಜೊತೆ ಕಾಲುಚೀಲಗಳನ್ನು ತೆಗೆದುಕೊಳ್ಳಿ.
- ಕಾಲು ಚೀಲದ ಮೇಲ್ಭಾಗವನ್ನು ಹೊರತುಪಡಿಸಿ ಹತ್ತಿಯನ್ನು ತುಂಬಿ
- ಕಾಲು ಚೀಲದ ಮೇಲ್ಭಾಗವನ್ನು ರಬ್ಬರ್ ಪಟ್ಟಿಯಿಂದ ಕಟ್ಟಿ.
- ಹಿಮ್ಮಡಿಯ ಮೇಲೆ ರಬ್ಬರ್ ಪಟ್ಟಿಯನ್ನು ಹಾಕಿದ ನಂತರ ಸ್ವಲ್ಪ ಜಾಗವನ್ನು ಬಿಟ್ಟು ಮತ್ತೊಂದು ರಬ್ಬರ್ ಪಟ್ಟಿ ಹಾಕಿ.
- ನೀವು ಕಾಲುಚೀಲಗಳನ್ನು ಮೂರು ಭಾಗಗಳಾಗಿ ವಿಂಗಡಿಸಿ.
- ಈಗ ಕಣ್ಣುಗಳು, ಮೂಗು, ತುಟಿಗಳನ್ನು ಕಾಲುಚೀಲದ ಮೇಲ್ಭಾಗದಲ್ಲಿ ಅಂಟಿಸಿ.
- ಲಂಗ, ಷರ್ಟ್, ಸಲ್ವಾರ್ ಅಥವಾ ದಾವಣಿಯಾಗಿ ಡ್ರೆಸ್ ಮಾಡಿ.

ಸ್ವ–ಮೌಲ್ಯ ಮಾಪನ–

1. ಉತ್ತರ ಪ್ರದೇಶದ ಗೊಂಬೆಗಳಂತೆ ಕಾಣುವಂತೆ ಮಾಡಲು ನಿಮ್ಮ ಗೊಂಬೆಗೆ ಯಾವ ಡ್ರೆಸ್‌ನ್ನು ನೀವು ಆಯ್ಕೆ ಮಾಡುವಿರಿ?
2. ಗೊಂಬೆಯನ್ನು ಮಾಪನ ಮಾಡುವ ಕ್ರಮ ಯಾವುದು?
3. ಕತೆಯನ್ನು ಸೃಷ್ಟಿಸಿ.

### 14.3.4 ಕಾರ್ಡ್ ಬೋರ್ಡ್‌ನಿಂದ ಮುಖವಾಡ ಮಾಡಿ

ನಿರೀಕ್ಷಿತ ಕಲಿಕೆಯ ಉದ್ದೇಶ.

- ಪ್ರಕ್ರಿಯೆಯಲ್ಲಿ ಉಪಯೋಗಿಸಲಾದ ಸೂಕ್ತ ವಸ್ತುಗಳ್ನು ಗುರುತಿಸುವುದು.
- ಕತೆ ಹೇಳುವಾಗ ಮತ್ತು ಪದ್ಯ ಹೇಳುವಾಗಿನ ಸನ್ನಿವೇಶಗಳಲ್ಲಿ ಮುಖವಾಡ ಬಳಸುವುದನ್ನು ತಿಳಿದುಕೊಳ್ಳುವುದು.
- ಕಣ್ಣುಗಳು, ಮೂಗು ಮುಂತಾದವುಗಳ 3D ನೋಟವನ್ನು ಅರ್ಥ ಮಾಡಿಕೊಳ್ಳುವುದು.

ಸಾಮಗ್ರಿಗಳು ಮತ್ತು ಉಪಕರಣಗಳು

- ಕಾರ್ಡ್ ಬೋರ್ಡ್ ಶೀಟುಗಳು
- ಫೆವಿಕೋಲ್
- ಒಂದು ಜೊತೆ ಕತ್ತರಿಗಳು
- ಭಿತ್ತಿ ಚಿತ್ರಗಳ ಬಣ್ಣ, ಬ್ರಷ್

ಮಾಡುವುದು ಹೇಗೆ?

- ಕಾರ್ಡ್ ಬೋರ್ಡ್ ಶೀಟನ್ನು ತೆಗೆದುಕೊಳ್ಳಿ. ದೊಡ್ಡ ತಟ್ಟೆಯ ಸಹಾಯದಿಂದ ವೃತ್ತವನ್ನು ಎಳೆಯಿರಿ. ಈ ವೃತ್ತವನ್ನು ಕತ್ತರಿಗಳ ಸಹಾಯದಿಂದ ಕತ್ತರಿಸಿ.
- ನಿಮಗಿಷ್ಟವಾದ ಬಣ್ಣವನ್ನು ಹಚ್ಚಿರಿ.
- ಉಳಿದ ಕಾರ್ಡ್ ಬೋರ್ಡ್ ಶೀಟನಿಂದ ಕಣ್ಣುಗಳು, ಮೂಗು, ಕಿವಿಗಳು ಮತ್ತು ತುಟಿಗಳನ್ನು ಪ್ರತ್ಯೇಕವಾಗಿ ಕತ್ತರಿಸಿಕೊಳ್ಳಿ.
- ಒಂದು ವೇಳೆ ನೀವು ಬೆಕ್ಕಿನ ಮುಖವಾಡ ಮಾಡಬೇಕೆಂದರೆ ಹಾಳೆಯನ್ನು ಕಿವಿಗಳ ಆಕಾರದೊಂದಿಗೆ ಕತ್ತರಿಸಿಕೊಳ್ಳಿ. ಮೂಗನ್ನು ತ್ರಿಭುಜಾಕಾರವಾಗಿ, ಕಣ್ಣುಗಳನ್ನು ವೃತ್ತಾರಕಾರವಾಗಿ ಕತ್ತರಿಸಿಕೊಳ್ಳಿ ಮತ್ತು ಕೂದಲಿಗಾಗಿ ಸೆಣಬನ್ನು ಕತ್ತರಿಸಿಕೊಳ್ಳಿ.
- ನಿಮಗಿಷ್ಟವಾದಂತೆ ಬಣ್ಣ ಹಚ್ಚಿ
- ಫೆವಿಕೋಲ್ ಸಹಾಯದಿಂದ ಮುಖವಾಡದ ಸೂಕ್ತ ಜಾಗದಲ್ಲಿ ಎಲ್ಲಾ ಭಾಗಗಳನ್ನು ಅಂಟಿಸಿ.
- ಹಾಸ್ಯಗಾರನ ಮುಖವಾಡ ಅಥವಾ ಇನ್ನಾವುದೇ ಮುಖವಾಡ ಮಾಡಲು ಕಣ್ಣುಗಳು, ಮೂಗು, ಕಿವಿಗಳಲ್ಲಿ ನೀವು ಬದಲಾವಣೆ ತರಬಹುದು. ಉದಾಹರಣೆಗೆ ಚಿಕ್ಕ ಕಣ್ಣುಗಳು, ಉದ್ದವಾದ ಕಿವಿಗಳು ದಪ್ಪವಾದ ಹಾಸ್ಯಗಾರನ ತುಟಿಗಳು.

ಗಮನಿಸಿ–

- ಕುಂಕುಮ (ಬಿಂದಿ)ವನ್ನು ಕಣ್ಣುಗಳಿಗಾಗಿ ಬಳಸಬಹುದು.
- ಟೂತ್ ಪೇಸ್ಟಿನ ಮುಚ್ಚಳವನ್ನು ಮೂಗಿಗಾಗಿ ಬಳಸಬಹುದು.
- ಸೆಣಬನ್ನು ಕೂದಲಿಗಾಗಿ ಬಳಸಬಹುದು.
- ಐಸ್ ಕ್ರೀಂ ಕಡ್ಡಿಗಳನ್ನು ತುಟಿಗಳಿಗಾಗಿ ಬಳಸಬಹುದು.
- ಒಂದು ವೇಳೆ ಬಣ್ಣದ ಭಿತ್ತಿಪತ್ರಗಳು ದೊರೆಯದಿದ್ದಲ್ಲಿ ಬಣ್ಣದ ಕಾಗದಗಳನ್ನು ಅಂಟಿಸಬಹುದು.
- ಒಂದು ವೇಳೆ ನೀವು ಒಂದು ಕುಂಕುಮವನ್ನು ಮತ್ತೊಂದಕ್ಕಿಂತ ಚಿಕ್ಕದಾಗಿ ಕತ್ತರಿಸಿದಾಗ ನೀನು ಏನು ಮಾಡುವಿರಿ.
- ಮೂಗು, ಕಿವಿಗಳು, ಮತ್ತು ಕಣ್ಣುಗಳನ್ನು ಅಂಟಿಸುವಾಗ ಯಾವ ಎಚ್ಚರಿಕೆಯನ್ನು ನೀವು ವಹಿಸಬೇಕು.

ಸ್ವ–ಮಾಪನ

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿ

1. ಲಭ್ಯವಿರುವ ಸಾಮಗ್ರಿಗಳನ್ನು ಬಳಸಿಕೊಂಡು ಹತ್ತಿಯ ಜಮಖಾನ ಮಾಡುವ ವಿವಿಧ ಹಂತಗಳನ್ನು ಬರೆಯಿರಿ.
2. ಚಟುವಟಿಕೆಯನ್ನು ಪ್ರದರ್ಶನ ಮಾಡುವಾಗ ಯಾವ ಯಾವ ಅಂಶಗಳನ್ನು ಗಮನದಲ್ಲಿಟ್ಟು ಕೊಳ್ಳಬೇಕು? ಯಾವುದಾದರೂ 5 ಅಂಶಗಳನ್ನು ಸೂಚಿಸಿ.

## 14.4 ಸಮಾಪ್ತಿಗೊಳಿಸೋಣ:

ಈ ಘಟಕದಿಂದ ನಿಮ್ಮ ಶಾಲೆಯ ಅಗತ್ಯತೆಗಳನ್ನು ಗಮನದಲ್ಲಿಟ್ಟುಕೊಂಡು ಕಾರ್ಯಶಿಕ್ಷಣವನ್ನು ಪರಿಣಾಮಕಾರಿಯಾಗಿ ಮಾಡುವುದು ಹೇಗೆ ಎನ್ನುವುದನ್ನು ತಿಳಿಸಲಾಗಿದೆ. ಚಟುವಟಿಕೆಯನ್ನು ಆಯ್ಕೆ ಮಾಡಿಕೊಳ್ಳಲು ಅಧಾರ ಯಾವುದು ಎನ್ನುವುದರ ಬಗ್ಗೆ ತಿಳುವಳಿಕೆಯನ್ನು ಬೆಳೆಸಿಕೊಂಡಿರುವಿರಿ. ಉದಾಹರಣೆಗೆ ವಿದ್ಯಾರ್ಥಿಗಳ ಹಿತಾಸಕ್ತಿಗಳು, ಭೌತಿಕ ಮತ್ತು ಮಾನಸಿಕ ಸಾಮರ್ಥ್ಯ, ಸಂಪನ್ಮೂಲಗಳ ಲಭ್ಯತೆ, ಸಾಮಾಜಿಕ ಆರ್ಥಿಕ ಸಾಂಸ್ಕೃತಿಕ ಹಿನ್ನಲೆ, ಸಹಪಾಠಿಗಳ ಮನೋಧೋರಣೆ ಮತ್ತು ಮುಖ್ಯವಾಗಿ ನಿಮ್ಮ ಮನೋಧೋರಣೆ.

ಹೀಗೆ ಕಾರ್ಯಶಿಕ್ಷಣದ ಚಟುವಟಿಕೆಗಳು ಸೂಚಿತವಾಗಿವೆ. ಅವುಗಳನ್ನು ಸೂಚಿಸಬಹುದು ಆದರೆ ಅವುಗಳನ್ನು ಯಾವುದೇ ಸಂಸ್ಥೆ ಯಾವುದೇ ಶಾಲೆಗೆ ಮಾಡಲೇಬೇಕೆಂದು ಆಜ್ಞಾಪಿಸುವಂತಿಲ್ಲ.

ಒಂದು ಕೆಲಸವನ್ನು ಅಭಿವೃದ್ಧಿಪಡಿಸಲು ಯಾವ ರೀತಿಯ ಸಂಪನ್ಮೂಲಗಳು ಬೇಕಾಗುತ್ತವೆ ಎನ್ನುವುದನ್ನು ಹಾಗೂ ಆ ಕೆಲಸ ನಿರ್ವಹಿಸಲು ಯಾವ್ಯಾವ ಹಂತಗಳಿವೆ ಎನ್ನುವುದನ್ನು ನೀವು ಗಮನಿಸಿರುವಿರಿ.

## 14.5 ಪರಮಾರ್ಶನ ಗ್ರಂಥಗಳು

1. ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (2005) ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿಯ ರಾಷ್ಟ್ರೀಯ ಮಂಡಳಿ ನವದೆಹಲಿ.

2. ಶಾರದಾ ಕುಮಾರಿ (2005) ಪ್ರಿನ್ಸಿಪಲ್ಸ್ ಆಫ್ ಟೀಚಿಂಗ್ ವರ್ಕ್ ಎಜುಕೇಷನ್ ನವದೆಹಲಿ.

3. ರಿಚರ್ಡ್ ಗ್ಲಿನ್ (2001) ಗಾಂಧಿಯವರ ಶೈಕ್ಷಣಿಕ ತತ್ವಶಾಸ್ತ್ರ, ನವದೆಹಲಿ ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯ ಮುದ್ರಣಾಲಯ.

4. Sykes Marforie (1998) ಹೊಸ ಶಿಕ್ಷಣದ ಕತೆ, ಸೇವಾಗ್ರಾಮದಲ್ಲಿ 50 ವರ್ಷಗಳ ಶಿಕ್ಷಣ 1937-1987 ಹೊಸ ಶಿಕ್ಷಣ ಸಮಿತಿ ಸೇವಾಗ್ರಾಮ, ವಾರ್ಧಾ ಮಹಾರಾಷ್ಟ್ರ.

5. ಭಾರತ ಸರ್ಕಾರ (1993) ಅಡೆ ತಡೆಗಳಿಲ್ಲದ ಕಲಿಕೆ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದ ರಾಷ್ಟ್ರೀಯ ಮಂಡಳಿ ವರದಿ ನವದೆಹಲಿ.

## 14.6 ಘಟಕದ ಪ್ರಶ್ನೆಗಳು

- ಹಳೆ ಬಟ್ಟೆಗಳು, ಕಾಲುಚೀಲಗಳು, ಮತ್ತು ಹತ್ತಿ ಮುಂತಾದವುಗಳ ಸಹಾಯದಿಂದ ಸೂತ್ರದ ಗೊಂಬೆ ಮಾಡುವ ಚಟುವಟಿಕೆಯನ್ನು ತೋರಿಸಿ.
- ಮಾಧ್ಯಮಿಕ ಶಾಲೆಯ 12 ವರ್ಷದ ಬಾಲಕಿಗೆ ಸಮತೋಲನ ಆಹಾರದ ಚಾರ್ಟನ್ನು ತಯಾರಿಸಿ.
- ಹಣ್ಣಿನ ರಸ ತಯಾರಿಸುವ ಪ್ರಕ್ರಿಯೆ ಮತ್ತು ಸಾಮಗ್ರಿಗಳ ಬಗ್ಗೆ ಬರೆಯಿರಿ.

*******

# ಘಟಕ 15

# ಶಾಲೆ ಮತ್ತು ಸಮುದಾಯದಲ್ಲಿ ಕಾರ್ಯ ಶಿಕ್ಷಣ

ರಚನೆ

15.0 ಪರಿಚಯ

15.1 ಕಲಿಕೆಯ ಉದ್ದೇಶಗಳು

15.2 ಕಾರ್ಯಶಿಕ್ಷಣಕ್ಕೆ ಸಂಬಂಧಿಸಿದಂತೆ ಸಮುದಾಯದ ಪಾತ್ರ

15.3 ಕಾರ್ಯಶಿಕ್ಷಣವನ್ನು ಅನುಷ್ಠಾನಗೊಳಿಸಲು ಸಮುದಾಯ ಸಂಪನ್ಮೂಲನಗಳ ಗುರುತಿಸುವಿಕೆ ಮತ್ತು ಬಳಕೆ

15.3.1 ಭೋದನೆ ಕಲಿಕಾ ಪ್ರಕ್ರಿಯೆಯಲ್ಲಿ ಸಮುದಾಯದ ಸಹಕಾರ

15.3.2 ಶಾಲೆ ಮತ್ತು ಕಲಿಕಾದಾರರನ್ನು ಮೌಲ್ಯಮಾಪನ ಮಾಡುವ ಪ್ರಕ್ರಿಯೆಯಲ್ಲಿ ಸಮುದಾಯದ ಸಹಕಾರ

15.4 ಕಾರ್ಯಶಿಕ್ಷಣದ ಬಗ್ಗೆ ಪೋಷಕರಿಗೆ ಮತ್ತು ಸಮುದಾಯಕ್ಕೆ ಅಭಿ ವಿನ್ಯಾಸ

15.5 ಸಮಾಪ್ತಿಗೊಳಿಸೋಣ.

15.6 ಪರಮಾರ್ಶನ ಗ್ರಂಥಗಳು:

15.7. ಈ ಘಟಕದ ಪ್ರಶ್ನೆಗಳು

## 15.0 ಪರಿಚಯ

'ಶಾಲೆ, ಕುಟುಂಬ ಮತ್ತು ಸಮಾಜ ಈ ಮೂರರ ಜವಾಬ್ದಾರಿಯಿಂದ ಮಾತ್ರ ಪರಿಣಾಮಕಾರಿ ಶಿಕ್ಷಣ ಸಾಧ್ಯ' ಎನ್ನುವ ಹೇಳಿಕೆಯ ಬಗ್ಗೆ ಯಾವಾಗಲಾದರೂ ಗಮನ ನೀಡಿರುವಿರಾ. ಇದು ಮಕ್ಕಳ ಶಿಕ್ಷಣಕ್ಕೆ ಸಂಪೂರ್ಣವಾಗಿ ಶಾಲೆಯೇ ಜವಾಬ್ದಾರವಲ್ಲ ಎನ್ನುವ ಅಂಶವನ್ನು ಹಾಗೂ ಜನರ ಪಾಲ್ಗೊಳ್ಳುವಿಕೆ ಅಗತ್ಯ ಎನ್ನುವುದನ್ನು ಸೂಚಿಸುತ್ತದೆ. ಈ ಘಟಕದಿಂದ ನೀವು ಸಮುದಾಯ ಎಂದರೇನು ಎನ್ನುವುದನ್ನು ತಿಳಿದುಕೊಳ್ಳುವಿರಿ.

ವಿಶೇಷ ಸೌಲಭ್ಯ ಹೊಂದಿರುವ ಮತ್ತು ಹೊಂದಿರದ ಈ ಎರಡು ಸನ್ನಿವೇಶಗಳಲ್ಲಿ ಶಾಲೆ ಸಮುದಾಯದ ಸಹಕಾರವನ್ನು ಹೇಗೆ ಆಹ್ವಾನಿಸುತ್ತದೆ. ಕಾರ್ಯಶಿಕ್ಷಣದಲ್ಲಿ ಸಮುದಾಯದ ಸಹಕಾರವನ್ನು ಹೇಗೆ ಮತ್ತು ಏಕೆ ಪಡೆದುಕೊಳ್ಳಬೇಕು. ಪೋಷಕರು ಕಾರ್ಯಶಿಕ್ಷಣದ ಪ್ರಾಮುಖ್ಯತೆಯನ್ನು ಹೇಗೆ ಪರಿಗಣಿಸುತ್ತಾರೆ ಎನ್ನುವುದನ್ನು ನೀವು ತಿಳಿದುಕೊಳ್ಳಬೇಕು. ಪೋಷಕರನ್ನು ಕಾರ್ಯಶಿಕ್ಷಣದ ಮಹತ್ವದಲ್ಲಿ ಹೇಗೆ ಪರಿಚಯಿಸುತ್ತಾರೆ ಎನ್ನುವುದನ್ನೂ ನೀವು ತಿಳಿದುಕೊಳ್ಳಬೇಕು. ಅಲ್ಲದೇ ಪೋಷಕರಿಗೆ ಶಾಲಾ ಶಿಕ್ಷಣ ವ್ಯವಸ್ಥೆಯಲ್ಲಿ ಕಾರ್ಯಶಿಕ್ಷಣಕ್ಕೆ ಸಂಬಂಧಿಸಿದಂತೆ ಅವರ ನಿರೀಕ್ಷೆಗಳು ಯಾವುವು ಎನ್ನುವುದನ್ನು ತಿಳಿದುಕೊಳ್ಳಬೇಕು.

## 15.1 ಕಲಿಕೆಯ ಉದ್ದೇಶಗಳು

ಈ ಘಟಕದ ಕಲಿಕೆಯ ಉದ್ದೇಶಗಳು ಈ ಕೆಳಗಿನಂತಿವೆ.

- ಸಮುದಾಯದ ಅರ್ಥವನ್ನು ಅವರು ಅರ್ಥ ಮಾಡಿಕೊಳ್ಳುವಂತೆ ಮಾಡುವುದು.
- ಸಮುದಾಯ ಸಹಕಾರದ ಪ್ರಾಮುಖ್ಯತೆಯನ್ನು ವಿವರಿಸುವುದು.
- ಸಮುದಾಯದಲ್ಲಿ ಲಭ್ಯವಿರುವ ಸಂಪನ್ಮೂಲಗಳನ್ನು ಗುರುತಿಸುವುದು.
- ಸಮುದಾಯದ ಸಂಪನ್ಮೂಲಗಳನ್ನು ಆಹ್ವಾನಿಸುವ ಮಾರ್ಗಗಳನ್ನು ಪರಿಶೋಧಿಸುವುದು.
- ಕಾರ್ಯಶಿಕ್ಷಣದ ಪ್ರಾಮುಖ್ಯತೆಯನ್ನು ಪೋಷಕರಿಗೆ ಪರಿಚಯಿಸುವ ವಿಧಾನಗಳನ್ನು ಅನುಷ್ಠಾನಗೊಳಿಸುವುದು.

ಕಾರ್ಯಶಿಕ್ಷಣಕ್ಕೆ ಸಂಬಂಧಿಸಿದಂತೆ ಸಮುದಾಯದ ಪಾತ್ರ

ಶಾಲೆಯಲ್ಲಿ ಶಿಕ್ಷಣಕ್ಕೆ ಸಮುದಾಯದ ಸಹಕಾರವನ್ನು ಪಡೆಯುವುದಕ್ಕಿಂತ ಮುಂಚಿತವಾಗಿ ಸಮುದಾಯದ ಕಲ್ಪನೆಗಳನ್ನು ಆಲೋಚಿಸಬೇಕು.

ಒಂದು ನಿರ್ದಿಷ್ಟ ಪ್ರದೇಶದಲ್ಲಿ ವಾಸಿಸುತ್ತಿರುವ ಜನರ ಗುಂಪು ಸಮುದಾಯವಾಗಿದೆ. ಇದು ಸಮಾನವಾಗಿ ಲಭ್ಯವಿರುವ ಸಂಪನ್ಮೂಲಗಳಿಂದ ಮತ್ತು ಅದರ ಅಂತರಾವಲಂಬನೆಯಿಂದ ದಿನನಿತ್ಯದ ಅಗತ್ಯತೆಗಳನ್ನು ಪೂರೈಸುತ್ತದೆ.

ಸಮುದಾಯದ ವಿವರಣೆಯು ಕೆಲವು ಜನರ ಗುಂಪಿನಿಂದ ಇಡೀ ವಿಶ್ವದ ತನಕ ಏನಾದರೂ ಆಗಬಹುದು. ಪ್ರತಿ ಉದಾಹರಣೆಯಿಂದ ಸಮುದಾಯದ ಪರಿಭಾವಣೆ ಬದಲಾಗುತ್ತದೆ. ಆದಾಗ್ಯೂ ಸಮುದಾಯದ ಪರಿಭಾವಣೆಯು ಕೆಳಗೆ ತಿಳಿಸಲಾಗಿರುವ ಸ್ಥಿತಿಗಳನ್ನು ಒಳಗೊಂಡಿದೆ ಎನ್ನುವುದನ್ನು ನಾವು ತಿಳಿದುಕೊಂಡಿದ್ದೇವೆ.

- ವಿಭಿನ್ನ ಜೀವಕೋಶಗಳನ್ನು ಜೊತೆಗೂಡಿಸುವುದರ ಮೂಲಕ ಪ್ರಾಣಿಗಳನ್ನು ಹೇಗೆ ರೂಪಿಸಲಾಗುತ್ತದೆಯೋ ಹಾಗೆ ವಿಭಿನ್ನ ಜನರನ್ನು ಒಟ್ಟುಗೂಡಿಸುವುದರ ಮೂಲಕ ಸಮುದಾಯ ರೂಪುಗೊಳ್ಳುತ್ತದೆ.
- ಗೊತ್ತಿದ್ದೊ/ಗೊತ್ತಿಲ್ಲದೆಯೋ ಎಲ್ಲಾ ಜನರು ಸಾಮಾನ್ಯ ಕಾರಣಗಳಿಗಾಗಿ ಸಂಪರ್ಕಿಸುತ್ತಾರೆ.
- ಸಮುದಾಯದೊಳಗಿರುವ ಸದಸ್ಯರ ನಡುವಿನ ಸಂಬಂಧವು ಜೀವಕೋಶಗಳು ಮತ್ತು ಜೀವಿಗಳಾಗಿರುವ ಸಂಬಂಧದಂತಿದೆ ಮತ್ತು ಈ ವಿನಿಮಯ ಮುಂದುವರೆಯುತ್ತದೆ.
- ಎಲ್ಲಾ ಜನರು ನಿರ್ದಿಷ್ಟ ಗುರಿ ಸಾಧಿಸಲು ಜಂಟೀ ಪ್ರಯತ್ನ ಮಾಡುತ್ತಾರೆ ಮತ್ತು ಅವರ ಅನುಭವಗಳನ್ನು ಹಂಚಿಕೊಳ್ಳುತ್ತಾರೆ.

ಮಹಾತ್ಮಗಾಂಧಿಯವರು ಶಾಲೆ ಮತ್ತು ಸಮುದಾಯ ತರಗತಿಗಳನ್ನು ತರುವ ಅವಶ್ಯಕತೆಯನ್ನು ಒತ್ತಿ ಹೇಳಿದ್ದರು "ಒಂದು ವೇಳೆ ಹೊಸ ಸಾಮಾಜಿಕ ವ್ಯವಸ್ಥೆಯನ್ನು ಶಿಕ್ಷಣದ ಮುಖಾಂತರ ಸ್ಥಾಪಿಸುವುದಾದರೆ ಅವೆರಡೂ ಪ್ರತ್ಯೇಕವಾಗಿ ಅಸ್ತಿತ್ವದಲ್ಲಿರಲಾರವು".

ಶಿಕ್ಷಕರನ್ನು ಮತ್ತು ಪೋಷಕರನ್ನು ನಿಕಟವಾಗಿ ಹತ್ತಿರ ತರುವುದರ ಮೂಲಕ ಶಿಕ್ಷಣ ಪ್ರಕ್ರಿಯೆಗಳನ್ನು ಶ್ರೀಮಂತಗೊಳಿಸಬಹುದು ಎನ್ನುವುದನ್ನು ನಾವೆಲ್ಲಾ ತಿಳಿದುಕೊಂಡಿದ್ದೇವೆ. ಸಮುದಾಯವು ಶಾಲೆಯಲ್ಲಿ ಮಕ್ಕಳ ಅಗತ್ಯತೆಗಳ ಬಗ್ಗೆ ಕಾಳಜಿ ಹೊಂದಿರುತ್ತದೆ. ಯಾವುದೇ

ಸಂದರ್ಭದಲ್ಲಿ ಸಮಾಜ ಶಾಲೆಯಲ್ಲಿ ಮಕ್ಕಳ ಅಭಿವೃದ್ಧಿ ಮತ್ತು ಶೈಕ್ಷಣಿಕ ಸಾಧನೆಗಳ ಜವಾಬ್ದಾರಿಯನ್ನು ಸಂಪೂರ್ಣವಾಗಿ ಸಮಾಜ ಬಿಡುವಂತಿಲ್ಲ. ಸಮುದಾಯದಿಂದ ಶಾಲೆಯ ನಿರೀಕ್ಷೆ ಎಂದರೆ,

- ಮಗುವನ್ನು ಶಾಲೆಗೆ ತಪ್ಪದೇ ಕಳಿಸುವುದು.
- ಶಾಲೆಯಲ್ಲಿ ಮಕ್ಕಳು ಸಮಯಪಾಲನೆಗೆ ಹೆಚ್ಚು ಮಹತ್ವ ನೀಡುವುದು.
- ಶಾಲೆಯ ಶೈಕ್ಷಣಿಕ ಪ್ರಕ್ರಿಯೆಗಳನ್ನು ಮೇಲ್ವಿಚಾರಣೆ ಮಾಡಲು ಅವರ ಪಾಲುದಾರಿಕೆಯನ್ನು ಹೆಚ್ಚಿಸುವುದು.
- ಕಾರ್ಯಶಿಕ್ಷಣಕ್ಕೆ ಸಂಬಂಧಿಸಿದಂತೆ ಚಟುವಟಿಕೆಯನ್ನು ಆಯ್ಕೆ ಮಾಡಿಕೊಳ್ಳುವಾಗ ಸಲಹೆಗಳನ್ನು ನೀಡಬಹುದು.
- ಶಾಲೆಯ ಟೈಮ್ ಟೇಬಲ್ಲಿನಲ್ಲಿ ಕಾರ್ಯಶಿಕ್ಷಣಕ್ಕಾಗಿ ಸಮಯ ಮತ್ತು ಅದರ ಅಗತ್ಯತೆಯನ್ನು ನಿರ್ಧರಿಸಲು ಅವರ ಅಭಿಪ್ರಾಯಗಳನ್ನು ವ್ಯಕ್ತಪಡಿಸಬಹುದು.
- ಕಾರ್ಯಶಿಕ್ಷಣಕ್ಕಾಗಿ ಪ್ರಯೋಗಾಲಯ ಸ್ಥಾಪಿಸಲು ಕ್ರಿಯಾತ್ಮಕವಾಗಿ ಕೊಡುಗೆ ನೀಡಬಹುದು. ಉದಾಹರಣೆಗೆ ಕಾರ್ಯಶಿಕ್ಷಣಕ್ಕಾಗಿ ಸಾಮಗ್ರಿಗಳು ಮತ್ತು ಉಪಕರಣಗಳ ಮಾರಾಟ ಖರೀದಿಯಲ್ಲಿ ಭಾಗವಹಿಸುವಿಕೆ. ಅವುಗಳನ್ನು ಸಂರಕ್ಷಿತವಾಗಿ ಕಾಪಾಡಲು ಮಾಹಿತಿ ನೀಡುವುದು ಇತ್ಯಾದಿ.
- ವಸ್ತುಪ್ರದರ್ಶನ ಚಟುವಟಿಕೆಗಳಲ್ಲಿ ಸಹಕಾರ ನೀಡುವುದು.
- ವಿದ್ಯಾರ್ಥಿಗಳ ಮಾಪನ ಮತ್ತು ಮೌಲ್ಯಮಾಪನದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಿಕೆ.

ಮೇಲೆ ತಿಳಿಸಲಾಗಿರುವ ಕ್ಷೇತ್ರಗಳಿಗಿಂತ ಇನ್ನು ಹೆಚ್ಚಿನ ಕ್ಷೇತ್ರಗಳಲ್ಲಿ ಸಮುದಾಯದ ಪಾಲ್ಗೊಳ್ಳುವಿಕೆಯನ್ನು ಆಹ್ವಾನಿಸುವುದರ ಮೂಲಕ ಕಾರ್ಯಶಿಕ್ಷಣವನ್ನು ಪರಿಣಾಮಕಾರಿಯನ್ನಾಗಿ ಮಾಡುವ ಸಾಧ್ಯತೆಗಳನ್ನು ನೀವು ಹುಡುಕಬಹುದು. ಇಲ್ಲಿ ಒಂದು ಮುಖ್ಯ ಅಂಶವನ್ನು ತಿಳಿಸಲೇಬೇಕು. ಅದೇನೆಂದರೆ ಸಮುದಾಯದಿಂದ ಶಾಲೆಗಳು ಯಾವುದೇ ನಿರೀಕ್ಷೆಯನ್ನು ಹೊಂದಿರಬಾರದು. ಆದರೆ ಅದರ ಸೇವೆ ಸಮುದಾಯಕ್ಕೆ ದೊರೆಯುವಂತೆ ಮಾಡಬೇಕು. ಅಥವಾ ಪರಸ್ಪರ ಪ್ರತಿಕ್ರಿಯೆಗಳ ಮೂಲಕ ಪೋಷಕರು ಮತ್ತು ಶಿಕ್ಷಕರ ನಡುವಿನ ಅಂತರವನ್ನು ಕಡಮೆ ಮಾಡುವುದರ ಮೂಲಕ ಬೋಧನೆ ಮತ್ತು ಕಲಿಕೆ ಪ್ರಕ್ರಿಯೆಯನ್ನು ಶ್ರೀಮಂತಗೊಳಿಸಬಹುದು. ಶಾಲೆಯು ಸಮಾಜದ ಭಾಗವಾಗಿರಬೇಕು. ಮತ್ತು ಪ್ರತ್ಯೇಕ ಸಂಸ್ಥೆಯಾಗಿರಬಾರದು. ಆದ್ದರಿಂದ ಶಾಲೆಗಳು ಸಮಾಜಕ್ಕೆ ತನ್ನ ದ್ವಾರವನ್ನು ಮುಕ್ತವಾಗಿ ತೆರೆದಿರಬೇಕು.

ಶಾಲೆಯು ಸಮಾಜಕ್ಕೋಸ್ಕರ ಅನೇಕ ಚಟುವಟಿಕೆಗಳನ್ನು ಸಂಘಟಿಸಬಹುದು. ಉದಾಹರಣೆಗೆ

- ನೀರು ಪೂರೈಕೆ ಮಾಡುವ ಸ್ಥಳ, ಗುಂಡಿಗಳನ್ನು ಮುಚ್ಚುವುದು. ಸಮುದಾಯ ತೋಟಗಳಲ್ಲಿ ತೋಟಗಾರಿಕೆ ಮಾಡುವುದು. ಕಾಂಪೋಸ್ಟ್ ಗೊಬ್ಬರ ತಯಾರಿಕೆ ಮುಂತಾದ ಚಟುವಟಿಕೆಗಳನ್ನು ಕಾರ್ಯಶಿಕ್ಷಣದ ಅಂಗವಾಗಿ ಆಯ್ಕೆ ಮಾಡಿಕೊಳ್ಳಬಹುದು.
- ಕುಶಲ ಕರ್ಮಿಗಳ ಸಂದರ್ಶನವನ್ನು ಸಂಘಟಿಸುವುದು. ಇದು ಅವರನ್ನು ಗುರುತಿಸುವುದರ ಜೊತೆಗೆ ಅವರ ನೈತಿಕತೆಯನ್ನು ಉತ್ತಮ ಪಡಿಸುವುದು.
- ವಿದ್ಯಾರ್ಥಿಗಳ ಮುಖಾಂತರ ಶಾಲೆಗೆ ಬರದಿರುವ ಮಕ್ಕಳ ಸಂಖ್ಯೆ ಮತ್ತು ವಯಸ್ಕ ಅನಕ್ಷರಸ್ಥರ ಸಂಖ್ಯೆಯನ್ನು ಕಂಡುಹಿಡಿಯಲು ಸಮೀಕ್ಷೆಯನ್ನು ಕೈಗೊಳ್ಳಬಹುದು. ಕೇವಲ ಸಮೀಕ್ಷೆ ಮಾಡಿದರೆ ಸಾಕಾಗುವುದಿಲ್ಲ. ಶಾಲೆಗೆ ಬರದಿರುದ ಮಕ್ಕಳು ಶಾಲೆಗೆ ಸೇರುವಂತೆ ಮಾಡಲು

ಚಟುವಟಿಕೆಯನ್ನು ಶಾಲೆ ಕೈಗೊಳ್ಳಬೇಕು. ಹಾಗೂ ವಯಸ್ಕ ಶಿಕ್ಷಣ ಕೇಂದ್ರಗಳನ್ನು ಸಂಘಟಿಸಬೇಕು. ಶಾಲೆಯು ಪಲ್ಸ್‌ಪೋಲಿಯೋ ಮುಂತಾದ ಕಾರ್ಯಕ್ರಮಗಳಿಗಾಗಿ ತನ್ನ ಜಾಗವನ್ನು ಒದಗಿಸಬೇಕು. ಇದೇ ಸಮಯದಲ್ಲಿ ಈ ಕಾರ್ಯಕ್ರಮಗಳಿಗೆ ಶಿಕ್ಷಕರು ಮತ್ತು ವಿದ್ಯಾರ್ಥಿಗಳ ಬೆಂಬಲ ನೀಡಬೇಕು.

- ಸಮಾಜದಲ್ಲಿ ಸಾಮಾಜಿಕ ಹಬ್ಬಗಳ ಸಮಯದಲ್ಲಿ ಅಲಂಕಾರ ಮಾಡಲು ಭಾಗವಹಿಸಬಹುದು.
- ವಿದ್ಯಾರ್ಥಿಗಳು ಶ್ರಮದ ಘನತೆಯನ್ನು ತಿಳಿದುಕೊಳ್ಳುವಂತೆ ಮಾಡುವುದರ ಮೂಲಕ ಶ್ರಮಿಕರಿಗೆ ಗೌರವ ನೀಡುವಂತೆ ಮಾಡುವುದು.
- ಸ್ಥಳೀಯ ಕರಕುಶಲ ವಸ್ತುಗಳ ವಸ್ತುಪ್ರದರ್ಶನವನ್ನು ಸಂಘಟಿಸಲು ಶಾಲೆಯು ಪ್ರಮುಖ ಪಾತ್ರ ವಹಿಸಲೇಬೇಕು.

ಈ ಮೇಲಿನ ಅಂಶಗಳನ್ನು ಉದಾಹರಣೆಯಾಗಿ ನೀಡಲಾಗಿದೆ. ನಿಮ್ಮ ಸಮುದಾಯದ ಅಗತ್ಯತೆಗಳು ನಿಮಗೆ ಚೆನ್ನಾಗಿ ತಿಳಿದಿರುತ್ತದೆ. ಆದ್ದರಿಂದ ನೀವು ಸಮುದಾಯದ ಸಂಪನ್ಮೂಲಗಳನ್ನು ಬಳಸಬಹುದು ಮತ್ತು ಸಮಾಜಕ್ಕಾಗಿ ಯೋಜಿತ ರೀತಿಯಲ್ಲಿ ಕೊಡುಗೆ ನೀಡಬಹುದೆಂದು ನಿರೀಕ್ಷಿಸಬಹುದು.

## 15.3 ಕಾರ್ಯಶಿಕ್ಷಣವನ್ನು ಅನುಷ್ಠಾನಗೊಳಿಸುವಾಗ ಸಮುದಾಯದ ಸಂಪನ್ಮೂಲಗಳ್ನು ಗುರುತಿಸುವುದು ಮತ್ತು ಉಪಯೋಗಿಸುವುದು.

ಶಾಲೆ ಮತ್ತು ಸಮುದಾಯದ ವೈಯುಕ್ತಿಕ ಸಂಬಂಧದ ಬಗ್ಗೆ ಸಮುದಾಯ ಮತ್ತು ಪರಿಸರವನ್ನು ಸಂಪನ್ಮೂಲವಾಗಿ ಗ್ರಹಿಸಿಕೊಳ್ಳುವುದು ಮುಖ್ಯ ಅಂಶವಾಗಿದೆ. ಪಠ್ಯಕ್ರಮ ರಚನೆಗಾಗಿ ಗ್ರಾಮೀಣ ಮತ್ತು ನಗರ ಪರಿಸರ ಮತ್ತು ಸಮುದಾಯವು ಮಹತ್ವದ ಸಂಪನ್ಮೂಲವಾಗಿದೆ.

ಗ್ರಾಮೀಣ ಪರಿಸರದ ದಾರುಣತೆ ಮತ್ತು ಅದರ ನಿರ್ಮಲ ವಿಸ್ತರಣೆಯು ಆಟಗಳು, ಅರಣ್ಯ, ಕೊಳಗಳು, ನದಿಗಳು, ಮರಗಳು, ಹಣ್ಣಿನ ತೋಟಗಳು, ಪಕ್ಷಿಗಳು ಮತ್ತು ಪ್ರಾಣಿಗಳನ್ನು ಒಳಗೊಂಡಿದೆ, ಇದೇ ರೀತಿ ಕಾರ್ಯಮಗ್ನವಾಗಿರುವ ಸಮುದಾಯ ಕೇಂದ್ರಗಳು, ಕೈಗಾರಿಕಾ ಆವರಣಗಳು, ಸಣ್ಣ ಮತ್ತು ದೊಡ್ಡ ವಾಸದ ಮನೆಗಳು, ಕಾಲೋನಿಗಳು, ಮಾರುಕಟ್ಟೆ, ತರಕಾರಿ ಮಾರುಕಟ್ಟೆ, ದನಗಳ ಮನೆ, ಸಾಂಸ್ಕೃತಿಕ ಕೇಂದ್ರ, ಸಂಗೀತ ನೃತ್ಯ ಥಿಯೇಟರ್, ವ್ಯಾಯಾಮ ಕೇಂದ್ರ ಮುಂತಾದ ಈ ಎಲ್ಲಾ ಅಂಶಗಳು ಪಠ್ಯಕ್ರಮಕ್ಕೆ ಸಂಬಂಧವನ್ನೊಂದಿವೆ.

### 15.3.1 ಬೋಧನೆ ಕಲಿಕೆ ಪ್ರಕ್ರಿಯೆಯಲ್ಲಿ ಸಮುದಾಯದ ಸಹಕಾರ

ಪಠ್ಯಕ್ರಮದಲ್ಲಿ ಮಕ್ಕಳ ಪೋಷಕರು ಮಾಡುವ ಕೆಲವು ಕಾರ್ಯಕ್ರಮ ಮತ್ತು ಆಟಗಳಿವೆ. ಕೆಲವು ಪೋಷಕರು ತಮ್ಮ ವಾರ್ಡುಗಳಿಗೆ ಪಠ್ಯಕ್ರಮದ ಅನೇಕ ಭಾಗಗಳಾದ ಭಾಷೆ, ಸಾಮಾಜಿಕ ಅಧ್ಯಯನ ಮತ್ತು ಕಲೆ ಮುಂತಾದವುಗಳಲ್ಲಿ ಬೆಂಬಲ ನೀಡುವ ಸಾಮರ್ಥ್ಯ ಹೊಂದಿರುತ್ತಾರೆ. ಮತ್ತು ಅದಕ್ಕೆ ಅವರು ಹೆಮ್ಮೆ ಪಡುತ್ತಾರೆ. ಪೋಷಕರನ್ನು ಶಿಕ್ಷಣವಂತರನ್ನಾಗಿ ಮಾಡುವುದು ಅವಶ್ಯಕವೇನಲ್ಲ. ಅನಕ್ಷರಸ್ಥ ಪೋಷಕರು ಸಹ ಬೋಧನೆ ಕಲಿಕೆ ಪ್ರಕ್ರಿಯೆಗೆ ಬೆಂಬಲ ನೀಡಬಹುದು. ಹಳ್ಳಿಗಳಲ್ಲಿರುವ ಹಿರಿಯ ಜನರು ಹಳ್ಳಿಯ ಬಗ್ಗೆ ಐತಿಹಾಸಿಕವಾಗಿ ಮಹತ್ವದ ಮತ್ತು ಮಹತ್ವವಲ್ಲದ ವಿಷಯಗಳನ್ನು ಹೇಳುವ ಸಾಮರ್ಥ್ಯವನ್ನು ಹೊಂದಿದ್ದಾರೆ. ಅದೇ ರೀತಿ ಹಳ್ಳಿಯ ಕುಂಬಾರ, ಬಡಗಿ ಮತ್ತಿತ್ತರ ಕುಶಲಕರ್ಮಿಗಳು ಮಕ್ಕಳಿಗೆ ಸುಂದರವಾಗಿ ಕಾಣುವ ವಸ್ತುಗಳನ್ನು ಮಾಡಿಕೊಡುವಲ್ಲಿ ಸಂತೋಷದಿಂದ ಕೆಲಸ ಮಾಡುತ್ತಾರೆ. ಹಳ್ಳಿಯ ಹಿರಿಯರಿಗಿಂತ

ಇವರು ಮಣ್ಣಿನ ಗೊಂಬೆ ಮತ್ತು ಸ್ಥಳೀಯ ಪರಿಸರದ ಬಗ್ಗೆ ಮಾಹಿತಿ ನೀಡುವಲ್ಲಿ ಉತ್ತಮ ಮೂಲವಾಗಿದ್ದಾರೆ.

- ನೀವು ಮಕ್ಕಳನ್ನು ಪ್ರವಾಸಕ್ಕೆ ಕರೆದುಕೊಂಡು ಹೋಗಲು ಬಯಸಿದ್ದೀರಿ. ನೀವು ಒಬ್ಬರೇ ಅವರನ್ನು ಕರೆದುಕೊಂಡು ಹೋಗಲು ಅನಾನುಕೂಲವಾಗುತ್ತದೆ ಎಂದು ಭಾವಿಸಿರಿ. ಈ ಸನ್ನಿನವೇಶದಲ್ಲಿ ನೀವು ಪ್ರವಾಸವನ್ನು ರದ್ದುಗೊಳಿಸುತ್ತೀರಾ ಅಥವಾ ಪೋಷಕರ ಬೆಂಬಲವನ್ನು ಕೋರುತ್ತೀರಾ?
- ಸ್ಥಳೀಯ ಪರಿಸರದಲ್ಲಿ ಅನೇಕ ಗಿಡ ಮತ್ತು ಮರಗಳ ಪರಿಚಯ ನಿಮಗೆ ಇರುವುದಿಲ್ಲ. ಬಹುಶಃ ಇತರ ಶಿಕ್ಷಕರೂ ಅವುಗಳನ್ನು ಗುರುತಿಸುವುದು ಸಾಧ್ಯವಿಲ್ಲ. ಮಕ್ಕಳ ಪೋಷಕರಿಂದ ನೀವು ಮಾಹಿತಿ ಪಡೆಯಲು ಹಿಂಜರಿಯುತ್ತೀರಾ?
- ತಾಯಿ–ತಂದೆ, ಸಹೋದರ–ಸಹೋದರಿ ಅಥವಾ ನಿರ್ದಿಷ್ಟ ಮಗುವಿನ ಇತರ ಸಂಬಂಧಿಗಳು ಸರಳ ಯೋಗ ಚಟುವಟಿಕೆಗಳಲ್ಲಿ ಪರಿಣಿತರಾಗಿದ್ದಾರೆ ಎನ್ನುವುದನ್ನು ಹೇಗೋ ತಿಳಿದುಕೊಂಡಿರುವಿರಿ. ಅವರ ಸಹಾಯವನ್ನು ನೀವು ಪಡೆಯಬಹುದು.
- ಜಾತ್ರೆ–ಹಬ್ಬ ಮುಂತಾದವುಗಳನ್ನು ಸಂಘಟಿಸುವಲ್ಲಿ ಪೋಷಕರ ಪಾತ್ರಕ್ಕೆ ಮಿತಿ ಎನ್ನುವುದೇ ಇರುವುದಿಲ್ಲ. ಸಾಮಾಜಿಕ ಹಿನ್ನಲೆಯನ್ನು ಗಮನದಲ್ಲಿಟ್ಟುಕೊಂಡು ನೀವು ಅವರ ಪಾತ್ರ ಮತ್ತು ಕ್ಷೇತ್ರಗಳನ್ನು ನಿರ್ಧರಿಸಬಹುದು ಮತ್ತು ಅವರ ಕೊಡುಗೆಯ ಮಿತಿಯನ್ನು ನಿರ್ಧರಿಸಿ.

**15.3.2 ಮಕ್ಕಳ ಮತ್ತು ಶಾಲೆಯ ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ಸಮುದಾಯದ ಕೊಡುಗೆ.**

ಸಾಮಾನ್ಯವಾಗಿ 'ಮೌಲ್ಯಮಾಪನ' ಎನ್ನುವ ಪದದ ಅರ್ಥ ಉದ್ದೇಶದ ಮೌಲ್ಯವನ್ನು ಮಾಪನ ಮಾಡುವ ಪ್ರಕ್ರಿಯೆಯಾಗಿದೆ. ಆದರೆ ಶಿಕ್ಷಕರಾಗಿ ನಾವು ಅದರ ತಾಂತ್ರಿಕ ಬೆಂಬಲವನ್ನು ನಿರಾಕರಿಸುವಂತಿಲ್ಲ. ಮಕ್ಕಳು, ಓದು–ಬರಹ ಮತ್ತು ಗಣಿತದಲ್ಲಿ ಎಷ್ಟು ಅಂಕಗಳನ್ನು ಗಳಿಸಿದ್ದಾರೆ, ಅಂದರೆ ಈ ವಿಷಯಗಳಲ್ಲಿ ಅವರು ಏನನ್ನೇ ಬೋಧಿಸಲಿ, ಮಕ್ಕಳು ಅದನ್ನು ಗ್ರಹಿಸುತ್ತಾರೆ. ಎಷ್ಟನ್ನು ಗ್ರಹಿಸುತ್ತಾರೆ ಇದೆಲ್ಲವನ್ನೂ ಮಾತ್ರ ತಿಳಿದುಕೊಳ್ಳುವುದು ಮೌಲ್ಯಮಾಪನ ಪ್ರಕ್ರಿಯೆಯ ಉದ್ದೇಶವಾಗಿದೆ.

ನಿರ್ದಿಷ್ಟವಾಗಿ ಜೀವನದಲ್ಲಿ ಜೀವಿಸುವ ಕಲೆಯು ಸಾಂಪ್ರದಾಯಿಕ ಮೌಲ್ಯಮಾಪನ ರೂಪಕ್ಕಿಂತ ಭಿನ್ನವಾಗಿದೆ ಹಾಗೂ ವಿಸ್ತೃತವಾಗಿದೆ. ಮೌಲ್ಯಮಾಪನದ ಉದ್ದೇಶ ಕೇವಲ ವಿವಿಧ ವಿಷಯಗಳಲ್ಲಿ ಮಾಹಿತಯನ್ನು ಕಲೆ ಹಾಕುವುದು ಮಾತ್ರವಲ್ಲ ಆದರೆ ಅವರ ವ್ಯಕ್ತಿತ್ವದ ಬಹು ವಿಸ್ತೀರ್ಣದ ಆಯಾಮಗಳ ಬಗ್ಗೆ ಜ್ಞಾನವನ್ನು ಪಡೆಯುವುದಾಗಿದೆ. ಇದರ ಆಧಾರದ ಮೇಲೆ ವ್ಯಕ್ತಿಯ ಅಗತ್ಯತೆಗಳನ್ನು ಗಮನದಲ್ಲಿಟ್ಟುಕೊಂಡು ನಾವು ಸಮುದಾಯ ಚಟುವಟಿಕೆಗಳನ್ನು ಸಂಘಟಿಸಬೇಕು. ಈ ರೀತಿಯ ಮೌಲ್ಯಮಾಪನದಲ್ಲಿ ಕುಟುಂಬದ ಸಹಾಯ ಬೇಕಾಗುತ್ತದೆ ಏಕೆಂದರೆ, ಮಗುವಿನ ವರ್ತನೆಯಲ್ಲಿ ಏನಾದರೂ ಬದಲಾವಣೆ ಉಂಟಾಗಿದೆಯೇ ಎನ್ನುವುದನ್ನು ನಾವು ಗ್ರಹಿಸಬೇಕಾಗುತ್ತದೆ. ಮಗು ತನ್ನ ವಸ್ತುಗಳನ್ನು ಸರಿಯಾಗಿ ಇಟ್ಟುಕೊಂಡಿದ್ದಾನೆಯೇ ಮತ್ತು ಸ್ವಚ್ಛತೆಯನ್ನು ಕಾಪಾಡಿ ಕೊಂಡಿದ್ದಾನೆಯೇ ಅವನು ಹಿರಿಯರನ್ನು ಗೌರವಿಸುತ್ತಾನೆಯೇ. ಅವನು ತನ್ನ ಸ್ನೇಹಿತರಿಗೆ ನೆರೆಹೊರೆಯವರಿಗೆ ಹಳ್ಳಿಯಲ್ಲಿರುವ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡುತ್ತಾನೆಯೇ? ನಾವು ಈ ಎಲ್ಲಾ ಮಾಹಿತಿಯನ್ನು ಮಕ್ಕಳ ತಂದೆ–ತಾಯಿಯರು, ಪೋಷಕರು ಅಥವಾ ನೆರೆಹೊರೆಯವರಿಂದ ಪಡೆದುಕೊಳ್ಳುತ್ತೇವೆ. ನಾವು ಮಾಹಿತಿಯನ್ನು ಪಡೆಯಲು

ಹಿಂಜರಿಯಬಾರದು. ಅಲ್ಲದೇ ಅವರು ನೀಡುವ ಮಾಹಿತಿಯನ್ನು ಸಂದೇಹದಿಂದ ನೋಡಬಾರದು.

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿ – 1

1. ಸಮುದಾಯವನ್ನು ವ್ಯಾಖ್ಯಾನಿಸಿ.
   –––––––––––––––––––––––––––––––––––––––––––––––––
   ––––––––––––––––––––––––––––––––––––––––––––––––––
2. ನಿಮ್ಮ ಶಾಲೆಯ ಸನ್ನಿವೇಶವನ್ನು ಗಮನದಲ್ಲಿಟ್ಟುಕೊಂಡು ಶಾಲೆಯು ಸಮುದಾಯಕ್ಕೆ ನೀಡುವ ಕೊಡುಗೆಯನ್ನು ತಿಳಿಸಿ.

3. ಕಾರ್ಯಶಿಕ್ಷಣಕ್ಕೆ ಸಂಬಂಧಿಸಿದಂತೆ ನಗರದ ಸುತ್ತ ಮುತ್ತ ಲಭ್ಯವಿರುವ ಕೆಲವು ಸಂಪನ್ಮೂಲಗಳನ್ನು ಗುರುತಿಸಿ.

## 15.4 ಕಾರ್ಯಶಿಕ್ಷಣದ ಮಹತ್ವಕ್ಕೆ ಸಂಬಂಧಿಸಿದಂತೆ ಪೋಷಕರು ಮತ್ತು ಸಮುದಾಯಕ್ಕೆ ಅಭಿವಿನ್ಯಾಸ ಕಾರ್ಯಕ್ರಮಗಳ ಸಂಘಟನೆ.

ಕಾರ್ಯಶಿಕ್ಷಣದ ಟೈಮ್ ಟೇಬಲ್‌ನಲ್ಲಿ ಸೂಕ್ತ ಸಮಯವನ್ನು ಗೊತ್ತು ಪಡಿಸುವುದನ್ನು ನಾವು ಆಗಿದ್ದಾಂಗ್ಗೆ ಕಾಣುತ್ತೇವೆ. ಆದರೆ ಪ್ರಾಯೋಗಿಕವಾಗಿ ಅವಧಿಯನ್ನು ಬೇರೆ ವಿಷಯಗಳಿಗೆ ನಿಗದಿಯಾಗಿರುತ್ತದೆ. ಗಣಿತ ಮತ್ತು ವಿಜ್ಞಾನದ ಪಠ್ಯಕ್ರಮ ಹೆಚ್ಚಾಗಿದೆ ಎಂದು ವಾದಿಸುವುದುಂಟು. ಈ ವಿಷಯಗಳೂ ಮುಖ್ಯವಾಗಿವೆ. ಆದರೆ ಸಾಪೇಕ್ಷವಾಗಿ ಕಷ್ಟವಾಗಿವೆ. ಆದ್ದರಿಂದ ಈ ವಿಷಯಗಳಿಗೆ ಹೆಚ್ಚು ಸಮಯ ನೀಡಬೇಕಾಗುತ್ತದೆ.

ಬೇರೆ ವಿಷಯಗಳಿಗೆ ಹೋಲಿಸಿದಂತೆ ಕಾರ್ಯಶಿಕ್ಷಣ ಕಡಿಮೆ ಮಹತ್ವದೆಂದು ಪರಿಗಣಿಸುತ್ತದೆಂದು ಈ ವಾದ ಸ್ಪಷ್ಟ ಪಡಿಸುತ್ತದೆ. ಈ ವಾದದ ಹಿಂದೆ ಯಾವ ರೀತಿಯ ಸ್ವಭಾವವಿದೆ ಎಂದು ನೀವು ತಿಳಿದು ಕೊಂಡಿರುವಿರಾ? ಒಂದು ವೇಳೆ ಈ ವಿಷಯವನ್ನು ಶಾಲಾ ಆಡಳಿತಕ್ಕೆ ಜೋಡಿಸಿದಾಗ ಸಮುದಾಯವೂ ಒಂದಲ್ಲ ಒಂದು ರೀತಿಯಲ್ಲಿ ಜವಾಬ್ದಾರನಾಗಿರುತ್ತದೆ. ಇದನ್ನು ವಿಶ್ಲೇಷಿಸಿದಾಗ ಶಿಕ್ಷಕರ ಜೊತೆಗೆ ಪೋಷಕರ ಮನೋಧೋರಣೆ ತುಂಬಾ ನಿರಾಶದಾಯಕವಾಗಿದೆ. ಅವರ ವಾದವೆಂದರೆ–

ಒಂದು ವೇಳೆ ಮನೆಯಲ್ಲೇ ಮಕ್ಕಳು ಕಾರ್ಯಶಿಕ್ಷಣದ ಕೆಲಸವನ್ನು ನಿರ್ವಹಿಸಿದರೆ ಶಾಲೆಯಲ್ಲಿ ವಿದ್ಯಾರ್ಥಿಗಳ ಮೌಲ್ಯಯುತ ಸಮಯವನ್ನು ಏಕೆ ವ್ಯರ್ಥಮಾಡಬೇಕು. ಶಾಲೆಯು ಬೊಧನೆ ಮತ್ತು ಕಲಿಕೆಗೆ ಹೆಚ್ಚು ಮಹತ್ವ ನೀಡಬೇಕು.

ಬಹುಶಃ ಪೋಷಕರಿಗೆ ಬೋಧನೆ ಕಲಿಕೆ ಪ್ರಕ್ರಿಯೆ ಬಗ್ಗೆ ಅರಿವಿರದಿರಬಹುದು ಹಾಗೂ ಅವರು ಪುಸ್ತಕದ ಜ್ಞಾನವನ್ನು ನೈಜ ಜ್ಞಾನವೆಂದು ಪರಿಗಣಿಸಿರಬಹುದು. ಇಂಥ ಸಂದರ್ಭದಲ್ಲಿ ಕಾರ್ಯಶಿಕ್ಷಣದ ಶಿಕ್ಷಕ ಔಪಚಾರಿಕವಾಗಿ ಅಭಿವಿನ್ಯಾಸ ಕಾರ್ಯಕ್ರಮವನ್ನು ಸಂಘಟಿಸಿ ಅವುಗಳ ಮುಖಾಂತರ ಕಾರ್ಯಶಿಕ್ಷಣದ ಮಹತ್ವವನ್ನು ತಿಳಿಸುವುದು ಅವನ ಕರ್ತವ್ಯವಾಗಿದೆ.

ಯಾವುದೇ ಶೈಕ್ಷಣಿಕ ಅವಧಿಯಲ್ಲಿ ಕೆಳಗಿನ ಸ್ಥಿತಿಯನ್ನು ನಿರ್ಮಾಣ ಕಾರ್ಯಕ್ರಮಗಳಿಗೆ ಗುರುತು ಮಾಡಬಹುದು.

- PTA ಸಭೆಗಳು – ಪೋಷಕರು ಮತ್ತು ಶಿಕ್ಷಕರ ಸಂಘಗಳು ಗ್ರಾಮೀಣ ಮತ್ತು ನಗರ ಪರಿಸರದ ಶಾಲೆಗಳಲ್ಲಿ ರೂಪುಗೊಂಡಿವೆ. ಈ ಸಂಘ ನಿಯಮಿತವಾಗಿ ಸಭೆಗಳನ್ನು ನಡೆಸುತ್ತದೆ. ಇತರ ಮುಖ್ಯ ಅಂಶಗಳೊಂದಿಗೆ ಕಾರ್ಯಶಿಕ್ಷಣದ ಪ್ರಮುಖ್ಯತೆಯನ್ನು ಸಹ ಚರ್ಚಿಸಬಹುದು.
- ಪೋಷಕರು ಶಿಕ್ಷಕರ ಸಭೆ – ಪೋಷಕರಿಗೆ ವಿದ್ಯಾರ್ಥಿಗಳ ವಿವರವಾದ ಪ್ರಗತಿಯನ್ನು ನಿರಂತರವಾಗಿ ತಿಳಿಸಲು ಪೋಷಕರನ್ನು ನಿರ್ದಿಷ್ಠ ಶಾಲೆಯಲ್ಲಿ ನಿರ್ದಿಷ್ಟ ಸಮಯಕ್ಕೆ ಆಹ್ವಾನಿಸುತ್ತಾರೆ. ಈ ಸಭೆಗಳಲ್ಲಿ ವಿದ್ಯಾರ್ಥಿಗಳ ನಡವಳಿಕೆ ಬಗ್ಗೆ ವಿಶೇಷವಾಗಿ ಮಕ್ಕಳ ಬುದ್ದಿವಂತಿಕೆ, ಸಾಧನೆ ಮತ್ತು ಪ್ರಗತಿಯನ್ನು ಪೋಷಕರಿಗೆ ತಿಳಿಸಲಾಗುತ್ತದೆ. ಶಿಕ್ಷಕರು ಕಾರ್ಯಶಿಕ್ಷಣ ಪರಿಭಾವನೆ ಮತ್ತು ಅದರ ಅವಶ್ಯಕತೆಯನ್ನು ತಿಳಿಸುತ್ತಾರೆ. ಕಾರ್ಯಶಿಕ್ಷಣದ ನೈಜ ಅರ್ಥವನ್ನು ಪರಿಚಯಿಸಲು ಕಾರ್ಯಶಿಕ್ಷಣದ ಬಗ್ಗೆ ಪೋಷಕರಿಗಿರುವ ಋಣಾತ್ಮಕ ಮನೋಧೋರಣೆಯನ್ನು ಶಿಕ್ಷಕರು ಬದಲಾಯಿಸುತ್ತಾರೆ.
- ತಾಯಂದಿರ ಕ್ಲಬ್‌ನ ಸಭೆ – ಅನೇಕ ಶಾಲೆಗಳಲ್ಲಿ ತಾಯಂದಿರಿಗಾಗಿ ಸಭೆಯನ್ನು ಏರ್ಪಡಿಸಲಾಗುತ್ತದೆ. ತಂದೆಗಳಿಗಿಂತ ತಾಯಂದಿರುಗಳು ಮಕ್ಕಳನ್ನು ಶಾಲೆಗೆ ಬಿಡುವುದು. ಶಾಲೆಯಿಂದ ಕರೆದುಕೊಂಡು ಹೋಗುವುದು, ಮಕ್ಕಳಿಗೆ ಮಧ್ಯಾಹ್ನದ ಊಟ ನೀಡುವುದನ್ನು ನಿರ್ವಹಿಸುತ್ತಿರುತ್ತಾರೆ. ಮನೆಯಲ್ಲಿಯೂ ತಾಯಂದಿರು ಅವರ ಮಕ್ಕಳ ಬಗ್ಗೆ ಹೆಚ್ಚು ಗಮನ ನೀಡುತ್ತಾರೆ. ತಾಯಂದಿರು ಮಕ್ಕಳ ಶಿಕ್ಷಣದ ಬಗ್ಗೆ ನಿರಂತರವಾಗಿ ತೊಡಗಿರುವುದರಿಂದ ತಾಯಂದಿರ ಕ್ಲಬ್ ರೂಪಿಸುವುದರಿಂದ ಮತ್ತು ಅವರೊಂದಿಗೆ ಶಿಕ್ಷಣಕ್ಕೆ ಸಂಬಂಧಿಸಿದಂತೆ ಚರ್ಚಿಸುವುದರ ಮೂಲಕ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಲು ಪ್ರಯತ್ನಿಸುತ್ತಾರೆ. ತಾಯಂದಿರ ಕ್ಲಬ್‌ಗಳ ಮುಖಾಂತರ ಕಾರ್ಯಶಿಕ್ಷಣದ ಮಹತ್ವವನ್ನು ಪರಿಚಯ ಮಾಡಿಕೊಡಬಹುದು. ಒಂದು ವೇಳೆ ಶಾಲೆಯಲ್ಲಿ ತಾಯಂದಿರ ಕ್ಲಬ್‌ಗೆ ಬದಲಾಗಿ ತಂದೆಯವರ ಕ್ಲಬ್‌ನ್ನು ರೂಪಿಸಿದರೆ ಅದರ ಮೂಲಕ ತನ್ನ ಗುರಿಗಳನ್ನು ಸಾಧಿಸಿಕೊಳ್ಳಬಹುದು.
- ಗೃಹ ಭೇಟಿ – ಸಾಮಾನ್ಯವಾಗಿ ಸಣ್ಣ 8 ನಗರಗಳಲ್ಲಿ ಮತ್ತು ಏಕ ಶಾಲೆಯಲ್ಲಿ ಶಿಕ್ಷಕರು ಗೃಹ ಭೇಟಿಯ ಮುಖಾಂತರ ಮಕ್ಕಳ ಪ್ರಗತಿಯನ್ನು ತಿಳಿಸುತ್ತಾರೆ. ಮೆಟ್ರೋಪಾಲಿಟನ್ ನಗರಗಳ ಪರಿಸರದಲ್ಲಿ ಇಂಥ ಸಂಪರ್ಕ ಅಪರೂಪಕ್ಕೊಮ್ಮೆ ನಡೆಯುತ್ತದೆ. ಪೋಷಕರಿಗೆ ಕಾರ್ಯಶಿಕ್ಷಣದ ಮಹತ್ವವನ್ನು ಇತರ ಮುಖ್ಯಾಂಶಗಳೊಂದಿಗೆ ತಿಳಿಸಲಾಗುತ್ತದೆ.
- ಅನೌಪಚಾರಿಕ ಸಭೆಗಳು – ಕೆಲವು ಶಿಕ್ಷಕರು ಶಾಲೆಗೆ ಹತ್ತಿರವಿರುವ ಸಮುದಾಯಕ್ಕೆ ಸೇರಿರುತ್ತಾರೆ. ಆನಂತರ ಅವರು ತಮ್ಮ ಆಲೋಚನೆಯನ್ನು ಸಭೆಯಲ್ಲಿ ಅನೌಪಚಾರಿಕ ಸಭೆಯಲ್ಲಿ ತಿಳಿಸುತ್ತಾರೆ. ಈ ಸಂಪರ್ಕ ಎಷ್ಟು ದೃಢವಾಗಿರುತ್ತದೆಯೆಂದರೆ, ಪೋಷಕರಿಗೆ ಕಾರ್ಯಶಿಕ್ಷಣದ ಮಹತ್ವವನ್ನು ಅರ್ಥ ಮಾಡಿಸಿಕೊಡುವಲ್ಲಿ ದೃಢವಾಗಿದೆ.

## 15.5 ಸಮಾಪ್ತಿಗೊಳಿಸೋಣ:

ಈ ಘಟಕದಲ್ಲಿ ಶಾಲೆ ಮತ್ತು ಸಮುದಾಯಗಳ ನಡುವಿನ ಅಂತರ ಅವಲಂಬನೆಯನ್ನು ತಿಳಿದುಕೊಂಡಿರುವಿರಿ. ಶಾಲೆಯ ಚಟುವಟಿಕೆಗಳನ್ನು ಗುರುತಿಸಲು ಸಮುದಾಯದ ವ್ಯಾಖ್ಯೆ ಮತ್ತು ಸಮುದಾಯದ ಪಾಲುಗಾರಿಕೆಯ ಬಗ್ಗೆ ನೀವು ತಿಳುವಳಿಕೆಯನ್ನು ಬೆಳೆಸಿಕೊಂಡಿರುವಿರಿ.

ಗ್ರಾಮೀಣ ಮತ್ತು ನಗರ ಪರಿಸರದಲ್ಲಿ ಅನೇಕ ಸಂಪನ್ಮೂಲಗಳನ್ನು ಕಾರ್ಯಶಿಕ್ಷಣಕ್ಕೆ ಸಂಬಂಧಿಸಿದಂತೆ ಸಂಘಟನೆ, ಸಂಯೋಜನೆ ಮತ್ತು ಚಟುವಟಿಕೆಗಳ ವಿಸ್ತಾರಕ್ಕೆ ಬಳಸಬಹುದು. ನೀವು ಗುರುತಿಸಿರುವ ಕುಶಲಕರ್ಮಿಗಳು, ಮಾನವ ಸಂಪನ್ಮೂಲಗಳನ್ನು ಶಾಲೆಗೆ ಆಹ್ವಾನಿಸಬಹುದು.

ಈ ಘಟಕದ ಮುಖಾಂತರ ಕಾರ್ಯಶಿಕ್ಷಣವನ್ನು ವರ್ಧಿಸಲು ತಿಳುವಳಿಕೆಯನ್ನು ಅಭಿವೃದ್ಧಿ ಪಡಿಸಲಾಗಿದೆ.

## 15.6 ಪರಾಮರ್ಶನ ಗ್ರಂಥಗಳು:


- India's craft Tradition – (1980) Kamala Devi Chattopadhyaya.
- Craft in Education (1962) Hansraj Bhatia Asia Pubkishing House Bombay.
- Totto Chan Tetsakee Kurayanagoe (Translation purva yagyik kushwaha) National Book Trust India.
- Minimum Resources, Maximum usage (thora sadhan Ghana Prayog – Viksam a Surabhai community science centre, Ahmedabad.)
- Diva swapna, Giju Bhai (Translation: Suruj prakash/prakash sansthan, New Dehli)
- Bal Bhawan Society Annual Report (1985)
- Pleasures of learning / seekhne ka Anand) A.Sarabhar, community science centre, Ahmedabad
- Harijan, Mahatma Gandhi, Nanjuvan prakashan mandir, new Dehli.


## 15.7. ಈ ಘಟಕದ ಪ್ರಶ್ನೆಗಳು

1. ಗ್ರಾಮೀಣ ಪರಿಸರದಲ್ಲಿ ತಮ್ಮ ಮಕ್ಕಳ ಕಾರ್ಯಶಿಕ್ಷಣದ ಬಗ್ಗೆ ಮತ್ತು ಕಾರ್ಯಶಿಕ್ಷಣಕ್ಕೆ ಸಂಬಂಧಿಸಿದಂತೆ ಶಿಕ್ಷಕರಾಗಿ ತಾವು ಯಾವ ರೀತಿ ಪ್ರಯತ್ನ ಮಾಡುವಿರಿ.

2. ಕಾರ್ಯಶಿಕ್ಷಣವನ್ನು ವೃದ್ಧಿಸಲು ಪೋಷಕರೊಂದಿಗೆ ತಿಳಿಸಲು ಯಾವ ವಿಧಾನದ ಮೂಲಕ ನೀವು ಸಂಪರ್ಕಿಸುವಿರಿ.

3. ಕಾರ್ಯ ಶಿಕ್ಷಣದ ಚಟುವಟಿಕೆಗಳ ಬಗ್ಗೆ ಪೋಷಕರು ಋಣಾತ್ಮಕ ಮನೋಧೋರಣೆಯನ್ನು ಹೊಂದಿರುತ್ತಾರೆ. ಅವರ ಮನೋಧೋರಣೆಯನ್ನು ಬದಲಾಯಿಸಲು ನೀವು ಯಾವ ಅಂಶಗಳನ್ನು ಕೇಳುವಿರಿ? ಯಾವುದಾದರೂ ನಾಲ್ಕು ಅಂಶಗಳನ್ನು ತಿಳಿಸಿ.

4. ನಿಮ್ಮ ವಿದ್ಯಾರ್ಥಿಗಳ ಪೋಷಕರು ಸೂತ್ರದ ಗೊಂಬೆಯ ಕಲಾವಿದರಾಗಿದ್ದಾರೆ. ಅವರ ಕೊಡುಗೆಯನ್ನು ಶಾಲೆ ಯಾವ ರೀತಿ ಪಡೆದುಕೊಳ್ಳುತ್ತದೆ.

## ಘಟಕ 16
## ಕಾರ್ಯಶಿಕ್ಷಣದಲ್ಲಿ ಮೌಲ್ಯಮಾಪನ

ರಚನೆ

16.0 ಪರಿಚಯ

16.1 ಕಲಿಕೆಯ ಉದ್ದೇಶಗಳು

16.2 ಮೌಲ್ಯಮಾಪನ ಎಂದರೇನು?
- 16.2.1 ಮಾಪನ ಮತ್ತು ಮೌಲ್ಯಮಾಪನ
- 16.2.2 ನಿರಂತರ ಮತ್ತು ಸಮಗ್ರ ಮೌಲ್ಯಮಾಪನ

16.3 ಮೌಲ್ಯಮಾಪನ ಪರಿಕರಗಳು ಮತ್ತು ವಿಧಾನಗಳು

16.3.1 ಅವಲೋಕನ

16.3.2 ಸಂದರ್ಶನ

16.3.3 ಚೆಕ್ ಲಿಸ್ಟ್

16.3.4 ಒಟ್ಟುಗೂಡಿಸಿದ ದಾಖಲೆಗಳು

16.3.5 ಪ್ರಶ್ನಾವಳಿ

16.3.6 ಪೋಟೋಗಳು / ಪೋರ್ಟ್‌ಪೊಲಿಯೋ

16.4 ಮಾಪನದಲ್ಲಿ ಸಹಪಾಠಿಗಳ ಪಾತ್ರ

16.5 ಮಾಪನದಲ್ಲಿ ತಂದೆ-ತಾಯಿಯರ ಪಾತ್ರ

16.6 ಪೋಷಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಅವರ ಪ್ರಗತಿಯನ್ನು ಯಾವ ರೀತಿ ತಿಳಿಸುವುದು.

16.6.1 ಸಂಪರ್ಕದ ಸಾಧನಗಳು

16.6.2 ಸಂಪರ್ಕದ ಬಿಂದುಗಳು

16.7 ಸಮಾಪ್ತಿಗೊಳಿಸೋಣ

16.8 ಅಧ್ಯಯನ ಮತ್ತು ಪರಮಾರ್ಶನ ಸಲಹೆಗಳು

16.9 ಘಟಕ ಅಂತ್ಯದ ಪ್ರಶ್ನೆಗಳು

### 16.0 ಪರಿಚಯ

ಔಪಚಾರಿಕ ಶಾಲೆಯಾಗಿರಲಿ ಅಥವಾ ಅನೌಪಚಾರಿಕ ಶಿಕ್ಷಣವಾಗಿರಲಿ ಎರಡೂ ವ್ಯವಸ್ಥೆಯಲ್ಲೂ ಬೋಧನೆ ಮತ್ತು ಕಲಿಕೆ ಪ್ರಕ್ರಿಯೆಗಳ ಜೊತೆಗೆ ಮತ್ತೊಂದು ಚಟುವಟಿಕೆ ಮಹತ್ವ ಪಡೆದುಕೊಂಡಿದೆ.

ಅದೇನೆಂದರೆ ಪರೀಕ್ಷೆ– ಮಾಪನ (Assessment) ಮತ್ತು ಮೌಲ್ಯಮಾಪನ (Evaluation) ಮಾಡುವ ಪ್ರಕ್ರಿಯೆ. ಮೌಲ್ಯಮಾಪನ ಪ್ರಕ್ರಿಯೆ ಎಷ್ಟು ಪ್ರಾಮುಖ್ಯ ಎನ್ನುವುದನ್ನು ಬೋಧನೆ, ಕಲಿಕೆ ಪ್ರಕ್ರಿಯೆ, ಶಿಕ್ಷಕರು, ವಿದ್ಯಾರ್ಥಿಗಳ ದಿನಚರಿ ಮತ್ತು ಕಾರ್ಯಕ್ರಮಗಳು ದಿನಾಂಕಗಳು, ಮತ್ತು ಪರೀಕ್ಷೆಯ ಮಾದರಿಗಳಿಂದ ನಿರ್ಧರಿಸಲ್ಪಡುತ್ತದೆ. ಇದು ವಿಶೇಷವಾಗಿ X ಮತ್ತು XIIನೇ ತರಗತಿಗಳ ಪರೀಕ್ಷೆಗಳಿಗೆ ಅನ್ವಯವಾಗುತ್ತದೆ. ನೀವು ಈ ಮಾದರಿಯ ಮೌಲ್ಯಮಾಪನದ ಬಗ್ಗೆ ಕೇಳುವಿರಾ?

ಈ ಘಟಕದಲ್ಲಿ ಮಾಪನ ಮತ್ತು ಮೌಲ್ಯಮಾಪನ ಪರಿಭಾವನೆಗಳನ್ನು ವರ್ಗೀಕರಿಸಲಾಗಿದೆ ಮತ್ತು ಅವುಗಳ ನಡುವಿನ ವ್ಯತ್ಯಾಸವನ್ನು ಗುರುತಿಸಲಾಗಿದೆ. ನಿರಂತರ ಮತ್ತು ಸಮಗ್ರ ಮೌಲ್ಯಮಾಪನ ಪ್ರಕ್ರಿಯೆಯನ್ನು ಶಾಲಾ ಶಿಕ್ಷಣದ ವಿವಿಧ ಹಂತಗಳಲ್ಲಿ ವಿವರಿಸಲಾಗಿದೆ ಹಾಗೂ ಅವುಗಳನ್ನು ಬಳಸುವಾಗ ಯಾವ ಎಚ್ಚರಿಕೆಯನ್ನು ಗಮನದಲ್ಲಿಟ್ಟುಕೊಳ್ಳಬೇಕು ಎನ್ನುವುದನ್ನೂ ಈ ಘಟಕದಲ್ಲಿ ವರದಿ ಮಾಡಲಾಗಿದೆ. ಈ ಘಟಕದ ಮುಖಾಂತರ ಅವಲೋಕನದ ಆಧಾರದ ಮೇಲೆ ವಿದ್ಯಾರ್ಥಿಯ ಪ್ರಗತಿಯನ್ನು ಹೇಗೆ ಅಳತೆ ಮಾಡಲಾಗುತ್ತದೆ ಹಾಗೂ ಅದನ್ನು ಹೇಗೆ ದಾಖಲಿಸಬಹುದು ಎನ್ನುವುದನ್ನೂ ತಿಳಿದುಕೊಳ್ಳುವಿರಿ. ಶಿಕ್ಷಕರ ಸಹಪಾಠಿಗಳ, ತಂದೆತಾಯಿಯರ ಮತ್ತು ತಾನೇ ಮೌಲ್ಯಮಾಪನ ಮಾಡಿಕೊಳ್ಳುವುದರ ಮಹತ್ವವನ್ನು ಚರ್ಚಿಸಲಾಗಿದೆ. ಈ ಘಟಕ ಮೌಲ್ಯಮಾಪನಕ್ಕೆ ಸಂಬಂಧಿಸಿದ ಎಲ್ಲಾ ಅಂಶಗಳನ್ನು ಪರಿಚಯಿಸುತ್ತದೆ.

## 16.1 ಕಲಿಕೆಯ ಉದ್ದೇಶಗಳು

ಈ ಘಟಕವನ್ನು ಅಧ್ಯಯನ ಮಾಡಿದ ನಂತರ ನೀವು ತಿಳಿದುಕೊಳ್ಳುವುದೇನೆಂದರೆ:

1. ಶೈಕ್ಷಣಿಕ ಪ್ರಕ್ರಿಯೆಯಲ್ಲಿ ಮೌಲ್ಯಮಾಪನದ ಮಹತ್ವದ ಪರಿಚಯ.
2. ಮಾಪನ ಮತ್ತು ಮೌಲ್ಯಮಾಪನಗಳ ನಡುವಿನ ವ್ಯತ್ಯಾಸವನ್ನು ಸ್ಪಷ್ಟಪಡಿಸಲು ಶಕ್ತರಾಗುವುದು.
3. ಮೌಲ್ಯಮಾಪನ ಅವಶ್ಯಕ ಉಪಕರಣ ಮತ್ತು ತಂತ್ರಗಳನ್ನು ಗುರುತಿಸಲು ಶಕ್ತರಾಗುವುದು.
4. ಕಾರ್ಯಶಿಕ್ಷಣ ಪ್ರಕ್ರಿಯೆಯಲ್ಲಿ ಮೌಲ್ಯಮಾಪನದ ಪ್ರಕಾರಗಳನ್ನು ಅರ್ಥಮಾಡಿಕೊಳ್ಳಲು ಶಕ್ತರಾಗುವುದು.
5. ಅವಲೋಕನದ ಆಧಾರದ ಮೌಲ್ಯಮಾಪನ ಪ್ರಕ್ರಿಯೆಯನ್ನು ಗ್ರಹಿಸಲು ಶಕ್ತರಾಗುವುದು.
6. ಮೌಲ್ಯಮಾಪನ ಪ್ರಕ್ರಿಯೆಗೆ ಸಂಬಂಧಿಸಿದ ಎಲ್ಲಾ ಪಾಲುದಾರರ ಪಾತ್ರವನ್ನು ವಿವರಿಸಲು ಶಕ್ತರಾಗುವುದು

## 16.2 ಮೌಲ್ಯಮಾಪನ ಎಂದರೇನು?

ಮೌಲ್ಯಮಾಪನದ ಅರ್ಥ ಕೆಲವು ಪ್ರಕ್ರಿಯೆ ಅಥವಾ ವಸ್ತುವಿನ ಮೌಲ್ಯಮಾಪನವನ್ನು ನಿರ್ಧರಿಸುವುದಾಗಿದೆ. ಶೈಕ್ಷಣಿಕವಾಗಿ ಮೌಲ್ಯಮಾಪನದ ಅರ್ಥ ಬೋಧನೆ ಮತ್ತು ಕಲಿಕೆ ಪ್ರಕ್ರಿಯೆಗಳಿಂದ ಸೃಷ್ಟಿಯಾದ ಅನುಭವಗಳ ಉಪಯುಕ್ತತೆಯ ಬಗ್ಗೆ ನಿರ್ಧಾರ ನೀಡುವುದು ಎಂದು ಗ್ರಹಿಸಬಹುದು. ಮೌಲ್ಯಮಾಪನವು ಬೋಧನೆ ಮತ್ತು ಕಲಿಕೆ ಪ್ರಕ್ರಿಯೆಯ ಅವಿಭಾಜ್ಯ ಅಂಗವಾಗಿದೆ. ಮೌಲ್ಯಮಾಪನ ಪ್ರಕ್ರಿಯೆ ಮಾರ್ಗದರ್ಶನ ಕ್ರಿಯೆಯನ್ನು ಸುಲಭವಾಗಿಸುತ್ತದೆ. ಯಾವುದೇ ಬೋಧನೆಯ ಮೌಲ್ಯವನ್ನು ವಿದ್ಯಾರ್ಥಿಗಳ ನಡವಳಿಕೆಯ ಬದಲಾವಣೆಯ ಆಧಾರದ ಮೇಲೆ ಅಳೆಯಲಾಗುತ್ತದೆ. ಹಾಗೂ ಈ ನಡವಳಿಕೆಗಳು ಹೇಗೆ ಅಪೇಕ್ಷಿತ ಶೈಕ್ಷಣಿಕ ಉದ್ದೇಶಗಳಿಗನುಗುಣವಾಗಿವೆ ಎನ್ನುವುದನ್ನು ಅಳೆಯಲಾಗುತ್ತದೆ. ಬೋಧನೆ ಮತ್ತು ಮಾಪನಗಳೆರಡೂ ಜೊತೆ ಜೊತೆಯಾಗಿವೆ. ಮೌಲ್ಯಮಾಪನ ಎನ್ನುವುದು ಶಿಕ್ಷಕರು ಮತ್ತು ವಿದ್ಯಾರ್ಥಿಗಳ ಎಲ್ಲಾ ಆಯಾಮಗಳನ್ನು, ತಪ್ಪುಒಪ್ಪುಗಳನ್ನು, ಅಂತರ ಅವಲಂಭನೆ ಮತ್ತು ಉತ್ಪಾದಕತೆಯನ್ನು ವಿವರಿಸುವ ಪ್ರಕ್ರಿಯೆಯಾಗಿದೆ. ಇದರ ಆಧಾರದ ಮೇಲೆ ವಿದ್ಯಾರ್ಥಿಗಳ

ಸಾಧನೆಗಳ ಮೇಲೆ ಅವರ ತಪ್ಪುಒಪ್ಪುಗಳನ್ನು ಮಾತ್ರವಲ್ಲದೇ ಶಿಕ್ಷಕರ, ಶಿಕ್ಷಣ ವಿಧಾನಗಳ, ಪಠ್ಯಪುಸ್ತಕಗಳ, ಇತರ ಶೈಕ್ಷಣಿಕ ಸಂಪನ್ಮೂಲಗಳ ಮತ್ತು ಸಮುದಾಯದ ಸಹಕಾರದ ತಪ್ಪುಒಪ್ಪುಗಳನ್ನು ಅಳೆಯಬೇಕಾಗುತ್ತದೆ. ಹಾಗೂ ಬೋಧನೆ ಮತ್ತು ಕಲಿಕೆ ಪ್ರಕ್ರಿಯೆಯನ್ನು ಕಲಿಕಾದಾರನ ದೃಷ್ಟಿಕೋನದಿಂದ ಹೆಚ್ಚು ಮಹತ್ವ ಪೂರ್ಣ ಮತ್ತು ಉಪಯುಕ್ತವನ್ನಾಗಿ ಮಾಡಬೇಕು. ವಿದ್ಯಾರ್ಥಿಗಳು ಶೈಕ್ಷಣಿಕ ಪ್ರಕ್ರಿಯೆಯಲ್ಲಿ ಕೇಂದ್ರ ಬಿಂದುವಾಗಿದ್ದಾರೆ. ಅವರ ಅಗತ್ಯತೆಗಳು, ಹಿತಾಸಕ್ತಿಗಳು ಮತ್ತು ಮನೋಧೋರಣೆಯನ್ನು ಗಮನದಲ್ಲಿಟ್ಟುಕೊಂಡು ಶಿಕ್ಷಣವನ್ನು ಸಂಘಟಿಸಬೇಕು. ಬೋಧನೆ ಕಲಿಕೆ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಗಳನ್ನು ಕೇಂದ್ರವನ್ನಾಗಿ ಪರಿಗಣಿಸಿ ಶಿಕ್ಷಕ ಪರಿವಿಡಿಯನ್ನು ವಿಶ್ಲೇಷಿಸಿ ಪ್ರಸ್ತುತಪಡಿಸುತ್ತಾನೆ. ಇಂಥ ಅನುಭವ ವಿದ್ಯಾರ್ಥಿಗಳಲ್ಲಿ ಬೋಧನೆಯ ಮೂಲಕ ಹುಟ್ಟುತ್ತದೆ. ಇದು ಅಪೇಕ್ಷಿತ ನಡವಳಿಕೆ ಬದಲಾವಣೆಗೆ ಸೂಕ್ತವಾಗಿದೆ.

ಹನ್ನಾ ಮತ್ತು ಕ್ವೈಲೆನ್ ಪ್ರಕಾರ

"ಮೌಲ್ಯಮಾಪನವು ನಿದರ್ಶನಗಳ ಸಂಗ್ರಹ ಮತ್ತು ಇವುಗಳಿಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳ ವರ್ತನೆಯ ಬದಲಾವಣೆ ಮತ್ತು ವಿವರಣೆಯಾಗಿದೆ."

ಮೇಲೆ ತಿಳಿಸಿದ ವ್ಯಾಖ್ಯೆಯನ್ನು ವಿವರವಾಗಿ ವಿಶ್ಲೇಷಿಸಿದ ನಂತರ ಮೌಲ್ಯಮಾಪನವು ನಿರ್ಧಾರ ಕೈಗೊಳ್ಳುವಿಕೆ ಪ್ರಕ್ರಿಯೆ ಎನ್ನುವುದು ಸ್ಪಷ್ಟವಾಗುತ್ತದೆ. ರಾಸ್ ಮತ್ತು ಸ್ಟಾಂಡ್‌ಬೈರವರು "ಈ ನಿರ್ಧಾರ ಶಿಕ್ಷಣದ ಎಲ್ಲಾ ಮಟ್ಟಗಳಲ್ಲಿರಬೇಕು"

ಮೌಲ್ಯಮಾಪನ ಪ್ರಕ್ರಿಯೆ ಮುಖಾಂತರ ಕೆಳಗಿನ ಅಂಶಗಳನ್ನು ಚರ್ಚಿಸಬಹುದು.

- ತರಗತಿ ಮತ್ತು ಶಾಲೆಗಳಲ್ಲಿ ಕಲಿಕೆ ಪ್ರಕ್ರಿಯೆ ಮುಖಾಂತರ ಉಗಮವಾದ ಅನುಭವಗಳ ಪರಿಣಾಮಕಾರತ್ವ.
- ಪೂರ್ವ ನಿರ್ಧರಿತ ಗುರಿಗಳ ಸಾಧನೆಗಳ ಮಟ್ಟ
- ಗುರಿಗಳನ್ನು ಸಾಧಿಸುವ ಪ್ರಕ್ರಿಯೆ.

ಅವರ ಪ್ರಕಾರ ಶೈಕ್ಷಣಿಕ ಉದ್ದೇಶಗಳು ಮತ್ತು ಕಲಿಕೆ ಮತ್ತು ನಡವಳಿಕೆ ಬದಲಾವಣೆಯಿಂದ ಉತ್ಪತ್ತಿಯಾದ ಅನುಭವಗಳ ನಡುವೆ ನಿಕಟ ಸಂಬಂಧವಿದೆ. ವೈವಿಧ್ಯಮಯ ಅನುಭವ ಸನ್ನಿವೇಶಗಳು, ವಿದ್ಯಾರ್ಥಿಗಳ ಜ್ಞಾನ, ಸೈಕೋಮೀಟರ್ ಮತ್ತು ಪದವಿಗಳನ್ನು ಉತ್ಪತ್ತಿ ಮಾಡುತ್ತದೆ. ಇದು ನಿರ್ದಿಷ್ಟ ಪ್ರಕ್ರಿಯೆ ಮುಖಾಂತರ ನಿರ್ದಿಷ್ಟ ಉದ್ದೇಶವನ್ನು ಸಾಧಿಸುತ್ತದೆ. ಈ ಅಂತರ ವ್ಯಕ್ತೀಯ ಸಂಬಂಧವನ್ನು ಈ ಕೆಳಗೆ ನೀಡಲಾಗಿರುವ ರೇಖಾ ಚಿತ್ರದ ಮುಖಾಂತರ ಅರ್ಥಮಾಡಿಕೊಳ್ಳಬಹುದು.

ಬೋಧನೆಯ ಉದ್ದೇಶಗಳು

ಕಲಿಕೆಯ ಮೂಲಕ ಅನುಭವಗಳನ್ನು ಪಡೆಯುವುದು ಮತ್ತು ಕಲಿಕೆಗೆ ಸ್ಥಿತಿಗಳನ್ನು ಸೃಷ್ಟಿಸುವುದು ನಡವಳಿಕೆಯ ಬದಲಾವಣೆ




ವಿದ್ಯಾರ್ಥಿ ಕಲಿಕೆ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದಾನೆಯೇ ಅಥವಾ ಇಲ್ಲವೋ ಎನ್ನುವುದು ಅವರ ನಡವಳಿಕೆಯ ಮುಖಾಂತರ ಗೋಚರವಾಗುತ್ತದೆ. ಅವರ ಚಿಂತನೆಯ ಮಾರ್ಗ, ಕೆಲಸ ಮಾಡುವ ಪ್ರವೃತ್ತಿ, ಆಸಕ್ತಿ, ಯೋಗ್ಯತೆ ಮುಂತಾದವುಗಳೆಲ್ಲಾ ನಡವಳಿಕೆಯಲ್ಲಿನ ಬದಲಾವಣೆಗಳಾಗಿವೆ. ಈ ಬದಲಾವಣೆ ಸರಳವಾಗಿ ಬಾಹ್ಯವಲ್ಲ ಆದರೆ ಆಂತರಿಕವಾಗಿದೆ. ವಿದ್ಯಾರ್ಥಿಗಳ ಹವ್ಯಾಸಗಳು, ಕೆಲಸದ ವಿನ್ಯಾಸ ಮತ್ತು ಕೆಲಸ ಮಾಡುವ ರೀತಿ ಮುಂತಾದವುಗಳನ್ನು ಬಾಹ್ಯ ಬದಲಾವಣೆಗಳಲ್ಲಿ ಸೇರಿಸಲಾಗಿದೆ. ವಿದ್ಯಾರ್ಥಿಗಳ ಜ್ಞಾನ, ತಿಳುವಳಿಕೆಯ ಬೆಳವಣಿಗೆ, ನಿರ್ಧಾರ ಕೈಗೊಳ್ಳುವಿಕೆ ಸೃಜನಾತ್ಮಕತೆ ಮತ್ತು ವಿಮರ್ಶಾತ್ಮಕ ಚಿಂತನೆಗಳನ್ನು ಆಂತರಿಕ ಬದಲಾವಣೆಗಳಲ್ಲಿ ಸೇರಿಸಲಾಗಿದೆ.

### 16.2.1 ಮಾಪನ ಮತ್ತು ಮೌಲ್ಯಮಾಪನ

ಈ ಘಟಕದ ಪ್ರಾರಂಭದಿಂದ ಮಾಪನ ಮತ್ತು ಮೌಲ್ಯಮಾಪನ ಎನ್ನುವ ಎರಡು ಪದಗಳನ್ನು ಮುಖ್ಯವಾಗಿ ಬಳಸಲಾಗಿದೆ. ಮಾಪನ ಮತ್ತು ಮೌಲ್ಯಮಾಪನ ಈ ಎರಡು ಪದಗಳು ಒಂದೇ ಎಂದು ನೀವು ತಿಳಿದಿರುವಿರಾ? ಇವರೆಡೂ ಒಂದೇ ರೀತಿಯಾಗಿ ಕಂಡುಬಂದರೂ ಇವೆರಡರ ನಡುವೆ ಸಾಕಷ್ಟು ವ್ಯತ್ಯಾಸಗಳಿವೆ. ಮೌಲ್ಯಮಾಪನವು ವ್ಯಕ್ತಿಗಳ ಎಲ್ಲಾ ಆಲೋಚನೆ, ಮನೋಧೋರಣೆ, ನಡವಳಿಕೆ, ನಿರೀಕ್ಷೆಗಳು ಮತ್ತು ತಿಳುವಳಿಕೆಗಳಿಗೆ ಸಂಬಂಧಿಸಿದೆ. ಮಾಪನವು ನಡವಳಿಕೆಯಲ್ಲಿನ ಬದಲಾವಣೆಯ ತನಕ ಸಂಬಂಧಿಸಿದ್ದು ಅದನ್ನು ದಾಖಲಿಸಬಹುದು ಮತ್ತು ಅಳೆಯಬಹುದು. ಮಾಪನದಲ್ಲಿ ಕೆಲವು ಸಮಯದಲ್ಲಿ ಕೆಲವು ಅಂಶಗಳನ್ನು ತಡೆಹಿಡಿಯುತ್ತೇವೆ. ಆದರೆ ಮೌಲ್ಯಮಾಪನದಲ್ಲಿ ವಿವಿಧ ಸಮಯಗಳಲ್ಲಿ ವಿವಿಧ ಅಂಶಗಳ ಆಧಾರದ ಮೇಲೆ ಮಾಪನ ಮಾಡುತ್ತೇವೆ.

ಈ ರೀತಿಯಾಗಿ ಮೌಲ್ಯಮಾಪನವು ಮಾಪನಕ್ಕಿಂತ ಹೆಚ್ಚು ವಿಸ್ತಾರವಾಗಿದೆ. ಶೈಕ್ಷಣಿಕ ಪ್ರಪಂಚದಲ್ಲಿ ಸಾಮಾನ್ಯವಾಗಿ ಮಾಪನ ಮತ್ತು ಮೌಲ್ಯಮಾಪನಗಳನ್ನು ಒಂದೇ ಪ್ರಕ್ರಿಯೆಗೆ ಬಳಸಲಾಗುತ್ತದೆ.

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿ.

1. ನಿಮ್ಮ ದಿನನಿತ್ಯದ ಜೀವನದ ಆಧಾರದ ಮೇಲೆ ನಿಮ್ಮ ಜೀವನದಲ್ಲಿ ಮೌಲ್ಯಮಾಪನ ಹೇಗೆ ಪ್ರಾಮುಖ್ಯತೆಯನ್ನು ಹೊಂದಿದೆ.
   ------
2. ಮಾಪನ ಮತ್ತು ಮೌಲ್ಯಮಾಪನಗಳ ನಡುವಿನ ವ್ಯತ್ಯಾಸವನ್ನು ತಿಳಿಸಿ.
   ----

### 16.2.2. ನಿರಂತರ ಮತ್ತು ವ್ಯಾಪಕ (ಸಮಗ್ರ) ಮೌಲ್ಯಮಾಪನ

ಮೌಲ್ಯಮಾಪನವು ಕಾರ್ಯಶಿಕ್ಷಣ ಕಾರ್ಯಕ್ರಮದಲ್ಲಿ ಶಕ್ತಿಯುತ ಪ್ರೇರಣೆಯ ಮಾರ್ಗವಾಗಿದೆ. ಮೌಲ್ಯಮಾಪನ ಪ್ರಕ್ರಿಯೆಯು ಮಕ್ಕಳು ಕೆಲಸ ಮಾಡುವುದನ್ನು ಕಲಿಯಲು,

ಜ್ಞಾನವನ್ನು ಪಡೆಯಲು ಮತ್ತು ಕಲಿಕೆಗೆ ಮತ್ತು ಅವರಿಗೆ ಕಾರ್ಯ ಪ್ರಕ್ರಿಯೆಯೊಂದಿಗೆ ಅವರಿಗೆ ಪ್ರೋತ್ಸಾಹ ನೀಡುವುದನ್ನು ತಿಳಿಸುತ್ತದೆ. ಇಲ್ಲಿ ಮೌಲ್ಯಮಾಪನದ ಉದ್ದೇಶ ನಿರ್ದಿಷ್ಟ ವಿದ್ಯಾರ್ಥಿ ತೇರ್ಗಡೆಯಾಗಿದ್ದಾನೆ ಅಥವಾ ನಪಾಸಾಗಿದ್ದಾನೆ ಅಥವಾ ಉತ್ತಮ ವರ್ಗಕ್ಕೆ ಸೇರಿದ್ದಾನಾ ಅಥವಾ ಸರಾಸರಿಯಾಗಿದ್ದಾನಾ ಅಥವಾ ಕೆಳವರ್ಗಕ್ಕೆ ಸೇರಿದ್ದಾನಾ ಎನ್ನುವುದನ್ನು ಘೋಷಣೆ ಮಾಡುವುದಾಗಿದೆ. ಆದರೆ ಇದು ವಿದ್ಯಾರ್ಥಿಗಳಿಗೆ ಅವನು ಹೇಗೆ ಕಲಿಯುತ್ತಿದ್ದಾನೆ ಎನ್ನುವುದನ್ನು ತಿಳಿಸುವುದಾಗಿದೆ. ಅವನು ಎಲ್ಲಿಂದ ಕಲಿಕೆ ಪ್ರಕ್ರಿಯೆಯನ್ನು ಬಲಪಡಿಸಬೇಕು, ಎಲ್ಲಿ ಸುಧಾರಿಸಬೇಕು ಮುಂತಾದವುಗಳನ್ನು ತಿಳಿಸುತ್ತದೆ. ಏಕೆಂದರೆ ಕಾರ್ಯಶಿಕ್ಷಣ ಕಾರ್ಯಕ್ರಮದ ಕೇಂದ್ರಬಿಂದು ಉಪಯುಕ್ತ ಜೀವನ ಕೌಶಲ್ಯಗಳನ್ನು ಅಭಿವೃದ್ಧಿ ಪಡಿಸುವುದು, ಸಾಮಾಜಿಕವಾಗಿ ಅಪೇಕ್ಷಿತ ಗುಣಗಳು ಮತ್ತು ಹಿತಾಸಕ್ತಿಗಳು– ಮನೋಧೋರಣೆಗಳನ್ನು ಅಭಿವೃದ್ಧಿಪಡಿಸುವುದಾಗಿದೆ. ಇದರಿಂದ ಅವನು ಸೃಜನಾತ್ಮಕವಾಗಿ ಜೀವನವನ್ನು ಶೀಘ್ರವಾಗಿ ನಡೆಸುವಂತೆ ಹಾಗೂ ಅವನು ಘನತೆಯಿಂದ ಬದುಕುವುದನ್ನು ಕಲಿಯಬಹುದು.

ಮೌಲ್ಯಮಾಪನ ಮಾಡುವಾಗ ಅಂಕಗಳನ್ನು ನೀಡುವುದಕ್ಕೆ ಬದಲಾಗಿ ಗ್ರೇಡ್‌ಗಳ್ನು ನೀಡುವುದು ಸೂಕ್ತ. ಮೌಲ್ಯಮಾಪನವನ್ನು ಶಿಕ್ಷಕ ಆಂತರಿಕವಾಗಿ ಮಾಡಬೇಕೆಂದು ನಿರೀಕ್ಷಿಸಲಾಗಿದೆ. ಮೌಲ್ಯಮಾಪನ ಪ್ರಕ್ರಿಯೆ ಮಾಡುವಾಗ ವಿಷಯವಾರು ಶಿಕ್ಷಕರು, ಇತರ ಶಿಕ್ಷಕರು, ಸಿಬ್ಬಂದಿ ಮತ್ತು ಸಮುದಾಯದ ಅಭಿಪ್ರಾಯಗಳನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಮೌಲ್ಯಮಾಪನದ ಪ್ರಮುಖ ಅಂಶಗಳು ಈ ಕೆಳಗಿನಂತಿವೆ.

- ಮೌಲ್ಯಮಾಪನದ ಫಲಿತಾಂಶವನ್ನು ವಿದ್ಯಾರ್ಥಿಗಳ ಪ್ರಗತಿ ವರದಿಯಲ್ಲಿ ನಮೂದಿಸಬೇಕು.
- ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ಸೈದ್ಧಾಂತಿಕ ಹಾಗೂ ಪ್ರಕ್ರಿಯೆ ಆಯಾಮಗಳನ್ನು ಸಂಯೋಜಿಸಬೇಕು. ಆದರೆ ನೈಜ ಪ್ರಾಯೋಗಿಕ ಕಾರ್ಯದಲ್ಲಿ ಮೌಲ್ಯಮಾಪನಕ್ಕೆ ಹೆಚ್ಚು ಮಹತ್ವ ನೀಡಬೇಕು.
- ಜ್ಞಾನದ ಸಮಾನತೆ ಮತ್ತು ಕೌಶಲ್ಯಗಳನ್ನು ಒತ್ತಿ ಹೇಳಬೇಕಾಗುತ್ತದೆ.
- ಮೌಲ್ಯಮಾಪನ ಪ್ರಕ್ರಿಯೆಯು ಕಲಿಕೆ ಪ್ರಕ್ರಿಯೆಯಂತೆ ಸಂತೋಷದಾಯಕವಾಗಿರಬೇಕು.
- ಮೌಲ್ಯಮಾಪನವು ವಿಕಾಸಮಯವಾಗಿದ್ದು ನಿರಂತರತೆ ಮತ್ತು ಸಾಕಷ್ಟು ವ್ಯಾಪಕತೆಯನ್ನು ಹೊಂದಿರುತ್ತದೆ.
- ಚಟುವಟಿಕೆಗಳಲ್ಲಿ ಮಕ್ಕಳ ಪಾಲ್ಗೊಳ್ಳುವಿಕೆಯ ಅವಲೋಕನವನ್ನು ಮೌಲ್ಯಮಾಪನಕ್ಕೆ ಆಧಾರ ಮಾಡಿರಬೇಕು. ಅವಲೋಕನದ ಜೊತೆ ಕ್ವಿಜ್ ತಂತ್ರವನ್ನು ಬಳಸಬಹುದು.
- ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳ ಪರಿಣಿತಿಯನ್ನು ನಿರ್ಧರಿಸಲು ಮೌಲ್ಯಮಾಪನವು ವಿದ್ಯಾರ್ಥಿಗಳ ತಪ್ಪನ್ನು ಪತ್ತೆಹಚ್ಚುವ ಮತ್ತು ಪರಿಹಾರಾತ್ಮಕ ಸ್ವರೂಪವನ್ನು ಹೊಂದಿದೆ.
- ಆಚಿತರಿಕ ಮೌಲ್ಯಮಾಪನಕ್ಕೆ ಅವಕಾಶ ಮಾಡಿಕೊಡಬೇಕು ಆದರೆ ವಿದ್ಯಾರ್ಥಿಗಳ ಪರಿಕ್ವತೆಯ ಆಧಾರದ ಮೇಲೆ ಬಾಹ್ಯ ಮೌಲ್ಯಮಾಪನವನ್ನು ಅಳವಡಿಸಿಕೊಳ್ಳಬಹುದು. ಈ ಸನ್ನಿವೇಶದಲ್ಲಿ ಮೌಲ್ಯಮಾಪಕರು ಶಾಲೆಚು ಸ್ಥಿತಿ,

ವಿದ್ಯಾರ್ಥಿಯ ಸಾಮಾಜಿಕ ಆರ್ಥಿಕ ಸ್ಥಾನಮಾನ ಮತ್ತು ಚಟುವಟಿಕೆಯ ಉದ್ದೇಶಗಳ ಪರಿಚಯ ಹೊಂದಿರಬೇಕು.

- ಮೌಲ್ಯಮಾಪನದ ಫಲಿತಾಂಶವು ಫೀಡ್‌ಬ್ಯಾಕ್ ನೀಡುವ ಸ್ವರೂಪದ್ದಾಗಿರಬೇಕು ಮತ್ತು ವಿದ್ಯಾರ್ಥಿಗಳಲ್ಲಿ ನಿರಾಶದಾಯಕತೆಯನ್ನು ಸೃಷ್ಟಿಸಕೂಡದು.
- ವಿಶೇಷ ಅಗತ್ಯತೆಗಳೊಂದಿಗೆ ವಿದ್ಯಾರ್ಥಿಗಳ ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ಒಚಿಧು ವೇಳೆ ಬದಲಾವಣೆ ಬೇಕಾದಾಗ ಅವರನ್ನು ಹುರಿದುಂಬಿಸಲು ಮತ್ತು ಪ್ರೇರೆಪಿಸಲು ಬದಲಾವಣೆ ಮಾಡಬೇಕು. ಇದರ ಬದಲಿಗೆ ಅವರಿಗೆ ದಯೆ, ಕನಿಕರ ತೋರಿಸುವಚಿತಿರಬಾರದು.
- ಅಗತ್ಯತೆಗಳಿಗನುಗುಣವಾಗಿ ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ಆಧುನಿಕ ತಂತ್ರಗಳನ್ನು ಬಳಸಲು ಯಾರೊಬ್ಬರೂ ಹಿಂಜರಿಯಬಾರದು.
- ಸ್ವ–ಮೌಲ್ಯಮಾಪನ, ಪೀರ್‌ಮೌಲ್ಯಮಾಪನ ಮತ್ತು ಗುಂಪು ಮೌಲ್ಯಮಾಪನ / ಮಾಪನ (ವಿಶೇಷವಾಗಿ ಪೋಷಕರಿಗೆ ಮತ್ತು ಸಂಪರ್ಕದಲ್ಲಿರುವ ಜನರು) ವನ್ನು ಮೌಲ್ಯಮಾಪನ ಪ್ರಕ್ರಿಯೆಯ ಭಾಗವಾಗಿ ಮಾಡಬೇಕು.
- ನಿಧಾನವಾಗಿ ಕಲಿಯುವ, ಮಧ್ಯಮವಾಗಿ ಕಲಿಯುವ ಮತ್ತು ವೇಗವಾಗಿ ಕಲಿಯುವ ಕಲಿಕ್ಫದಾರರಿಗೆ ಬೇರೆ ಬೇರೆ ರೀತಿಯ ಮೌಲ್ಯಮಾಪನ ವಿಧಾನಗಳಿರಬೇಕು.
- ಅಚಿತಿಮವಾಗಿ ಕಲಿಕಾದಾರರ ಸಾಮರ್ಥ್ಯಗಳು, ಸಂಪನ್ಮೂಲಗಳ ಲಭ್ಯತೆ, ಪ್ರಾರಂಭಿಕ ವರ್ತನೆ, ಶಾಲೆಚು ಪರಿಸರ, ಸಾಧಿಸಬಹುದಾದ ಉದ್ದೇಶಗಳು, ಪಠ್ಯಕ್ರಮದ ಸ್ವರೂಪ ಮತ್ತು ಶಿಕ್ಷಕರಿಂದ ಪ್ರೋತ್ಸಾಹಗಳನ್ನು ಮೌಲ್ಯಮಾಪನದ ಸಮಯದಲ್ಲಿ ಗಮನದಲ್ಲಿಟ್ಟುಕೊಳ್ಳಬೇಕು.

ನಿಮ್ಮ ಪಗ್ರತಿಯನ್ನು ಪರೀಕ್ಷಿಸಿ–2

1. ಇತರೆ ವಿಷಯಗಳ ಮೌಲ್ಯಮಾಪನ ಪ್ರಕ್ರಿಯೆಯು ಕಾರ್ಯಶಿಕ್ಷಣ ಮೌಲ್ಯಮಾಪನಕ್ಕಿಂತ ಹೇಗೆ ಭಿನ್ನವಾಗಿದೆ.

ಉದಾಹರಣೆ ಸಹಿತ ನಿಮ್ಮ ಚಿಂತನೆ ಬರೆಯಿರಿ.

**16.3 ಮೌಲ್ಯಮಾಪನದ ವಿಧಾನಗಳು ಮತ್ತು ತಂತ್ರಗಳು.**

ಕಲಿಕಾದಾರರ ಮಾಹಿತಿಯ ಅಭಿವೃದ್ಧಿ ಮತ್ತು ಪ್ರಗತಿಯ ಬಗ್ಗೆ ನೀವು ಮಾಹಿತಿ ಹೇಗೆ ಪಡೆಯುವಿರಿ ಎಂದು ಯಾವಾಗಲಾದರೂ ಯೋಚಿಸದೇ ಇರಬಹುದು. ಆದರೆ ನೀವು ಈ ವಿಧಾನಗಳನ್ನು ನಿಮ್ಮ ಜೀವನದಲ್ಲಿ ಶಿಕ್ಷಕರಾಗಿ ಬಳಸಿರಬಹುದು.

ಮಾಪನದ ವಿಧಾನಗಳು –

ಮಾಪನದ ನಾಲ್ಕು ಮೂಲಭೂತ ವಿಧಾನಗಳಿವೆ.

- ವೈಯುಕ್ತಿಕ ಮಾಪನ – ವೈಯುಕ್ತಿಕ ಮಗು ಮಾಡಿರುವ ಚಟುವಟಿಕೆಯನ್ನು ಗಮನದಲ್ಲಿಟ್ಟುಕೊಂಡು ಮಾಪನಮಾಡುವುದು.

- ಗುಂಪು ಮಾಪನ – ಗುಂಪಿನಲ್ಲಿರುವ ಎಲ್ಲಾ ಮ್ಕಕಳ ಕೆಲಸ, ಅವರ ನಡವಳಿಕೆ ಮತ್ತು ಸಹಕಾರವನ್ನು ಮಾಪನ ಮಾಡುವುದು.
- ಸ್ವ–ಮಾಪನ – ಮಗು ತನ್ನ ಕಲಿಕೆ ಬಗ್ಗೆ ವೈಯುಕ್ತಿಕ ಮೌಲ್ಯಮಾಪನ ಮಾಡುವುದು.
- ಸಹಪಾಠಿಗಳಿಂದ ಮೌಲ್ಯಮಾಪನ (ಪೀರ್ ಮಾಪನ) ಮಕ್ಕಳು ಮತ್ತಿತರ ಮಕ್ಕಳನ್ನು ಅವಲೋಕನ ಮಾಡಬೇಕು ಹಾಗೂ ಅವರು ತಮ್ಮ Feedback ನೀಡುತ್ತಾರೆ. ಅದನ್ನು ಸಮಯದಿಂದ ಸಮಯಕ್ಕೆ ಸ್ಪಷ್ಟೀಕರಣ ನೀಡಬೇಕು ಮಾಪನ ಪ್ರಕ್ರಿಯೆಯಲ್ಲಿ ಸಹಪಾಠಿಗಳಿಂದ ಮಾಪನ ಮಾಡಿಸುವುದು ಮಹತ್ವದ ಪ್ರಕ್ರಿಯೆಯಾಗಿದೆ.

ಮಾಪನದ ಉಪಕರಣ ಮತ್ತು ತಂತ್ರಗಳು

- ಅವಲೋಕನ
- ಸಂದರ್ಶನ
- ಚಿಕ್‌ಲಿಸ್ಟ್
- ಒಟ್ಟುಗೂಡಿಸಿದ ದಾಖಲೆ
- ಪ್ರಶ್ನಾವಳಿ
- ಫೋಟೋ / ಪೋರ್ಟ್‌ಫೋಲಿಯೋ
- ಪ್ರಾಜೆಕ್ಟ್ ವರ್ಕ್
- ಪೈಪೋಟಿ
- ಚಟುವಟಿಕೆಗಳು
- ಗುಂಪು ಕಾರ್ಯ
- ಪರೀಕ್ಷೆ
- ಪ್ರಶ್ನೆಗುಂಪು
- ಚರ್ಚಾಸ್ಪರ್ಧೆ
- ಉಪನ್ಯಾಸ
- ರೇಟಿಂಗ್ ಸ್ಕೇಲು
- ಅಸೈನ್‌ಮೆಂಟ್ ಕಾರ್ಯ

ಮೇಲೆ ನೀಡಿರುವ ಪಟ್ಟಿಯನ್ನು ನೋಡಿದಾಗ ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನವನ್ನು ಅನೇಕ ರೀತಿಯಲ್ಲಿ ಮಾಡಬಹುದೆಂಬುದನ್ನು ನೀವು ಅರ್ಥಮಾಡಿಕೊಂಡಿರುವಿರಿ. ಬನ್ನಿ ನಾವೀಗ ಈ ಕೆಲವು ವಿಧಾನ ಮತ್ತು ತಂತ್ರಗಳನ್ನು ಚರ್ಚಿಸೋಣ.

**16.3.1. ಅವಲೋಕನ:**

ಮಕ್ಕಳ ಬಗ್ಗೆ ಮಾಹಿತಿ ಸಂಗ್ರಹಿಸಲು ಅವಲೋಕನವು ಒಂದು ಜನಪ್ರಿಯ ವಿಧಾನವಾಗಿದೆ. ಮಕ್ಕಳನ್ನು ಅವರ ನೈಸರ್ಗಿಕ ಪರಿಸರದಲ್ಲಿ ಅವಲೋಕನ ಮಾಡಲಾಗುತ್ತದೆ. ವ್ಯಕ್ತಿತ್ವದ ಅಭಿವೃದ್ಧಿಯನ್ನು ಅನೇಕ ಆಯಾಮಗಳ ಅವಲೋಕನದ ಮೂಲಕ ಮಾತ್ರ

ಅವಲೋಕಿಸಬಹುದು. ಅವಲೋಕನವನ್ನು ಎಲ್ಲಾದರೂ ಯಾವುದೇ ಸಮಯದಲ್ಲಿ ಮಾಡಬಹುದು. ಇದನ್ನು ವೈಯುಕ್ತಿಕವಾಗಿ ಅಥವಾ ಗುಂಪಿನಲ್ಲಿ ಮಾಡಬಹುದು.

ಅವಲೋಕನದ ಮುಖಾಂತರ ನೀವು ವಿದ್ಯಾರ್ಥಿಗಳ ನಡವಳಿಕೆ, ಆಸಕ್ತಿ ಮತ್ತು ಸವಾಲುಗಳನ್ನು ತಿಳಿದುಕೊಳ್ಳಬಹುದು. ಅವಲೋಕನದ ಅವಧಿಯಲ್ಲಿ ಅವಲೋಕನಗಳನ್ನು ದಾಖಲಿಸಿ, ಸ್ಪಷ್ಟೀಕರಣ ನೀಡಬಹುದು. ಇಲ್ಲವಾದಲ್ಲಿ ಅವಲೋಕನದ ಸಿಂಧುತ್ವ ನಷ್ಟವಾಗುತ್ತದೆ.

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿ–3

1. ಬುಕ್ ಬೈಂಡಿಂಗ್ ಕಾರ್ಯಾಗಾರದಲ್ಲಿ ನೀವು ವಿದ್ಯಾರ್ಥಿಗಳನ್ನು ಅವಲೋಕಿಸುತ್ತೀರಿ. ಅವರನ್ನು ಅವಲೋಕಿಸುವಾಗ ನೀವು ಯಾವ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳುವಿರಿ. ವಿವರವಾದ ಪಟ್ಟಿಯನ್ನು ತಯಾರಿಸಿ.

______________________________________________

______________________________________________

______________________________________________

### 16.3.2 ಸಂದರ್ಶನ

ನೀವು ಅನೇಕ ಸಂದರ್ಶನಗಳನ್ನು ನೋಡಿರಬಹುದು ಅಥವಾ ಓದಿರಬಹುದು. ಸಂದರ್ಶನ ಮಾಡುವುದು ನಡವಳಿಕೆ, ಮನೋಧೋರಣೆ, ಆಶೋತ್ತರಗಳು ಮತ್ತು ಸಮಸ್ಯೆಗಳನ್ನು ತಿಳಿದುಕೊಳ್ಳುವ ಮುಖ್ಯ ವಿಧಾನವಾಗಿದೆ. ಸಂದರ್ಶನಕ್ಕೆ ತಯಾರಿಯನ್ನು ಮೊದಲೇ ಮಾಡಿಕೊಳ್ಳಬೇಕು. ಪ್ರಶ್ನೆ ಮತ್ತು ಉದ್ದೇಶಗಳನ್ನು ಗುರುತಿಸಬೇಕು. ಮಕ್ಕಳಿಗಾಗಿ ಅವರ ಸ್ನೇಹಿತರು ಮತ್ತು ಅವರ ಪೋಷಕರನ್ನು ಸಹ ಸಂದರ್ಶಿಸಬಹುದು. ಈ ರೀತಿಯಾಗಿ ಮಕ್ಕಳ ಬಗ್ಗೆ ಹೆಚ್ಚುವರಿ ಮಾಹಿತಿಯನ್ನು ಸಂಗ್ರಹಿಸಬಹುದು.

### 16.3.3. ಚೆಕ್ ಲಿಸ್ಟ್

ಷರಾದಲ್ಲಿ ಚಟುವಟಿಕೆ/ನಡವಳಿಕೆ ಬಗ್ಗೆ ವ್ಯವಸ್ಥಿತವಾಗಿ ದಾಖಲಿಸಲಾಗುತ್ತದೆ. ಅವರು ಮಗುವಿನ ವ್ಯಕ್ತಿತ್ವದ ನಿರ್ದಿಷ್ಟ ಆಯಾಮದ ಬಗ್ಗೆ ಗಮನ ಸೆಳೆಯಲು ಸಹಾಯ ಮಾಡುತ್ತಾರೆ.

ಚೆಕ್ ಲಿಸ್ಟನ್ನು ಸುಲಭವಾಗಿ ಮತ್ತು ಶೀಘ್ರವಾಗಿ ಬಳಸಲಾಗುತ್ತದೆ. ವಿದ್ಯಾರ್ಥಿಗಳ ಪ್ರತಿಕ್ರಿಯೆ ಮತ್ತು ಉತ್ತರಗಳನ್ನು ಯಾರೊಬ್ಬರೂ ತಿಳಿದುಕೊಂಡಿರುವುದಿಲ್ಲ. ಆದರೆ ಒಂದು ವೇಳೆ ಷರಾ ಕಾಲಂನ್ನು ಚೆಕ್ ಲಿಸ್ಟ್‌ಗೆ ಸೇರಿಸಿದರೆ ಈ ಸಮಸ್ಯೆಯನ್ನು ಪರಿಹರಿಸಬಹುದು.

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿ.

1. ಕಾರ್ಯಶಿಕ್ಷಣಕ್ಕೆ ಸಂಬಂಧಿಸಿದ ಚಟುವಟಕೆಗಳಲ್ಲಿ ಅವರ ಆಸಕ್ತಿ ಬಗ್ಗೆ ಮಾಹಿತಿ ಪಡೆಯಲು ಸಂಕ್ಷಿಪ್ತವಾದ ಚೆಕ್ ಲಿಸ್ಟ್‌ನ್ನು ಮಾಡಿ.

### 16.3.4 ಒಟ್ಟುಗೂಡಿಸಿದ ದಾಖಲೆಗಳು : (Cumulative Records)

ನೀವು ಒಂದು ವೇಳೆ ಒಟ್ಟುಗೂಡಿಸಿದ ಮತ್ತು ದಾಖಲೆಗಳ ಅರ್ಥವನ್ನು ತಿಳಿದುಕೊಂಡಿದ್ದರೆ ಒಟ್ಟುಗೂಡಿಸಿದ ದಾಖಲೆಗಳ ಅರ್ಥವನ್ನು ಅರ್ಥಮಾಡಿಕೊಳ್ಳುವಿರಿ. ಒಟ್ಟುಗೂಡಿಸಿದ

ದಾಖಲೆಗಳು ಮಕ್ಕಳ ಜೀವನದಲ್ಲಿ ಮುಖ್ಯವಾಗಿ ನಡೆದ ಘಟನೆಗಳ ವಿವರಣಾತ್ಮಕವಾದ ದಾಖಲಾತಿಯಾಗಿದೆ.

ಈ ಘಟನೆಗಳನ್ನು ಅವಲೋಕನದ ಮೂಲಕ ತಿಳಿದುಕೊಳ್ಳಲಾಗುತ್ತದೆ. ಅವರ ಮೂಲಕ ಮಕ್ಕಳ ಸಾಮಾಜಿಕ, ಭಾವನಾತ್ಮಕ, ಇಷ್ಟಗಳು, ಮತ್ತು ಸಂಬಂಧಗಳ ಮಾಹಿತಿಯನ್ನು ನೀವು ಪಡೆದುಕೊಳ್ಳಬಹುದು. ಮಗುವಿನ ಜೀವನದ ಘಟನೆ ಮತ್ತು ಅವನ ನಡವಳಿಕೆಗೆ ಕಾರಣಗಳನ್ನು ತಿಳಿದುಕೊಳ್ಳುವುದು ಸುಲಭ.

ಒಟ್ಟುಗೂಡಿಸಿದ ದಾಖಲೆಗಳು ದೊಡ್ಡ ಪ್ರಮಾಣದಲ್ಲಿ ಕಾರ್ಯ ನಿರ್ವಹಿಸುತ್ತವೆ ಎನ್ನುವುದನ್ನು ನಿಮ್ಮ ಅನುಭವದಿಂದ ನೀವು ತಿಳಿದುಕೊಂಡಿರುವಿರಿ. ತರಗತಿಯಲ್ಲಿ ನಡೆಯುವ ಪ್ರತಿಯೊಂದು ಘಟನೆಯನ್ನು ದಾಖಲಿಸಿ ಅದನ್ನು ಕಾಯ್ದುಕೊಳ್ಳುವುದು ಅಸಾಧ್ಯ. ಒಂದು ಘಟನೆ ಮುಗಿದ ತಕ್ಷಣ ಅದರ ಸೂಕ್ತ ವಿವರಗಳನ್ನು ಬರೆದು ದಾಖಲಿಸಲು ಪ್ರಯತ್ನಿಸಿ.

### 16.3.5. ಪ್ರಶ್ನಾವಳಿ

ಪ್ರಶ್ನಾವಳಿಯು ಅನೇಕ ಪ್ರಶ್ನೆಗಳ ಪಟ್ಟಿಯಾಗಿದ್ದು ಅದನ್ನು ವಿದ್ಯಾರ್ಥಿ ಅಥವಾ ಶಿಕ್ಷಕ ಪೂರ್ಣಗೊಳಿಸುತ್ತಾನೆ. ಇದರ ಮುಖಾಂತರ ನಿರ್ದಿಷ್ಟ ವಿಷಯದ ಬಗ್ಗೆ ವಿದ್ಯಾರ್ಥಿಗಳ ಉತ್ತರವನ್ನು ದಾಖಲಿಸಲಾಗುತ್ತದೆ. ಇದನ್ನು ಗುಂಪಿನಲ್ಲಿ ಅಥವಾ ವೈಯುಕ್ತಿಕವಾಗಿ ಬಳಸಬಹುದು.

ಈ ಸಾಧನವನ್ನು ಬಳಸುವುದಕ್ಕಿಂತ ಮೊದಲು ಪ್ರಶ್ನೆಗಳು ಮತ್ತು ಉದ್ದೇಶಗಳನ್ನು ಗುರುತಿಸಬೇಕು. ಮಕ್ಕಳಿಗೆ ಅವರು ನೀಡುವ ಉತ್ತರ ಯಾರಿಗೂ ಗೊತ್ತಾಗುವುದಿಲ್ಲ ಹಾಗೂ ಅದನ್ನು ದುರುಪಯೋಗ ಮಾಡಿಕೊಳ್ಳುವದಿಲ್ಲ ಎನ್ನುವುದನ್ನು ನಂಬಿಸುವುದು ಅವಶ್ಯಕವಾಗಿದೆ. ಪ್ರಶ್ನೆಗಳ ಭಾಷೆ ಸ್ಪಷ್ಟವಾಗಿರಬೇಕು. ಅಪಮಾನ ಮಾಡುವ, ಅಸ್ಪಷ್ಟ ಮತ್ತು ಪೇಚಾಟ ಉಂಟು ಮಾಡುವ ಪ್ರಶ್ನೆಗಳನ್ನು ಕೇಳಲೇ ಕೂಡದು.

### 16.3.6. ಫೋಟೋಗಳು / ಪೊರ್ಟ್‌ಪೋಲಿಯೊ

ಪೊರ್ಟ್‌ಪೋಲಿಯೋ ಕೆಲವು ಅವಧಿಯಲ್ಲಿ ವಿದ್ಯಾರ್ಥಿಗಳು ಮಾಡಿದ ಕಾರ್ಯಗಳ ಸಂಗ್ರಹಣವಾಗಿದೆ. ಮಕ್ಕಳು ದಿನಚರಿ ಕಾರ್ಯ ಮತ್ತು ಕಾರ್ಯದ ಉತ್ತಮ ನಮೂನೆಯನ್ನು ಮಾಡಿರುತ್ತಾರೆ. ವಸ್ತು ಪ್ರದರ್ಶನಕ್ಕೆ ಬರಹದ ಜೊತೆ ಪೊಟೋವನ್ನು ಹಾಕಿದಾಗ ಪೊರ್ಟ್ ಪೋಲಿಯೋ ಶ್ರೀಮಂತವಾಗುತ್ತದೆ. ವಿದ್ಯಾರ್ಥಿಯ ಕಾಲಾನುಕ್ರಮವಾದ ಅಭಿವೃದ್ಧಿ ಬಗ್ಗೆ ಪೊರ್ಟ್‌ಪೋಲಿಯೋ ಪ್ರಾಥಮಿಕ ದಾಖಲೆಗಳನ್ನು ಲಭ್ಯವಾಗುವಂತೆ ಮಾಡುತ್ತದೆ. ವಿದ್ಯಾರ್ಥಿಯ ಅಭಿವೃದ್ಧಿಗೆ ನಿಖರವಾದ ಸಾಕ್ಷ್ಯವನ್ನು ವರ್ಷದಲ್ಲಿರುವ ಯಾವುದಾದರೂ ಎರಡು ತಿಂಗಳ ಕೆಲಸದ ಕ್ಷಣದರ್ಶನದಿಂದ ಸಾಧಿಸಬಹುದು. ಇದರ ಮೂಲಕ ವಿದ್ಯಾರ್ಥಿಗಳಿಗೆ ತಮ್ಮ ಪ್ರಗತಿಯನ್ನು ಅವಲೋಕಿಸಲು ಅವಕಾಶ ದೊರೆಯುತ್ತದೆ.

ಪೊರ್ಟ್‌ಪೋಲಿಯೋವನ್ನು ತಯಾರಿಸುವಾಗ ನೀವು ಕೆಲವು ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು. ಪೊರ್ಟ್‌ಪೋಲಿಯೋದಲ್ಲಿ ಕೆಲವು ದಾಖಲೆಗಳನ್ನು ಸೇರಿಸುವ ಮುನ್ನ ಅದರ ಸೂಕ್ತತೆ ಬಗ್ಗೆ ಆಲೋಚಿಸಬೇಕು. ವಿದ್ಯಾರ್ಥಿಗಳನ್ನು ಪೊರ್ಟ್‌ಪೋಲಿಯೋಗಾಗಿ ವಸ್ತುಗಳನ್ನು ಸಂಗ್ರಹಿಸುವುದನ್ನು ಒಳಗೊಂಡಿದೆ. ಇವುಗಳನ್ನು ಸರಿಯಾದ ಕ್ರಮದಲ್ಲಿ ಮತ್ತು

ಅನುಕ್ರಮ ದಿನಾಂಕದಲ್ಲಿ ಜೋಡಿಸಿದಾಗ ಒಂದು ವೇಳೆ ಯಾವುದೇ ನಿರ್ದಿಷ್ಟ ಮಾಹಿತಿ ಬೇಕಾದಾಗ ಅದನ್ನು ಶೀಘ್ರವಾಗಿ ಪಡೆಯಬಹುದು ಒಂದು ವೇಳೆ ಸಾಧ್ಯವಾದರೆ ಪ್ರತಿ ಪುಟದಲ್ಲಿ ಚಿಕ್ಕ ವಿಮರ್ಶೆ ಮತ್ತು ದಿನಾಂಕವನ್ನು ಬರೆಯಿರಿ.

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿ–5

ಪೋರ್ಟ್‌ಪೋಲಿಯೋ ಎಂದರೇನು? ಮಾಪನ ಪ್ರಕ್ರಿಯೆಯಲ್ಲಿ ಪೋರ್ಟ್‌ಪೋಲಿಯೋ ಎಷ್ಟರಮಟ್ಟಿಗೆ ಉಪಯುಕ್ತವಾಗಿದೆ?

______________________________________________

______________________________________________

______________________________________________

## 16.3.7 ಯೋಜನೆ ಕಾರ್ಯ (Project work)

ನಿರ್ದಿಷ್ಟ ಗುರಿ ಸಾಧನೆಗಾಗಿ ಯೋಜನೆ ಕಾರ್ಯವನ್ನು ವಿದ್ಯಾರ್ಥಿಗಳಿಗೆ ವೈಯುಕ್ತಿಕವಾಗಿ ಅಥವಾ ಗುಂಪಿಗೆ ನೀಡಲಾಗುತ್ತದೆ. ಯೋಜನೆಗಳ ಮುಖಾಂತರ ಅಂಕಿಅಂಶಗಳನ್ನು ಸಂಗ್ರಹಿಸಲಾಗುತ್ತದೆ ಮತ್ತು ವಿಶ್ಲೇಷಿಸಲಾಗುತ್ತದೆ. ಒಂದು ಅವಧಿಯಲ್ಲಿ ಒಂದಕ್ಕಿಂತ ಹೆಚ್ಚು ಯೋಜನೆಗಳನ್ನು ತೆಗೆದುಕೊಳ್ಳಬಹುದು.

ಸಂಶೋಧನೆ, ಸಂಗ್ರಹಣೆ, ವಿಶ್ಲೇಷಣೆ ಮತ್ತು ಸಾರ್ವತ್ರೀಕರಣ ಮಾಡಲು ಯೋಜನೆಗಳು ಅವಕಾಶ ನೀರುತ್ತವೆ. ಇದು ಜೀವನ ಮತ್ತು ಕಲಿಕೆಯೊಂದಿಗೆ ಸಂಪರ್ಕ ಒದಗಿಸುವ ಅವಕಾಶ ಒದಗಿಸುತ್ತದೆ.

ನಿಮ್ಮ ವಿದ್ಯಾರ್ಥಿಗಳಿಗಾಗಿ ಯೋಜನೆಯನ್ನು ನೀವು ಆಯ್ಕೆಮಾಡಿಕೊಳ್ಳುವಾಗ ಕೆಲವು ಅಂಶಗಳನ್ನು ನೀವು ಗಮನದಲ್ಲಿಟ್ಟುಕೊಳ್ಳಬೇಕು. ಯೋಜನೆಯು ವಿದ್ಯಾರ್ಥಿಗಳ ಮಟ್ಟಕ್ಕೆ ಅನುಗುಣವಾಗಿರಬೇಕು. ಅದು ತುಂಬಾ ಸುಲಭವಾಗಿಯೂ ಹಾಗೂ ತುಂಬಾ ಕಷ್ಟವಾಗಿಯೂ ಇರಕೂಡದು. ಗುಂಪು ಯೋಜನೆಗಳಿಗೆ ಹೆಚ್ಚು ಒತ್ತು ಕೊಡಬೇಕು ಹಾಗೂ ಯೋಜನೆಗಳನ್ನು ಆಯ್ಕೆ ಮಾಡಿಕೊಳ್ಳುವಾಗ ವಿದ್ಯಾರ್ಥಿಗಳನ್ನು ಒಳಗೊಳ್ಳಬೇಕು. ಯೋಜನೆಗೆ ಅಗತ್ಯವಾದ ಸಾಮಗ್ರಿಗಳು ಸುಲಭವಾಗಿ ದೊರೆಯುವಂತಿರಬೇಕು. ಹಾಗೂ ವಿದ್ಯಾರ್ಥಿಗಳಿಗೆ ಅದರಿಂದ ಹಣಕಾಸಿನ ಹೊರೆಯಾಗಕೂಡದು.

ಯೋಜನೆಯ ವ್ಯವಸ್ಥಿತ ದಾಖಲೆಯನ್ನು ಕಾಯ್ದಿಡಬೇಕು ಒಂದು ವೇಳೆ ಸಾಧ್ಯವಾದರೆ ಶಾಲೆಯಲ್ಲಿ ಸಂಪನ್ಮೂಲ ಕೇಂದ್ರವನ್ನು ಮಾಡಿ.

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿ– 6

VI, VII, ಮತ್ತು VIII ನೇ ತರಗತಿಗಳ ಕಾರ್ಯಶಿಕ್ಷಣವನ್ನು ಗಮನದಲ್ಲಿಟ್ಟುಕೊಂಡು ನಿಮ್ಮ ಶಾಲೆಯ ಸ್ಥಿತಿ ಮತ್ತು ವಿದ್ಯಾರ್ಥಿಗಳ ಮನೋಧೋರಣೆಗನುಗುಣವಾಗಿ ಎರಡು ಯೋಜನೆಗಳ ಪಟ್ಟಿಯನ್ನು ತಿಳಿಸಿ. ಇದನ್ನು ಯಾವ ತಿಂಗಳಲ್ಲಿ ಮಾಡಬೇಕು ಮತ್ತು ಅದರ ಉದ್ದೇಶಗಳಾವುವು.

______________________________________________

______________________________________________

## 16.4 ಮಾಪನದಲ್ಲಿ ಸಂಗಡಿಗ ಗುಂಪಿನ ಪಾತ್ರ

ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನವು ಮಗುವಿನ ಪ್ರಗತಿಯನ್ನು ಪೂರ್ಣವಾಗಿ ಗ್ರಹಿಸುತ್ತದೆ. ವಿವಿಧ ಉಪಕರಣ ಮತ್ತು ತಂತ್ರಗಳ್ನು ಬಳಸಲು ಪ್ರಾಮುಖ್ಯತೆ ನೀಡುವಂತೆ ಇದು ವೈವಿಧ್ಯಮಯ ಮೌಲ್ಯಮಾಪಕರನ್ನು ಬೇಡುತ್ತದೆ. ಇದರ ಅರ್ಥ ಶಿಕ್ಷಕರ ಜೊತೆ ವಿದ್ಯಾರ್ಥಿಗಳೊಂದಿಗೆ ಪರಿಚಯವಿರುವವರು ಮೌಲ್ಯಮಾಪಕರಾಗಿ ಕಾರ್ಯನಿರ್ವಹಿಸಬೇಕು. ವಿದ್ಯಾರ್ಥಿಗಳ ಮಾಪನ ಮತ್ತು ಮೌಲ್ಯಮಾಪನ ಮಾಡಿ ಅವರಿಗೆ ಮರುಮಾಹಿತಿ ನೀಡಬೇಕು.

ಇಲ್ಲಿ ಇತರ ಜನರಲ್ಲಿ ಸಂಗಡಿಗ ಗುಂಪಿನ ಪಾತ್ರವನ್ನು ಕಡೆಗಾಣಿಸುವಂತಿಲ್ಲ. ಈ ಘಟಕದಲ್ಲಿ ಸಂಗಡಿಗ ಗುಂಪಿನ ಪಾತ್ರವನ್ನು ಈಗಾಗಲೇ ಚರ್ಚಿಸಲಾಗಿದೆ.

ಕಲಿಕೆ ಪ್ರಕ್ರಿಯೆ ಸಮಯದಲ್ಲಿ ಅವರ ಕೆಲಸದ ಬಗ್ಗೆ ಅವರು ಸಂಗಡಿಗ ಸಹಪಾಠಿಗಳಿಗೆ ವಿದ್ಯಾರ್ಥಿಗಳು ವೈವಿಧ್ಯಮಯವಾದ ಪ್ರಶ್ನೆಗಳನ್ನು ಸಾಮಾನ್ಯವಾಗಿ ಕೇಳುತ್ತಾರೆ.

- ಸುರಭಿ ದಯವಿಟ್ಟು ಹೇಳಿ ಒಂದು ವೇಳೆ ನಾನು ಈ ಬಣ್ಣವನ್ನು ಹಚ್ಚಿದರೆ ಸೂಕ್ತವೋ ಅಥವಾ ಅಲ್ಲವೋ. ಒಂದು ವೇಳೆ ನಾನು ಬೇರೆ ಬಣ್ಣವನ್ನು ಹಚ್ಚಿದರೆ ಅದು ಹೆಚ್ಚು ಆಕರ್ಷಿಕವಾಗುತ್ತದೆಯೇ?
- ಒಂದು ವೇಳೆ ಅವರು ಸೂತ್ರದಗೊಂಬೆಯ ಕಿವಿಗಳನ್ನು ಸರಿಯಾದ ಜಾಗದಲ್ಲಿ ಇಟ್ಟಿದ್ದಾನೆಯೇ ಅಥವಾ ಇಲ್ಲವೋ ಎನ್ನುವುದನ್ನು ದಯವಿಟ್ಟು ಹೇಳಿ. ಕಿವಿಗಳನ್ನು ಮಾಡಲು ಕಾರ್ಡ್ ಬೋರ್ಡ್‌ನ ಬದಲಾಗಿ ಬಟ್ಟೆಗಳ ಚೂರುಗಳನ್ನು ಬಳಸಬೇಕೆ?
- ಮಂಜು ನೋಡಿ ಮಣ್ಣನ್ನು ನಾನು ಸಾಧ್ಯವಾದಷ್ಟು ಪುಡಿಪುಡಿ ಮಾಡಿದ್ದೇನೆ. ಅದನ್ನು ಇನ್ನು ಹೆಚ್ಚು ಪುಡಿ ಮಾಡಬೇಕೆ?

ಈ ಪ್ರಶ್ನೆಗಳನ್ನು ನೀವು ಗಮನಿಸಿರಬಹುದು. ಇಲ್ಲಿ ವಿದ್ಯಾರ್ಥಿಗಳು ಅವರ ಸಂಗಡಿಗ ಗುಂಪಿನ ಸಹಪಾಠಿಗಳನ್ನು ಮಾಪನಮಾಡಿದ್ದಾರೆ. ಶಾಲೆಗಳಲ್ಲಿ ಮಕ್ಕಳು ಅವರ ಸ್ನೇಹಿತರು ಮಾಡಿದ ಕೆಲಸದ ಬಗ್ಗೆ ಷರಾ ಬರೆಯುವ ಅನೇಕ ದೃಷ್ಟಾಂತಗಳಿವೆ. ಉದಾಹರಣೆಗೆ

- ಸಿದ್ದಾರ್ಥ, ನೀನು ತುಂಬಾ ಸುಂದರವಾದ ಮುಖವಾಡ ಮಾಡಿರುವೆ. ಆದರೆ ಇದು ಬಾಳಿಕೆ ಬರುವುದಿಲ್ಲ. ಒಂದು ವೇಳೆ ನೀನು ಚಾರ್ಟ್ ಪೇಪರ್‌ಗೆ ಬದಲಾಗಿ ಕಾರ್ಟರೆಟ್‌ನ್ನು ಬಳಸಿದರೆ ತುಂಬಾ ದೀರ್ಘ ಕಾಲ ಬಾಳಿಕೆ ಬರುತ್ತದೆ.
- ದುಪ್ಪಟ್ಟಾದ ಗಂಟು (Tie) ಮತ್ತು ಡೈ (Die) ತುಂಬಾ ಸುಂದರವಾಗಿದೆ. ಆದರೆ ನೀವು ಏಕೆ ದೊಡ್ಡ ತೂಕಗಳನ್ನು ಕಟ್ಟಿರುವಿರಿ. ಇದು ಈ ದುಪ್ಪಟದಲ್ಲಿ ಖಾಲಿ ಜಾಗವನ್ನು ತೋರಿಸುತ್ತದೆ.
- ಮಾದರಿ (ಮೂರ್ತಿ)ಗೆ ನೀವು ನೇರವಾಗಿ ಏಕೆ ಮೇಣ ಹಚ್ಚುವಿರಿ? ಕಸಬರಿಗೆಯಲ್ಲಿ ಸ್ವಲ್ಪ ಹರಳೆಣ್ಣೆ ಹಾಕಿ ಮತ್ತು ಮಾದರಿಗೆ ಎಣ್ಣೆ ಸೇರಿಸಿ. ಇದರಿಂದ ಕ್ಯಾಂಡಲ್‌ನ್ನು ಹೊರತೆಗೆಯುವ ಸಮಸ್ಯೆ ಬರುವುದೇ ಇಲ್ಲ.

ಮೇಲಿನ ಟೀಕೆಗಳ ಆಧಾರದ ಮೇಲೆ ನೀವು ಏನನ್ನು ನಿರೀಕ್ಷಿಸುವಿರಿ. ನಿಮ್ಮ ಊಹೆ ಸರಿಯಾಗಿದೆ. ಇಲ್ಲಿ ಸಹಪಾಠಿಗಳು ಒಬ್ಬರನ್ನೊಬ್ಬರು ಅನೌಪಚಾರಿಕವಾಗಿ ಮಾಪನ ಮಾಡುತ್ತಿದ್ದಾರೆ. ಅಲ್ಲದೇ ಆ ಕೆಲಸವನ್ನು ಉತ್ತಮ ಪಡಿಸಲು ಸಲಹೆಗಳನ್ನು ನೀಡುತ್ತಿದ್ದಾರೆ. ಈ ಮರುಮಾಹಿತಿಯನ್ನು

ವಿದ್ಯಾರ್ಥಿಗಳ ಮಾಪನ ಪ್ರಕ್ರಿಯೆಗೆ ಬಳಸಿಕೊಳ್ಳಬಹುದು. ಈ ರೀತಿ ಮಾಡಲು ಈ ಕೆಳಕಂಡ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು.

1. ಸಂಗಡಿಗ ಗುಂಪಿನ ಮಾಪನಕ್ಕೆ ಸೂಕ್ತ ಯೋಜನೆಯನ್ನು ತಯಾರಿಸಿ
    - ಯಾವ ಚಟುವಟಿಕೆಯಲ್ಲಿ ಪೀರ್ ಗುಂಪಿನ ಟೀಕೆಯನ್ನು ತೆಗೆದುಕೊಳ್ಳಬೇಕು.
    - ಅವರು ಮಾಡಿರುವ ಟೀಕೆಯ ನಂಬಲರ್ಹತೆ ಏನು?
    - ಯಾವ ಸಹಪಾಠಿ ಉತ್ತಮ ಮತ್ತು ಪಕ್ಷಪಾತವಿಲ್ಲದೇ ವಿಮರ್ಶೆಯನ್ನು ಯಾರ ಮೇಲೆ ಮಾಡುತ್ತಾನೆ.

2. ಸಂಗಡಿಗರ ಗುಂಪಿನವರು ನೀಡಿದ ಟೀಕೆಗಳನ್ನು ದಾಖಲಿಸಿ, ಇದಕ್ಕೆ ನಿಮ್ಮ ಟೀಕೆಗಳನ್ನು ಸೇರಿಸಬೇಡಿ.

3. ಒಂದು ವೇಳೆ ನಿಮಗೆ ಪೀರ್ ಗುಂಪಿನಲ್ಲಿ ವಿವಾದ ಇದೆ ಎಂದು ಅನ್ನಿಸಿದರೆ ಅವರ ಅಭಿಪ್ರಾಯಗಳನ್ನು ಸೇರಿಸುವುದಕ್ಕಿಂತ ಮೊದಲು ಯೋಚಿಸಿ. ಬಹುಶಃ ಅಂಥ ಸಂಗಡಿಗರ ಗುಂಪು ಪಕ್ಷಪಾತದಿಂದ ಕೂಡಿದ ಅಭಿಪ್ರಾಯಗಳನ್ನು ನೀಡುತ್ತಾರೆ.

## 16.5 ಮಾಪನದಲ್ಲಿ ತಂದೆ-ತಾಯಿಯರ ಪಾತ್ರ

ಪಠ್ಯಕ್ರಮದಲ್ಲಿ ಕೆಲವು ಚಟುವಟಿಕೆಗಳು ಮತ್ತು ಆಟಗಳನ್ನು ಅವುಗಳಿದ್ದು ತಂದೆ-ತಾಯಿಯರ ಮುಖಾಂತರ ಮಾಡಿಸಲಾಗುತ್ತದೆ. ಭಾಷೆ, ಸಮಾಜಕಲೆ ಇತ್ಯಾದಿಗಳ ಪರಿವಿಡಿಗೆ ಎಲ್ಲಾ ತಂದೆ-ತಾಯಿಯರು ತಮ್ಮ ಕೊಡುಗೆ ನೀಡಿ ಅದರಿಂದ ಹೆಮ್ಮೆ ಪಡದಿರಬಹುದು. ತಂದೆ-ತಾಯಿಯರನ್ನು ಶಿಕ್ಷಿತರನ್ನಾಗಿ ಮಾಡುವುದು ಅವಶ್ಯಕವಲ್ಲ. ಅನಕ್ಷರಸ್ಥ ತಂದೆ-ತಾಯಿಯರೂ ಬೋಧನೆ, ಕಲಿಕೆ ಪ್ರಕ್ರಿಯೆಗೆ ಸಹಕರಿಸುತ್ತಾರೆ.

ಇದೇ ರೀತಿಯಾಗಿ ಹಳ್ಳಿಯಲ್ಲಿರುವ ಕೆಲಸದವ, ಕುಂಬಾರ, ಬಡಗಿ ಮತ್ತು ಇತರ ಕುಶಲಕರ್ಮಿಗಳು ವಿದ್ಯಾರ್ಥಿಗಳಿಗೆ ಸಹಾಯ ಮಾಡಬಹುದು ಹಾಗೂ ಮಹತ್ವದ ಕಾರ್ಯ ಮಾಡುವಲ್ಲಿ ಮತ್ತು ಸುಂದರ ವಸ್ತುಗಳನ್ನು ರೂಪಿಸುವಲ್ಲಿ ಸಂತೋಷ ಪಡಬಹುದು. ಹಳ್ಳಿಯಲ್ಲಿರುವ ಹಿರಿಯರಿಗಿಂತ ಬೇರೆ ಯಾರು ಮಣ್ಣಿನ ಆಟದ ಗೊಂಬೆ ಮಾಡುವಲ್ಲಿ ಉತ್ತಮ ಮೂಲವಾಗಿದ್ದಾರೆ. ಹಿರಿಯರು ಸ್ಥಳೀಯ ಪರಿಸರದ ಬಗ್ಗೆ ಸೂಕ್ತ ಮಾಹಿತಿ ನೀಡುತ್ತಾರೆ.

- ನೀವು ವಿದ್ಯಾರ್ಥಿಗಳನ್ನು ಪ್ರವಾಸಕ್ಕೆ ಕರೆದುಕೊಂಡು ಹೋಗುವುದು ಸ್ವಲ್ಪ ಕಷ್ಟ ಎಂದು ಭಾವಿಸುತ್ತೀರಿ. ನೀವು ಈ ಪ್ರವಾಸವನ್ನು ರದ್ದುಗೊಳಿಸುವಿರಾ? ಅಥವಾ ಕೆಲವು ತಂದೆ-ತಾಯಿಯರ ಸಹಕಾರ ಪಡೆಯಲು ಬಯಸುವಿರಾ?
- ನಿಮ್ಮ ಸ್ಥಳೀಯ ಪರಿಸರದಲ್ಲಿ ನೀವು ಗುರುತಿಸಲಾಗದ ಅನೇಕ ಮರಗಿಡಗಳಿವೆ. ಬಹುಶಃ ಇತರ ಶಿಕ್ಷಕಕರೂ ಅವುಗಳನ್ನು ಗುರುತಿಸಲಾರರು. ಅವುಗಳನ್ನು ಗುರುತಿಸಲು ತಂದೆ-ತಾಯಿಯರ ಸಹಕಾರವನ್ನು ಪಡೆಯಲು ಹಿಂಜರಿಯಬೇಡಿ.
- ತಂದೆ-ತಾಯಿಯರು/ಸಹೋದರರು/ಸಹೋದರಿಯರು ಅಥವಾ ಸಂಬಂಧಿಗಳು ಯೋಗ ಚಟುವಟಿಕೆಯಲ್ಲಿ ಪರಿಣಿತರೆಂದು ನಿಮಗೆ ಹೇಗೋ ಗೊತ್ತಾಗಿದೆ. ನೀವು ಅವರ ಪರಿಣಿತಿಯನ್ನು ಬಳಸಿಕೊಳ್ಳಬಹುದು.

- ಜಾತ್ರೆ ಮತ್ತು ಹಬ್ಬಗಳನ್ನು. ಸಂಘಟಿಸುವಲ್ಲಿ ತಂದೆ-ತಾಯಿಯರು ಹೆಚ್ಚು ಸಹಾಯ ಮಾಡುತ್ತಾರೆ. ಸಾಮಾಜಿಕ ಹಿನ್ನಲೆಯನ್ನು ಗಮನದಲ್ಲಿಟ್ಟುಕೊಂಡು ನೀವು ಅವರ ಸಹಕಾರ ಮತ್ತು ಕ್ಷೇತ್ರವನ್ನು ನಿರ್ಧರಿಸಬಹುದು.

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿ – 7

1. ಕಾರ್ಯಶಿಕ್ಷಣಕ್ಕೆ ಸಂಬಂಧಿಸಿದ ಚಟುವಟಿಕೆಗಳಲ್ಲಿ ಸಂಗಡಿಗ ಗುಂಪಿನ ಪಾತ್ರದ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು ಬರೆಯಿರಿ.

_______________________________________________

_______________________________________________

_______________________________________________

2. "ಅನಕ್ಷರಸ್ಥ ತಂದೆ-ತಾಯಿಯರು ಮಾಪಕರಾಗಿ ಪಾತ್ರ ವಹಿಸಲಾರರು" ಇದನ್ನು ನೀವು ಎಷ್ಟರ ಮಟ್ಟಿಗೆ ಒಪ್ಪುವಿರಿ ಅಥವಾ ಬಿಡುವಿರಿ ಎನ್ನುವುದನ್ನು ತಿಳಿಸಿ. ಕಾರಣ ಸಮೇತ ಉತ್ತರ ನೀಡಿ.

## 16.6; ವಿದ್ಯಾರ್ಥಿಗಳಿಗೆ ಮತ್ತು ತಂದೆ-ತಾಯಿಯರಿಗೆ ಪ್ರಗತಿಯ ವರದಿಯನ್ನು ಹೇಗೆ ತಿಳಿಸುವುದು

ಮಕ್ಕಳು ಮತ್ತು ಅವರ ತಂದೆ-ತಾಯಿಯವರಿಗೆ ಮಕ್ಕಳ ಪ್ರಗತಿಯನ್ನು ತಿಳಿಸುವುದು ಮುಖ್ಯವಾಗಿದೆ. ಒಂದು ವೇಳೆ ನೀವು ಮಾಪನದ ಉದ್ದೇಶಗಳನ್ನು ಜ್ಞಾಪಿಸಿಕೊಂಡರೆ ವಿದ್ಯಾರ್ಥಿಗಳು ಮತ್ತು ಅವರ ತಂದೆ-ತಾಯಿಯವರಿಗೆ ಪ್ರಗತಿಯನ್ನು ತಿಳಿಸದ ತನಕ ಮಾಪನದ ಉದ್ದೇಶ ಪೂರ್ಣವಾಗುವುದಿಲ್ಲ.

ಮಕ್ಕಳಿಗೆ ಮತ್ತು ಅವರ ತಂದೆ-ತಾಯಿಯರಿಗೆ ಅವರ ಪ್ರಗತಿಯನ್ನು ತಿಳಿಸಲು ಕೆಲವು ಕಾರಣಗಳಿವೆ. ಅವುಗಳೆಂದರೆ,

- ವಿದ್ಯಾರ್ಥಿಗಳ ವೈಯುಕ್ತಿಕ ಮತ್ತು ವಿಶೇಷ ಸಾಧನೆ, ಅಗತ್ಯತೆ ಮತ್ತು ನಡವಳಿಕೆ ಬಗ್ಗೆ ತಂದೆ-ತಾಯಿಯರಿಗೆ ಹೇಳುವುದು.
- ಸೂಕ್ತ ಸ್ಥಿತಿಗಳನ್ನು ಮತ್ತು ಕಲಿಕೆಯ ಸ್ಥಿತಿಗಳ ಮಾರ್ಗವನ್ನು ಯೋಜಿಸುವುದು.
- ತಂದೆ-ತಾಯಿಯರಿಗೆ ಮಕ್ಕಳ ಆಸಕ್ತಿ, ಸಾಮರ್ಥ್ಯ ಮತ್ತು ಮನೋಧೋರಣೆಯನ್ನು ಗುರುತಿಸಲು ಸಹಾಯ ಮಾಡುವುದು.
- ಸ್ವ-ಮಾಪನ ಬಗ್ಗೆ ತಂದೆ –ತಾಯಿಯರು ಮತ್ತು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದು.
- ಮಾಪನದ ಪ್ರಕ್ರಿಯೆ ಮತ್ತು ಅದನ್ನು ಮಕ್ಕಳ ಸ್ನೇಹಿಯನ್ನಾಗಿ ಮಾಡುವ ಬಗ್ಗೆ ಇರುವ ಭಯವನ್ನು ಕನಿಷ್ಠಗೊಳಿಸುವುದು.

### 16.6.1 ಸಂಪರ್ಕದ ವಿಧಾನಗಳು

ಸಾಂಪ್ರದಾಯಿಕವಾಗಿ ತಂದೆ-ತಾಯಿಯರಿಗೆ ಶಾಲೆಯಿಂದ ಮಕ್ಕಳ ಬಗ್ಗೆ ಮಾಹಿತಿ ಪಡೆಯಲು ಕರೆಯಲಾಗುತ್ತದೆ. ನಿಮ್ಮ ಊಹೆ ಸರಿ. ಇದನ್ನು ವರದಿ ಕಾರ್ಡ್ ಅಥವಾ ಪ್ರಗತಿ ಪ್ರತಿಬಿಂಬ ಎಂದು ಕರೆಯಲಾಗುತ್ತದೆ. ಪ್ರಗತಿ ಪ್ರತಿಬಿಂಬದಲ್ಲಿ ವರ್ಷದಲ್ಲಿ ಮೂರು ಬಾರಿ ನಡೆಯುವ ಪರೀಕ್ಷೆಯಲ್ಲಿ ಮಕ್ಕಳು ಎಷ್ಟು ಅಂಕಗಳನ್ನು ಗಳಿಸಿದ್ದಾರೆ ಎನ್ನುವುದನ್ನು ಲೆಕ್ಕಚಾರ ಮಾಡಲಾಗುತ್ತದೆ. ಕೆಲವು ಸಂದರ್ಭದಲ್ಲಿ ವಿದ್ಯಾರ್ಥಿಗಳ ಹಾಜರಾತಿ ಅವರ ನಡತೆ, ಸ್ವಚ್ಛತೆ ಮುಂತಾದವುಗಳನ್ನು ವಿಮರ್ಶಿಸಲಾಗುತ್ತದೆ. ಆದರೆ ಇದು ಸಾಕಾಗುವುದಿಲ್ಲ.

ಏಕೆಂದರೆ ನಿರಂತರ ಮತ್ತು ವ್ಯಾಪಕ ಮಾಪನವು ನಿರಂತರವಾದ ಪ್ರಕ್ರಿಯೆಯಾಗಿದೆ. ಆದ್ದರಿಂದ ಇದನ್ನು ತಂದೆ-ತಾಯಿಯರಿಗೆ ತಿಳಿಸಲು ಅನೇಕ ಮಾರ್ಗಗಳಿವೆ. ಸಾಮಾನ್ಯವಾಗಿ ತಂದೆ-ತಾಯಿಯರು ತಮ್ಮ ಮಕ್ಕಳು ಶಾಲೆಯಲ್ಲಿ ಏನನ್ನು ಮಾಡುತ್ತಿದ್ದಾರೆ ಮತ್ತು ಅವರು ಏನನ್ನು ಕಲಿಯುತ್ತಿದ್ದಾರೆ ಎನ್ನುವುದನ್ನು ತಿಳಿದುಕೊಳ್ಳಲು ತುಂಬಾ ಉತ್ಸುಕರಾಗಿರುತ್ತಾರೆ. ಇತರ ಮಕ್ಕಳು ಹೇಗೆ ತಮ್ಮ ಬುದ್ಧಿವಂತಿಕೆಯನ್ನು ವ್ಯಕ್ತಪಡಿಸುತ್ತಾರೆ. ತಮ್ಮ ಮಕ್ಕಳಿಗಿಂತ ಇತರ ಮಕ್ಕಳ ಪ್ರಗತಿ ಹೇಗೆ ಭಿನ್ನವಾಗಿದೆ. ಸಾಮಾನ್ಯವಾಗಿ ಶಿಕ್ಷಕರು ಇಂಥ ವಿಮರ್ಶೆಗಳನ್ನು ಮಾಡುವುದುಂಟು. ಒಳ್ಳೆಯದು, ಅತ್ಯಂತ ಒಳ್ಳೆಯದು ಮತ್ತು ಇನ್ನು ಹೆಚ್ಚು ಪ್ರಯತ್ನ ಪಡುವ ಅಗತ್ಯತೆ ಇದೆ. ಇತ್ಯಾದಿ ಇದು ಸಾಕಾಗುತ್ತದೆ ಎಂದು ನೀವು ಪರಿಗಣಿಸುವಿರಾ?

ಸಾಧ್ಯವಾದಷ್ಟು ಮಟ್ಟಿಗೆ ತಂದೆ-ತಾಯಿಯರಿಗೆ ಸ್ಪಷ್ಟ ಭಾಷೆಯಲ್ಲಿ ಸರಳ ಪದಗಳಲ್ಲಿ /ಹೇಳಿಕೆಯಲ್ಲಿ ತಿಳಿಸಬೇಕು.

- ಮಗು ಏನನ್ನು ಮಾಡಬಹುದು? ಅವನು ಏನನ್ನು ಮಾಡಲು ಬಯಸುತ್ತಾನೆ? ಇದನ್ನು ಮಾಡುವಾಗ ಏನಾದರೂ ತೊಂದರೆ ಇದೆಯಾ?
- ಮಗು ಹೇಗೆ ಕಲಿತಿದೆ?
- ಅವರಿಂದ ಮಾಡಲಾದ ಕೆಲಸದ ನಮೂನೆಯನ್ನು ತೋರಿಸಿ.
- ಸಹಕಾರ, ಜವಾಬ್ದಾರಿ, ಪ್ರಾರಂಭಿಸುವಿಕೆ, ಮೃದುಧೋರಣೆ ಮತ್ತು ಆಸಕ್ತಿಗಳ ಬಗ್ಗೆ ಮಾತನಾಡುವುದು.
- ತಂದೆ-ತಾಯಿಯರಿಗೆ ಯಾವ ಮಾರ್ಗದಲ್ಲಿ ಸಹಾಯ ಮಾಡಬಹುದು ಎನ್ನುವುದಕ್ಕೆ ಸಲಹೆ ನೀಡಿ.
- ಮಕ್ಕಳು ಮನೆಯಲ್ಲಿ ಹೇಗೆ ಇರುತ್ತಾರೆ. ಕೆಲಸ ಮಾಡುವಾಗ ಹೇಗೆ ಇರುತ್ತಾರೆ. ಮತ್ತು ಮನೆಯಲ್ಲಿ ಅವರ ನಡವಳಿಕೆ ಬಗ್ಗೆ ತಂದೆ-ತಾಯಿಯರಿಗೆ ಪ್ರಶ್ನೆ ಕೇಳಿ.

### 16.6.2 ಸಂಪರ್ಕದ ಅಂಶಗಳು

ತಂದೆ-ತಾಯಿಯರಿಗೆ ಈ ಕೆಳಗಿನ ಅಂಶಗಳಿಗೆ ಸಂಬಂಧಿಸಿದ ಸಂಭಾಷಣೆಯನ್ನು ಕಳಿಸಿ.

ವಿದ್ಯಾರ್ಥಿಗಳ ಹೆಸರು-

ವಿಭಾಗ –

ಚಟುವಟಿಕೆಯ ಹೆಸರು –

- ಉಪಯೋಗಿಸಲಾದ ಸಮಯ (ವಿದ್ಯಾರ್ಥಿಗಳಿಂದ)
- ಬಳಸಲಾದ ಉಪಕರಣಗಳ ಉಪಯುಕ್ತತೆ
- ಬಳಸಲಾದ ಸಾಮಗ್ರಿಗಳ ಉಪಯುಕ್ತತೆ.
- ಬಳಸಲಾದ ವಿಧಾನ ಅಥವಾ ತಂತ್ರಜ್ಞಾನ.
- ಸೃಷ್ಟಿಸಲಾದ ವಸ್ತುಗಳ ಉಪಯೋಗಗಳು.
- ಮೂಲಭೂತ ವೈಜ್ಞಾನಿಕ ತತ್ವ.
- ಗುಂಪಿನಲ್ಲಿ ಸಹಕಾರ.

- ಕೆಲಸ ಮಾಡಲು ತಯಾರಾಗಿರುವುದು.
- ಸುರಕ್ಷಿತವಾಗಿ ಕೆಲಸ ಮಾಡುವ ವಿನ್ಯಾಸ.
- ಕೆಲಸ ಮಾಡುವ ಸ್ಥಳದ ಜೋಡಣೆ .
- ಉತ್ಪನ್ನದ ಪ್ರಸ್ತುತ ಪಡಿಸುವಿಕೆ.

ಒಂದು ವೇಳೆ ಚಟುವಟಿಕೆಯು ಉತ್ಪಾದಿಸುತ್ತಿರುವ ಉತ್ಪನ್ನದ ಬದಲಾಗಿ ಸೇವೆಯ ಬಗ್ಗೆ ಇದ್ದಾಗ ಮೌಲ್ಯಗಳು ಮತ್ತು ಧೋರಣೆಗೆ ಸಂಬಂಧಿಸಿದ ಅಂಶಗಳಿಗೆ ಗಮನ ನೀಡಬೇಕು.

### 16.7. ಸಮಾಪ್ತಿಗೊಳಿಸೋಣ

ಮೌಲ್ಯಮಾಪನವು ಬೋಧನೆ ಮತ್ತು ಕಲಿಕೆಯ ಸಮಗ್ರ ಭಾಗವಾಗಿದೆ. ಅವುಗಳ ಪ್ರಕ್ರಿಯೆ ಪಠ್ಯಕ್ರಮದುದ್ದಕ್ಕೂ ನಿರಂತರವಾಗಿದೆ. ನಿರಂತರ ಮತ್ತು ವ್ಯಾಪಕತ್ವದ ಸಾಂಪ್ರದಾಯಿಕ ರೂಪದ ಮೌಲ್ಯಮಾಪನವನ್ನು ಕಡೆಗಾಣಿಸಲಾಗಿದೆಯೇ? ಬೋಧನೆ ಮತು ಕಲಿಕೆಯನ್ನು ಪರೀಕ್ಷಿಸಲು ಗರಿಷ್ಟ ಎಷ್ಟು ಪರೀಕ್ಷೆಗಳನ್ನು ನಡೆಸಬೇಕು ಎನ್ನುವುದರ ಬಗ್ಗೆ ನೀವು ಅನುಭವವನ್ನೂ ಹೊಂದಿರುವಿರಿ. ಆದರೆ ಬರಹ ರೂಪದ ಪರೀಕ್ಷೆಗೆ ಮಿತಿ ಮೀರಿದ ಪ್ರಾಮುಖ್ಯತೆಯನ್ನು ನೀಡಲಾಗುತ್ತದೆ. ಮೌಲ್ಯಮಾಪನದ ವಿಧಾನ ಸಮಯದೊಂದಿಗೆ ಬದಲಾಗಿದೆ. ಈಗ ನಿರಂತರ ಪ್ರಕ್ರಿಯೆ ವಿಧಾನ ಮಾಪನವನ್ನು ಒಪ್ಪಿಕೊಳ್ಳಲಾಗಿದೆ ಹಾಗೂ ಅಭಿವೃದ್ಧಿ ಮತ್ತು ಮಾಪನದೊಂದಿಗೆ ಸಂಬಂಧಿಸಿದ ಎಲ್ಲಾ ಆಯಾಮಗಳನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ವಿದ್ಯಾ ಶಾಲೆಯ ಕ್ಷೇತ್ರದ ಜೊತೆಗೆ ತಾವು ಇಷ್ಟ ಪಡುವ ಕ್ಷೇತ್ರಗಳನ್ನು ಪರಿಗಣಿಸುವುದು ಮಹತ್ವದ ಅಂಶವಾಗಿದೆ. ಒಂದು ತಂತ್ರಕ್ಕೆ ಬದಲಾಗಿ ಅನೇಕ ತಂತ್ರಗಳನ್ನು ಮೌಲ್ಯಮಾಪನದ ಮಾಧ್ಯಮವನ್ನಾಗಿ ಬಳಸುವುದು ಮತ್ತೊಂದು ಮಹತ್ವದ ಅಂಶವಾಗಿದೆ.ಉದಾಹರಣೆಗೆ ಒಂದು ಕಡೆ ಮಾಪನದ ಆಧಾರ ಅವಲೋಕನವಾದರೆ ಮತ್ತೊಂದು ಕಡೆ ಅವನು ಸೃಷ್ಟಿಸಿದ ಉತ್ಪನ್ನಗಳು, ಯೋಜನೆಯಲ್ಲಿ ಅವನ ಒಳಗೊಳ್ಳುವಿಕೆ ಮತ್ತು ಪೋರ್ಟ್‌ಪೋಲಿಯೋ ಬಗ್ಗೆ ಪ್ರಶ್ನೆ ಕೇಳುವುದರ ಮೂಲಕ ಅವನ ಸಾಧನೆಗಳ ಮಟ್ಟವನ್ನು ಪ್ರಸ್ತುತಪಡಿಸುವುದಾಗಿದೆ. ಈ ಘಟಕದ ಮುಖಾಂತರ ಮಾಪನದ ಪ್ರಸ್ತುತರೂಪದ ಬಗ್ಗೆ ತಿಳುವಳಿಕೆಯನ್ನು ಬೆಳೆಸಿಕೊಂಡಿರುವಿರಿ. ಮಾಪನ ಮತ್ತು ಮೌಲ್ಯಮಾಪನಗಳೆರಡೂ  ಒಂದೇ ಅಲ್ಲ. ಆದರೆ ಅವರೆಡೂ ಒಂದಕ್ಕೊಂದು ಪೂರಕವಾಗಿವೆ ಎನ್ನುವುದನ್ನು ತಿಳಿದುಕೊಂಡಿರುವಿರಿ. ವ್ಯಾಪಕ ಮೌಲ್ಯಮಾಪನವು ಶಿಕ್ಷಕರ ಜೊತೆ ಮಾಪನವನ್ನು ನಿರಂತರವಾಗಿ ಸಂಬಂಧಿಸಿದೆ. ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ಸಂಗಡಿಗರ ಗುಂಪುಗಳು, ತಂದೆ–ತಾಯಿಯರು ಮತ್ತು ವಿದ್ಯಾರ್ಥಿಗಳನ್ನು ಒಳಗೊಳ್ಳಬೇಕು ಎನ್ನುವುದನ್ನು ನೀವು ತಿಳಿದುಕೊಂಡಿರುವಿರಿ. ಅಂತಿಮವಾಗಿ ಕೇವಲ ಮಾಪನ ಮತ್ತು ಮೌಲ್ಯಮಾಪನಗಳು ಸಾಕಾಗುವುದಿಲ್ಲ. ಆದರೆ ಸಮಯದಿಂದ ಸಮಯಕ್ಕೆ ಮಕ್ಕಳ ಪ್ರಗತಿಯನ್ನು ತಂದೆ–ತಾಯಿಯರಿಗೆ ತಿಳಿಸಬೇಕು ಎನ್ನುವ ತಿಳುವಳಿಕೆಯ್ನು ಬೆಳೆಸಿಕೊಂಡಿರುವಿರಿ.

## 16.8 ಅಧ್ಯಯನ ಮತ್ತು ಪರಮಾರ್ಶನ ಸಲಹೆಗಳು


1. National curriculam Frame work 2005, National Educational Research and Training.
2. Creation (Srijan) (2009) sharda kumara, District Institute of Education and Training (DIET) Keshav puram, Dehli.
3. Source Book on Assessment for Class I-V NCERT New Delhi.
4. Reflections on school Education Vol.1 SCERT New Delhi.


**ಸಾರಾಂಶ**

## 16.9 ಘಟಕ ಅಂತ್ಯದ ಪ್ರಶ್ನೆಗಳು

1. ಮಾಪನ ಮತ್ತು ಮೌಲ್ಯಮಾಪನಗಳ ನಡುವಿನ ವ್ಯತ್ಯಾಸ ಮಾಡುವುದರ ಮೂಲಕ ಮೌಲ್ಯಮಾಪನವನ್ನು ವ್ಯಾಖ್ಯಾನಿಸಿ.
2. ನಿಮ್ಮ ಅನುಭವದ ಆಧಾರದ ಮೇಲೆ ಪ್ರಸ್ತುತ ರೂಪದ ಮಾಪನ ಮತ್ತು ಮೌಲ್ಯಮಾಪನವನ್ನು ಸಾಂಪ್ರದಾಯಿಕ ರೂಪದ ಮೌಲ್ಯಮಾಪನಕ್ಕೆ ಹೋಲಿಕೆ ಮಾಡಿ. ಕನಿಷ್ಠ ಪಕ್ಷ 6 ವ್ಯತ್ಯಾಸಗಳನ್ನು ತಿಳಿಸಿ.
3. ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ಶಿಕ್ಷಕರನ್ನು ಹೊರತುಪಡಿಸಿ ಬೇರೆ ಯಾರನ್ನು ಸೇರಿಸಿಕೊಳ್ಳಬೇಕು? ಏಕೆ?
4. ಗುಂಪು ಮೌಲ್ಯಮಾಪನ ಎಂದರೇನು? ಕಾರ್ಯಶಿಕ್ಷಣದಲ್ಲಿ ಅದರ ಉಪಯೋಗಗಳನ್ನು ತಿಳಿಸುವ ಯಾವುದಾದರೂ ಅಂಶಗಳನ್ನು ತಿಳಿಸಿ.
5. ಹಳೆ/ಉಪಯೋಗಿಸಲಾದ ವೃತ್ತ ಪತ್ರಿಕೆಗಳನ್ನು ಬಳಸಿಕೊಂಡು ನಿಮ್ಮ ವಿದ್ಯಾರ್ಥಿಗಳು ಪೊಟ್ಟಗಳನ್ನು ಮಾಡುತ್ತಾರೆ. ಅವರ ಮೌಲ್ಯಮಾಪನಕ್ಕೆ ಯಾವ ವಿಧಾನವನ್ನು ನೀವು ಬಳಸುವಿರಿ ಮತ್ತು ಏಕೆ?
6. ಏಳನೇ ತರಗತಿ ಮಕ್ಕಳು ಶಾಲಾ ಆವರಣದಲ್ಲಿ ಅಲಂಕಾರ ಮಾಡುವಲ್ಲಿ ನಿರತರಾಗಿದ್ದಾರೆ. ನೀವು ಮೌಲ್ಯಮಾಪನಕ್ಕಾಗಿ ಅವಲೋಕನ ಮಾಡುವಾಗ ಯಾವ ಅಂಶಗಳನ್ನು ಗಮನಿಸಬೇಕು?

******